ಸೋಮವಾರ, ಜುಲೈ 8, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಕ್ತಿ ಪರವಶ ಕೋಲ್ಕತ್ತದಲ್ಲಿ ಭಾನುವಾರ ನಡೆದ ಇಸ್ಕಾನ್ ರಥಯಾತ್ರೆಯಲ್ಲಿ ನಟ ರುಕ್ಮಿಣಿ ಮೈತ್ರಾ ಅವರು ಕಾಣಿಸಿಕೊಂಡಿದ್ದು ಹೀಗೆ...

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ಹರೆಯದವರನ್ನು ರಕ್ಷಿಸಲು ಸಹಾಯ ಮಾಡಲು, Instagram ನ ಟೂಲ್‌ಗಳಾದ ಸೂಕ್ಷ್ಮ ಕಂಟೆಂಟ್ ನಿಯಂತ್ರಣದಂತದ್ದನ್ನು ಬಳಸಿ, ಅವು ಹರೆಯದವರ ಎಲ್ಲಾ ಖಾತೆಗಳು ಡೀಫಾಲ್ಟ್ ಆಗಿ ಕಡಿಮೆ ಸೂಕ್ಷ್ಮ ಕಂಟೆಂಟ್ ನೋಡುವಂತೆ ಸೆಟ್ ಮಾಡುತ್ತವೆ.

instagram.com/familytools ಇಲ್ಲಿ ನಮ್ಮ 50+ ಟೂಲ್‌ಗಳೊಂದಿಗೆ ಪ್ರಾರಂಭಿಸಿ

ಡೆಂಗಿ ಜ್ವರ: ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಗದಗ: ಡೆಂಗಿ ಜ್ವರದಿಂದ ಬಳಲುತ್ತಿದ್ದ ತಾಲ್ಲೂಕಿನ ಶಿರುಂಜ ಗ್ರಾಮದ ಬಾಲಕ ಚಿರಾಯು ಹೊಸಮನಿ (5) ಧಾರವಾಡದ ಎಸ್‌ಡಿಎಂ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾನೆ.

‘ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ (ಜಿಮ್ಸ್) ವೈದ್ಯರು ಸೂಕ್ತ ಸಮಯದಲ್ಲಿ ಚಿಕಿತ್ಸೆ ಕೊಡದೇ ನಿರ್ಲಕ್ಷ್ಯ ತೋರಿದ್ದರಿಂದಲೇ ಮಗು ಮೃತಪಟ್ಟಿತು’ ಎಂದು ಪೋಷಕರು ಆರೋಪಿಸಿದ್ದಾರೆ.

‘ಮಗುವಿಗೆ ಜ್ವರ, ವಾಂತಿ ಆಗಿತ್ತು. ಶಿರಹಟ್ಟಿ ಆಸ್ಪತ್ರೆಯಲ್ಲಿ ತೋರಿಸಿದಾಗ ಡೆಂಗಿ ಆಗಿದೆ ಎಂದರು. ಜುಲೈ 4ರಂದು ಸಂಜೆ 6ಕ್ಕೆ ಜಿಮ್ಸ್‌ಗೆ ಹೋದೆವು. ತುರ್ತು ಸಂದರ್ಭದಲ್ಲೂ ವೈದ್ಯರು ಐಸಿಯುಗೆ ಅಡ್ಮಿಟ್ ಮಾಡಿಕೊಂಡು, ಚಿಕಿತ್ಸೆ ನೀಡಲಿಲ್ಲ’ ಎಂದು ಪೋಷಕರು ದೂರಿದ್ದಾರೆ.

24 ಗಂಟೆಗಳಲ್ಲಿ 954 ಪರೀಕ್ಷೆ • ಈ ವರ್ಷ ಇಲ್ಲಿಯವರೆಗೆ 7,165 ಪ್ರಕರಣ

ಡೆಂಗಿ: ಹೊಸದಾಗಿ 159 ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಭಾನುವಾರ 159 ಡೆಂಗಿ ಪ್ರಕರಣಗಳು ದೃಢಪಟ್ಟಿವೆ.

ಡೆಂಗಿ ಪತ್ತೆ ಸಂಬಂಧ 24 ಗಂಟೆಗಳಲ್ಲಿ 954 ಪರೀಕ್ಷೆಗಳನ್ನು ನಡೆಸಲಾಗಿತ್ತು. ಹೊಸದಾಗಿ ಡೆಂಗಿ ಪೀಡಿತರಾದವರಲ್ಲಿ ಮೂವರು ಒಂದು ವರ್ಷದೊಳಗಿನವರಾದರೆ, 48 ಮಂದಿ ಒಂದರಿಂದ 18 ವರ್ಷದೊಳಗಿನವರಾಗಿದ್ದಾರೆ. 108 ಮಂದಿ 18 ವರ್ಷ ಮೇಲ್ಪಟ್ಟವರಾಗಿದ್ದಾರೆ.

ಸದ್ಯ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 301 ಡೆಂಗಿ ಪೀಡಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈ ವರ್ಷ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 7,165ಕ್ಕೆ ಏರಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ಈವರೆಗೆ ಆರು ಮಂದಿ ಮೃತಪಟ್ಟಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ 80 ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಒಟ್ಟು ಪ್ರಕರಣಗಳ ಸಂಖ್ಯೆ 1,988ಕ್ಕೆ ತಲುಪಿದೆ. ಡೆಂಗಿ ಪೀಡಿತರಲ್ಲಿ ಸದ್ಯ 130 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಮುಖ್ಯಾಂಶಗಳು

- ಡೆಂಗಿ ಪರೀಕ್ಷೆ ಮಾಡಿಸಿ ಕೊಳ್ಳುವವರ ಸಂಖ್ಯೆ ಏರಿಕೆ
- ಸಣ್ಣ ಮಕ್ಕಳಲ್ಲಿ ಮತ್ತು 18 ವರ್ಷ ಒಳಗಿನವರಲ್ಲಿಯೂ ಕಾಣಿಸಿಕೊಂಡ ಸೋಂಕು
- ಡೆಂಗಿಯಿಂದಾಗಿ ಈವರೆಗೆ ಮೃತಪಟ್ಟವರ ಸಂಖ್ಯೆ ಆರು

‘ಪ್ಯಾರಸಿಟಮಾಲ್’ ದಾಸ್ತಾನು

‘ಡೆಂಗಿ ಜ್ವರ ನಿಯಂತ್ರಿಸಲು ಸಹಕಾರಿಯಾಗಿರುವ ‘ಪ್ಯಾರಸಿಟಮಾಲ್’ ಅಗತ್ಯ ಪ್ರಮಾಣದಲ್ಲಿ ದಾಸ್ತಾನು ಇದೆ. ವೈದ್ಯಕೀಯ ಸಂಸ್ಥೆಗಳಿಂದ 8.72 ಕೋಟಿ ಪ್ಯಾರಸಿಟಮಾಲ್ 650 ಎಂ.ಜಿ ಮಾತ್ರೆಗಳಿಗೆ ಬೇಡಿಕೆ ಬಂದಿತ್ತು. ಈ ಔಷಧವನ್ನು ಸರಬರಾಜು ಮಾಡಲಾಗಿದೆ. ರಾಜ್ಯದ ಎಲ್ಲ ಔಷಧ ಉಗ್ರಾಣಗಳಲ್ಲಿ ಜುಲೈ 4ಕ್ಕೆ ಅನ್ವಯಿಸಿದಂತೆ 3.7 ಕೋಟಿ ಮಾತ್ರೆಗಳು ಲಭ್ಯವಿವೆ. ರಾಜ್ಯದ ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿ ಜುಲೈ 6ಕ್ಕೆ ಅನ್ವಯಿಸಿದಂತೆ 3.18 ಕೋಟಿ ಮಾತ್ರೆಗಳ ದಾಸ್ತಾನು ಇದೆ’ ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್) ತಿಳಿಸಿದೆ.

‘ಮಕ್ಕಳಿಗೆ ನೀಡಬಹುದಾದ ಪ್ಯಾರಸಿಟಮಾಲ್ 250ಎಂ.ಜಿ /5 ಎಂಎಲ್ ಔಷಧಕ್ಕೆ ಸಂಬಂಧಿಸಿದಂತೆ ಔಷಧ ಉಗ್ರಾಣಗಳಲ್ಲಿ 5.76 ಲಕ್ಷ ಬಾಟಲ್‌ಗಳು, ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿ 3.86 ಲಕ್ಷ ಬಾಟಲ್‌ಗಳು ಲಭ್ಯವಿವೆ. ಕ್ರಮವಾಗಿ ಪ್ಯಾರಸಿಟಮಾಲ್ ಸಿರಪ್ 250ಎಂ.ಜಿ /5 ಔಷಧವು 27.28 ಲಕ್ಷ ಹಾಗೂ 5.81 ಲಕ್ಷ ಬಾಟಲ್‌ಗಳು ದಾಸ್ತಾನು ಇವೆ. ಬಾಯಿಗೆ ಹಾಕುವ ಪ್ಯಾರಸಿಟಮಾಲ್ ಹನಿ ಒಟ್ಟು 6.90 ಲಕ್ಷ ಬಾಟಲಿಗಳು ಲಭ್ಯವಿವೆ. ಪ್ಯಾರಸಿಟಮಾಲ್ 500 ಎಂ.ಜಿ ಮಾತ್ರೆ 10.04 ಕೋಟಿ ದಾಸ್ತಾನು ಇದೆ’ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ಹೆಚ್ಚುತ್ತಿರುವ ಡೆಂಗಿ ಪ್ರಕರಣ ತಡೆಗಟ್ಟಲು ಆರೋಗ್ಯ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಂಡಿದೆ. ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಮನೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದ್ದಾರೆ. ಅಗತ್ಯ ಬಿದ್ದಲ್ಲಿ ಈಡಿಸ್ ಸೊಳ್ಳೆಗಳ ನಿಯಂತ್ರಣಕ್ಕೆ ಔಷಧ ಸಿಂಪಡಿಸುತ್ತಿದ್ದಾರೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಝೀಕಾ: ಮುನ್ನೆಚ್ಚರಿಕೆಗೆ ಸೂಚನೆ 5

ಪುಟ್ಟ ಮರಿಯನ್ನು ಸೊಂಡಿಲಿನಿಂದ ತಳ್ಳುತ್ತಾ ನಡೆಸಿಕೊಂಡು ಬರುತ್ತಿರುವ ಆನೆಗಳು

ಗಂಡು ಮರಿಗೆ ಜನ್ಮ ನೀಡಿದ ಆನೆ ‘ರೀಟಾ’

ಪ್ರಜಾವಾಣಿ ವಾರ್ತೆ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ರೀಟಾ ಮುದ್ದಾದ ಗಂಡು ಮರಿಗೆ ಭಾನುವಾರ ಜನ್ಮ ನೀಡಿದೆ. ಹೊಸ ಅತಿಥಿ ಆಗಮನದಿಂದ ಉದ್ಯಾನದಲ್ಲಿ ಸಂತಸ ಮನೆ ಮಾಡಿದೆ.

ನೂತನ ಆನೆ ಮರಿ ಆಗಮನದಿಂದಾಗಿ ಆನೆಗಳ ಸಂಖ್ಯೆ 27ಕ್ಕೇರಿದೆ. 12 ಗಂಡು ಮತ್ತು 15 ಹೆಣ್ಣಾನೆಗಳು ಉದ್ಯಾನದಲ್ಲಿವೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

9 ವರ್ಷದ ಆನೆ ರೀಟಾಳಿಗೆ ಇದು ಚೊಚ್ಚಲ ಹೆರಿಗೆ. ಲಿಲ್ಲಿ ಮತ್ತು ಗೌರಿ ನೇತೃತ್ವದಲ್ಲಿ ಆರೈಕೆ ನಡೆದಿದೆ. ಪುಟಾಣಿ ಮರಿಯನ್ನು ಉಳಿದ ಆನೆಗಳು ಬೆಂಗಾವಲಿನಂತೆ ಕಾಯುತ್ತಾ ಜೋಪಾನ ಮಾಡುತ್ತಿವೆ.

ಉದ್ಯಾನದ ಸಿಬ್ಬಂದಿ ತಾಯಿ ಮತ್ತು ಮರಿಯಾನೆಯನ್ನು ಅತ್ಯಂತ ಜತನದಿಂದ ನೋಡಿಕೊಳ್ಳುತ್ತಿದ್ದು ವಿಶೇಷ ಆರೈಕೆ ಮಾಡುತ್ತಿದ್ದಾರೆ. ಉದ್ದು, ಅವಲಕ್ಕಿ, ಕಡಲೆಕಾಳು, ಹೆಸರಕಾಳು, ತೆಂಗಿನಕಾಯಿ ಸೇರಿದಂತೆ ವಿಶೇಷ ಆಹಾರ ತಾಯಿ ಆನೆ ರೀಟಾಳಿಗೆ ನೀಡಲಾಗುತ್ತಿದೆ.

ಮರಿಯಾನೆಯು ಅಂದಾಜು 100 ಕೆ.ಜಿಗೂ ಹೆಚ್ಚು ತೂಕವಿದ್ದು, ಆರೋಗ್ಯವಾಗಿದೆ. ರೀಟಾಳ ಮಾವುತ ಕೆ.ವಿ.ರವಿ ಪಾಲನೆ ಮಾಡುತ್ತಿದ್ದಾರೆ. ವೈದ್ಯರಾದ ಕಿರಣ್, ಆರ್‌ಎಫ್‌ಒ ದಿನೇಶ್, ಡಿಆರ್‌ಎಫ್‌ಒ ಅಭಿಷೇಕ್, ಸುರೇಶ್ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

‘ಸಚಿವರು ಬೆಂಗಳೂರು ಬಿಟ್ಟು ಹೊರಬರಲಿ’

ಹುಬ್ಬಳ್ಳಿ: ‘ರಾಜ್ಯ ಸರ್ಕಾರ ಡೆಂಗಿ ನಿಯಂತ್ರಣಕ್ಕೆ ಅಗತ್ಯ ತುರ್ತು ಕ್ರಮ ಕೈಗೊಳ್ಳಬೇಕು. ಆರೋಗ್ಯ ಸಚಿವರು ಬೆಂಗಳೂರು ಬಿಟ್ಟು ಹೊರ ಬಂದು ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಈ ಬಗ್ಗೆ ಪರಿಶೀಲಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆಗ್ರಹಿಸಿದರು.

ನಗರದಲ್ಲಿ ಭಾನುವಾರ ಮಾತ ನಾಡಿದ ಅವರು, ‘ಕೆಲವು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇದ್ದು, ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಬೇಕು’ ಎಂದು ಒತ್ತಾಯಿಸಿದರು.

‘ಡೆಂಗಿ ತುರ್ತು ಪರಿಸ್ಥಿತಿ ಘೋಷಿಸಿ’

ಸರ್ಕಾರವೇ ಉಚಿತ ಪರೀಕ್ಷೆ ಮಾಡಿಸಬೇಕು: ವಿಪಕ್ಷ ನಾಯಕ ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೂಡಲೇ ಡೆಂಗಿ ತುರ್ತು ಪರಿಸ್ಥಿತಿ ಘೋಷಿಸಬೇಕು. ಸರ್ಕಾರದಿಂದಲೇ ಡೆಂಗಿ ಪರೀಕ್ಷೆಯನ್ನು ಉಚಿತವಾಗಿ ಮಾಡಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಜಯನಗರ ಸಾರ್ವಜನಿಕ ಆಸ್ಪತ್ರೆಗೆ ಭಾನುವಾರ ಭೇಟಿ ನೀಡಿದ ಅವರು, ಡೆಂಗಿ ರೋಗಿಗಳ ಚಿಕಿತ್ಸೆಗೆ ಲಭ್ಯವಿರುವ ಸೌಲಭ್ಯಗಳನ್ನು ಪರಿಶೀಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯದಲ್ಲಿ ಡೆಂಗಿ ತೀವ್ರವಾಗಿ ಹರಡುತ್ತಿದೆ. ಹೀಗಿರುವಾಗ ಸರ್ಕಾರವು ಪ್ರತಿ ತಾಲ್ಲೂಕಿನಲ್ಲೂ ಕಾರ್ಯಪಡೆ ರಚಿಸಬೇಕಿತ್ತು. ರೋಗ ನಿಯಂತ್ರಣಕ್ಕೆ ಕ್ರಮಗಳನ್ನು ವಹಿಸಬೇಕಿತ್ತು. ಇವ್ಯಾವುದನ್ನೂ ಮಾಡಿಲ್ಲ’ ಎಂದು ಟೀಕಿಸಿದರು.

‘ನಗರದ ಎಲ್ಲೆಡೆ ಕಸದ ರಾಶಿ ಇದೆ. ಮಳೆಯಿಂದಾಗಿ ಅಲ್ಲಲ್ಲಿ ನೀರು ನಿಲ್ಲುತ್ತಿದೆ. ಇವೆಲ್ಲವೂ ಸೊಳ್ಳೆಗಳು ಹೆಚ್ಚಾಗಲು ಕಾರಣವಾಗುತ್ತಿವೆ. 100 ಮಂದಿಯನ್ನು ಪರೀಕ್ಷೆಗೆ ಒಳಪಡಿಸಿದರೆ ಅವರಲ್ಲಿ 13–14 ಮಂದಿಗೆ ಡೆಂಗಿ ಲಕ್ಷಣಗಳು ಇರುವುದು ಪತ್ತೆಯಾಗುತ್ತಿದೆ. ಪ್ರತಿದಿನ ಮೂರರಿಂದ ನಾಲ್ಕು ಮಂದಿ ಡೆಂಗಿಗೆ ಬಲಿಯಾಗುತ್ತಿದ್ದಾರೆ. ರಾಜ್ಯದಲ್ಲಿ ಅಂದಾಜು 2 ಲಕ್ಷ ಜನರು ಡೆಂಗಿಗೆ ಒಳಗಾಗಿದ್ದಾರೆ. ಬೇರೆ ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಡೆಂಗಿ ಬಂದರೆ ಸಾವಿನ ಅಪಾಯ ಹೆಚ್ಚು ಇರುತ್ತದೆ. ಜನರು ಆತಂಕಗೊಂಡಿದ್ದಾರೆ. ಆದರೆ ಸರ್ಕಾರ ಮಾತ್ರ ಎಚ್ಚೆತ್ತಿಲ್ಲ’ ಎಂದು ದೂರಿದರು.

‘ಸರ್ಕಾರವು ಡೆಂಗಿ ತುರ್ತು ಪರಿಸ್ಥಿತಿ ಘೋಷಿಸಿದರಷ್ಟೇ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಲು ಸಾಧ್ಯ. ಕಸದ ರಾಶಿಯನ್ನು ತೆರವು ಮಾಡುವತ್ತ ಸರ್ಕಾರ ಗಮನಹರಿಸಬೇಕು. ಆಶಾ ಕಾರ್ಯಕರ್ತೆಯರು, ಅಂಗನವಾಡಿ ಸಹಾಯಕಿಯರನ್ನು ಬಳಸಿಕೊಂಡು ಮನೆ–ಮನೆಗೆ ಹೋಗಿ ಡೆಂಗಿ ಪರೀಕ್ಷೆ ಮಾಡಿಸಬೇಕು. ಪ್ರತಿ ಆಸ್ಪತ್ರೆಯಲ್ಲೂ ಡೆಂಗಿಗೆ ಒಂದು ವಾರ್ಡ್ ಅನ್ನು ಮೀಸಲಿಡಬೇಕು’ ಎಂದು ಅಶೋಕ ಒತ್ತಾಯಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರು ಜಯನಗರ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಡೆಂಗಿ ರೋಗಿಗಳ ಯೋಗಕ್ಷೇಮ ವಿಚಾರಿಸಿದರು

> ಬಿಬಿಎಂಪಿ ಆಯುಕ್ತರಿಗೇ ಸೊಳ್ಳೆ ಕಚ್ಚಿ ಡೆಂಗಿ ಬಂದಿದೆ. ಹೀಗಿರುವಾಗ ಬಿಬಿಎಂಪಿಯಿಂದ ಬೇರೆಯವರನ್ನು ಕಾಪಾಡಲು ಸಾಧ್ಯವಿಲ್ಲ ಎಂಬ ಆತಂಕ ಜನರಲ್ಲಿ ಮೂಡಿದೆ
>
> **ಆರ್.ಅಶೋಕ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

ಆಗ್ರಹಗಳು: ಡೆಂಗಿ ಬಗ್ಗೆ ಜನರಲ್ಲಿನ ಆತಂಕವನ್ನು ನಿವಾರಿಸಲು ಸರ್ಕಾರ ಜಾಗೃತಿ ಕಾರ್ಯಕ್ರಮ ನಡೆಸಬೇಕು

ಉದ್ಯಾನ, ಸಾರ್ವಜನಿಕ ಸ್ಥಳ, ನೀರು ನಿಲ್ಲುವ ಸ್ಥಳಗಳಲ್ಲಿ ಕಸ ನಿವಾರಣೆಗೆ ಕ್ರಮ ಕೈಗೊಳ್ಳಬೇಕು

ಮುನ್ನೆಚ್ಚರಿಕೆ ಕ್ರಮಕ್ಕೆ ಕಟ್ಟುನಿಟ್ಟಿನ ನಿರ್ದೇಶನ

ಬೆಂಗಳೂರು: ಡೆಂಗಿ ಪ್ರಕರಣಗಳನ್ನು ನಿಯಂತ್ರಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕು ಎಂದು ಎಲ್ಲ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.

ಕುಡಿಯುವ ನೀರು ಸರಬರಾಜು ಟ್ಯಾಂಕ್‌ಗಳು, ತೆರೆದ ತೊಟ್ಟಿಗಳು ಮತ್ತು ಸಾರ್ವಜನಿಕ ಶೌಚಾಲಯಗಳಲ್ಲಿ ನೀರು ಶೇಖರಣೆ ಮಾಡುವ ತೊಟ್ಟಿಗಳನ್ನು ವಾರಕ್ಕೊಮ್ಮೆ ಶುಚಿಗೊಳಿಸಬೇಕು. ಮನೆಗಳು, ಅಂಗಡಿ-ಮುಂಗಟ್ಟುಗಳು, ಹೊಟೇಲ್‌ಗಳು, ವಾಣಿಜ್ಯ ಸಂಕೀರ್ಣಗಳು, ಸಾರ್ವಜನಿಕ ಸ್ಥಳಗಳು ಹಾಗೂ ಖಾಲಿ ಜಾಗಗಳಲ್ಲಿ ನೀರು ದೀರ್ಘಕಾಲ ನೀರು ನಿಲ್ಲದಂತೆ ಕ್ರಮವಹಿಸಬೇಕು ಮತ್ತು ಆವರಣಗಳು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ನಿರುಪಯುಕ್ತ ಮತ್ತು ತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹ ಆಗದಂತೆ ಶೀಘ್ರವಾಗಿ ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು ಎಂದೂ ನಿರ್ದೇಶನ ನೀಡಿದ್ದಾರೆ.

ಗ್ರಾಮ ಮಟ್ಟದಲ್ಲಿರುವ ‘ಗ್ರಾಮ ಆರೋಗ್ಯ ನೈರ್ಮಲ್ಯ ಪೌಷ್ಟಿಕ ಸಮಿತಿ’ಗಳನ್ನು ಡೆಂಗಿ ನಿಯಂತ್ರಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಗ್ರಾಮ ಪಂಚಾಯತಿಗಳು ಕಾರ್ಯಕ್ರಮ ಹಾಕಿಕೊಳ್ಳಬೇಕು’ ಎಂದು ಅವರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ದೇವದಾರಿ: ವರದಿ ನೀಡಲು ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚನೆ

ಬಳ್ಳಾರಿ: ಸಂಡೂರು ತಾಲ್ಲೂಕಿನ ಸ್ವಾಮಿ ಮಲೈ ಬ್ಲಾಕ್‌ನ ದೇವದಾರಿ ಶ್ರೇಣಿಯಲ್ಲಿ ಗಣಿಗಾರಿಕೆ ನಡೆಸಲು ಕುದುರೆಮುಖ ಐರನ್ ಓರ್ ಕಂಪನಿಗೆ (ಕೆಐಒಸಿಎಲ್) ಅರಣ್ಯ ತೀರುವಳಿ ಗುತ್ತಿಗೆ ಪತ್ರ ನೀಡುವುದನ್ನು ಮತ್ತು ಅರಣ್ಯ ಭೂಮಿ ಹಸ್ತಾಂತರಿಸುವುದನ್ನು ತಡೆಯಲು ಕೈಗೊಂಡ ಕ್ರಮಗಳ ಕುರಿತು ವರದಿ ನೀಡುವಂತೆ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗೆ (ಪಿಸಿಸಿಎಫ್) ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಅರಣ್ಯ ಸಚಿವ ಬಿ.ಈಶ್ವರ ಖಂಡ್ರೆ ಜೂನ್ 21ರಂದು ಇಲಾಖೆಗೆ ಟಿಪ್ಪಣಿ ನೀಡಿದ್ದರು. ಅದರ ಆಧಾರದಲ್ಲಿ ಜುಲೈ 1 ರಂದು ಪಿಸಿಸಿಎಫ್‌ಗೆ ಸೂಚನೆ ನೀಡಿರುವ ಸರ್ಕಾರ, ಕೈಗೊಂಡ ಕ್ರಮಗಳ ಕುರಿತು ವರದಿ ನೀಡುವಂತೆಯೂ ತಿಳಿಸಿದ್ದು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ‘ಪ್ರಜಾವಾಣಿ’ಗೆ ದಾಖಲೆ ಲಭ್ಯವಾಗಿದೆ.

‘ಸಚಿವರು ಟಿಪ್ಪಣಿ ಬರೆದ ಮೇಲೆ ಅಧಿಕಾರಿಗಳು ನಂತರದ ಪ್ರಕ್ರಿಯೆಗಳನ್ನು ಜಾರಿಗೊಳಿಸಬೇಕು. ಕೆಲವು ಆದೇಶಗಳು ಟಿಪ್ಪಣಿಗಷ್ಟೇ ಸೀಮಿತವಾಗುತ್ತವೆ. ಇಲ್ಲಿ ಹಾಗಾಗದಿರುವುದು ಸಮಾಧಾನ’ ಎಂದು ಜನಸಂಗ್ರಾಮ ಪರಿಷತ್‌ನ ಮುಖಂಡ ಶ್ರೀಶೈಲ ಪ್ರತಿಕ್ರಿಯಿಸಿದರು.

ಮೈತ್ರಿ ಅಭ್ಯರ್ಥಿ ಗೆಲುವು ಮುಖ್ಯ ಕೇಂದ್ರ ಸಚಿವ ಕುಮಾರಸ್ವಾಮಿ

ಬೆಂಗಳೂರು: ‘ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ಉಪಚುನಾವಣೆ ಸಂಬಂಧ ಬಿಜೆಪಿಯ ಸಿ.ಪಿ.ಯೋಗೇಶ್ವರ್ ಅವರನ್ನು ಎಲ್ಲಾ ಹಂತದಲ್ಲೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು’ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಅವರು ತಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಸೂಚಿಸಿದ್ದಾರೆ.

ಬೆಂಗಳೂರಿನ ಜೆ.ಪಿ.ನಗರದಲ್ಲಿ ಇರುವ ಕುಮಾರಸ್ವಾಮಿ ಅವರ ಮನೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಚನ್ನಪಟ್ಟಣ ಕ್ಷೇತ್ರದ ಜೆಡಿಎಸ್ ನಾಯಕರು, ಕಾರ್ಯಕರ್ತರು ಭಾಗಿಯಾಗಿದ್ದರು. ಅಭ್ಯರ್ಥಿ ಆಯ್ಕೆ ಸೇರಿ, ಜೆಡಿಎಸ್–ಬಿಜೆಪಿ ಮೈತ್ರಿಕೂಟವು ಒಮ್ಮತದಿಂದ ಚುನಾವಣೆ ಎದುರಿಸುವ ಬಗ್ಗೆ ಚರ್ಚೆ ನಡೆಸಲಾಯಿತು ಎಂದು ಪಕ್ಷವು ತಿಳಿಸಿದೆ.

‘ಅಭ್ಯರ್ಥಿ ಯಾರಾಗುತ್ತಾರೆ ಎನ್ನುವುದು ಮುಖ್ಯವಲ್ಲ. ಅಭ್ಯರ್ಥಿ ಯಾರೇ ಆದರೂ ಅವರು ಎನ್‌ಡಿಎ ಅಭ್ಯರ್ಥಿ ಆಗಿರುತ್ತಾರೆ. ಈ ಬಗ್ಗೆ ಯಾವುದೇ ಗೊಂದಲ ಬೇಡ. ಎಲ್ಲರೂ ಒಮ್ಮತವಾಗಿ, ಒಗ್ಗಟ್ಟಾಗಿ ಕೆಲಸ ಮಾಡಬೇಕು. ಮೈತ್ರಿ ಅಭ್ಯರ್ಥಿ ಗೆಲ್ಲಬೇಕು ಎನ್ನುವುದು ನಮ್ಮೆಲ್ಲರ ಗುರಿ ಆಗಬೇಕು’ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅವರನ್ನು ಪ್ರಮುಖ ಮುಖಂಡರೆಲ್ಲ ಹೋಗಿ ಖುದ್ದು ಭೇಟಿ ಮಾಡಿ ಮುಕ್ತವಾಗಿ ಚರ್ಚಿಸಬೇಕು. ಪ್ರತಿ ಹಂತದಲ್ಲೂ ಅವರ ಮಾರ್ಗದರ್ಶನ ಪಡೆಯಬೇಕು. ಮುಂದಿನ ವಾರ ಬಿಜೆಪಿಯ ರಾಜ್ಯ, ರಾಷ್ಟ್ರೀಯ ನಾಯಕರ ಜತೆ ಸಮಾಲೋಚನೆ ನಡೆಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

ಪಾದಚಾರಿ ಮಾರ್ಗ: ಮರದ ಟೊಂಗೆಗಳನ್ನು ತೆರವುಗೊಳಿಸಿ

ರಾಜಾಜಿನಗರ 6ನೇ ಬ್ಲಾಕ್‌ನ ಶ್ರೀಸಾಗರ್ ಹೋಟೆಲ್ ಹತ್ತಿರದ ಪಾದಚಾರಿ ಮಾರ್ಗದಲ್ಲಿ ಮರದ ಟೊಂಗೆಗಳನ್ನು ಕಡಿದು ಅಲ್ಲಿಯೇ ಹಾಕಲಾಗಿದೆ. ಇದರಿಂದ, ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿದೆ. ಅದರಲ್ಲೂ ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಜೀವ ಭಯದಲ್ಲಿಯೇ ಮುಖ್ಯ ರಸ್ತೆಯಲ್ಲಿ ಸಂಚರಿಸಬೇಕಾಗಿದೆ. ಇತ್ತೀಚೆಗೆ ಸುರಿದ ಮಳೆ ಹಾಗೂ ಗಾಳಿಗೆ ರಸ್ತೆಗೆ ಬಿದ್ದಿದ್ದ ಮರಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಡಿದು, ಮರದ ಟೊಂಗೆಗಳನ್ನು ಪಾದಚಾರಿ ಮಾರ್ಗದಲ್ಲಿ ಹಾಕಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರಿಗೆ ದೂರು ನೀಡಲಾಗಿದ್ದು, ಕೂಡಲೇ ಇಲ್ಲಿರುವ ಮರದ ಟೊಂಗೆಗಳನ್ನು ತೆರವುಗೊಳಿಸುವ ಕೆಲಸ ಮಾಡಬೇಕಿದೆ.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ

‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’

ಬ್ರಿಗೇಡ್ ರಸ್ತೆಯಿಂದ ರೆಸಿಡೆನ್ಸಿ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಸಿಮೆಂಟ್‌ನ ಸ್ಲ್ಯಾಬ್‌ಗಳ ಕಿತ್ತು ಹೋಗಿವೆ. ಇದರಿಂದ, ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿಯೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪಾದಚಾರಿ ಮಾರ್ಗಕ್ಕೆ ಹಾಕಿದ್ದ ಸಿಮೆಂಟ್‌ನ ಸ್ಲ್ಯಾಬ್‌ಗಳು ಕಿತ್ತು ಮೋರಿಯಲ್ಲಿ ಬಿದ್ದಿರುವ ಕಾರಣ ಮಳೆ ನೀರು ಸರಾಗವಾಗಿ ಹರಿಯುತ್ತಿಲ್ಲ. ತ್ಯಾಜ್ಯ ನೀರು ಕಟ್ಟಿಕೊಂಡು ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಪಾದಚಾರಿ ಮಾರ್ಗ ಸರಿಪಡಿಸುವಂತೆ ಬಿಬಿಎಂಪಿಗೆ ಹಲವಾರು ಬಾರಿ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಶಿವಪ್ರಸಾದ್, ಬ್ರಿಗೇಡ್ ರಸ್ತೆ

‘ರಸ್ತೆಯಲ್ಲಿ ಹಾಕಿರುವ ಕಸ ತೆರವುಗೊಳಿಸಿ’

ಬಿಬಿಎಂಪಿ ವ್ಯಾಪ್ತಿಯ ವಿದ್ಯಾರಣ್ಯಪುರಕ್ಕೆ ಹೊಂದಿಕೊಂಡಿರುವ ದೊಡ್ಡಬೊಮ್ಮಸಂದ್ರದ ವಾರ್ಡ್ ಸಂಖ್ಯೆ 10ಕ್ಕೆ ಸೇರಿದ ರಾಮಚಂದ್ರಪುರ ಮುಖ್ಯರಸ್ತೆ ಪಾರ್ಕ್ ಮುಂಭಾಗದಲ್ಲಿ ಪ್ರತಿನಿತ್ಯ ಕಸ ಹಾಕಲಾಗುತ್ತಿದೆ. ಜನರು ಮೂಗು ಮುಚ್ಚಿಕೊಂಡು ಓಡಾಡಬೇಕಿದೆ. ಮನೆಯ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ದ್ವಿಚಕ್ರ ವಾಹನಗಳಲ್ಲಿ ಬಂದು ಇಲ್ಲಿ ಎಸೆದು ಹೋಗುತ್ತಾರೆ. ಮೂರು ತಿಂಗಳಿಂದ ಬಿದ್ದಿರುವ ಕಸದ ರಾಶಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸುತ್ತಿಲ್ಲ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ.

ಜಿ. ಲಕ್ಷ್ಮೀಶ, ಬೊಮ್ಮಸಂದ್ರ

‘ರಸ್ತೆ ಗುಂಡಿ ಮುಚ್ಚಿ’

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 129ರ ಮಲ್ಲತ್ತಹಳ್ಳಿ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ರಸ್ತೆ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದು ಹಾಳಾಗಿರುವ ಕಾರಣ ಸಂಚಾರ ದಟ್ಟಣೆ, ಅಪಘಾತಗಳು ಸಂಭವಿಸುತ್ತಿವೆ. ಅದರಲ್ಲೂ ದ್ವಿಚಕ್ರ ವಾಹನ ಸವಾರರು ಹಲವಾರು ಬಾರಿ ಬಿದ್ದು ಗಾಯಗೊಂಡಿದ್ದಾರೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಂ. ಲಿಂಗರಾಜು ಗೌಡ, ಮಲ್ಲತಹಳ್ಳಿ

ಕೆಂಗೇರಿ ಬಸ್ ನಿಲ್ದಾಣ: ಶೌಚಾಲಯಕ್ಕೆ ಬೀಗ

ಕೆಂಗೇರಿ ಉಪ ನಗರದ ದೊಡ್ಡ ಬಸ್ ನಿಲ್ದಾಣದಲ್ಲಿರುವ ಸಾರ್ವಜನಿಕ ಶೌಚಾಲಯಕ್ಕೆ ಮೂರು ತಿಂಗಳಿಂದ ನೀರಿನ ಸರಬರಾಜು ಇಲ್ಲದ ಕಾರಣ ಬೀಗ ಹಾಕಲಾಗಿದೆ. ಪ್ರತಿನಿತ್ಯ ಈ ನಿಲ್ದಾಣದಿಂದ ಸಾವಿರಾರು ಪ್ರಯಾಣಿಕರು ಸಂಚರಿಸುತ್ತಾರೆ. ಈ ನಿಲ್ದಾಣದ ಅಕ್ಕಪಕ್ಕದಲ್ಲಿ ಯಾವುದೇ ಶೌಚಾಲಯವಿಲ್ಲ. ನಿಲ್ದಾಣದಲ್ಲಿ ಮಹಿಳಾ ವಿಶ್ರಾಂತಿ ಗೃಹವಿದ್ದು, ಅದರಲ್ಲೂ ಶೌಚಾಲಯದ ಸೌಲಭ್ಯವಿಲ್ಲ. ಇದರಿಂದ, ಮಹಿಳೆಯರು, ವೃದ್ಧರು ಹಾಗೂ ಅಂಗವಿಕಲರಿಗೆ ಹೆಚ್ಚು ಸಮಸ್ಯೆ ಆಗುತ್ತಿದೆ. ಬಸ್ ನಿಲ್ದಾಣದಲ್ಲಿ ಶೌಚಾಲಯವಿಲ್ಲದ ಪರಿಣಾಮ ಸಾರ್ವಜನಿಕರು ಮಲ–ಮೂತ್ರ ವಿಸರ್ಜನೆ ಮಾಡುವುದಕ್ಕೆ ಪರದಾಡುವ ಸ್ಥಿತಿ ಇದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಶೌಚಾಲಯಕ್ಕೆ ಅಗತ್ಯ ಸೌಲಭ್ಯ ಒದಗಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು.

ಜಿ.ಆರ್.ಕೆ. ನಾಯಕ್, ಕೆಂಗೇರಿ ಉಪನಗರ

ಪ್ರೆಸ್‌ಕ್ಲಬ್ ಅಧ್ಯಕ್ಷರಾಗಿ ಶ್ರೀಧರ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪ್ರೆಸ್ ಕ್ಲಬ್‌ನ 2024–25ನೇ ಸಾಲಿನ ಅವಧಿಗೆ ಅಧ್ಯಕ್ಷರಾಗಿ ಆರ್. ಶ್ರೀಧರ ಅವರು ಪುನರಾಯ್ಕೆಯಾಗಿದ್ದಾರೆ.

ಪ್ರೆಸ್‌ಕ್ಲಬ್‌ನಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಮೋಹನ್ ಕುಮಾರ್ ಬಿ.ಎನ್ (ಉಪಾಧ್ಯಕ್ಷ), ಶಿವಕುಮಾರ್ ಎಂ.ಡಿ.ಬೆಳ್ಳಿತಟ್ಟೆ (ಪ್ರಧಾನ ಕಾರ್ಯದರ್ಶಿ), ಮಂಜುನಾಥ್ ಜಿ.ವೈ (ಕಾರ್ಯದರ್ಶಿ), ಧರಣೇಶ್ ಬಿ.ಎನ್ (ಜಂಟಿ ಕಾರ್ಯದರ್ಶಿ), ಗಣೇಶ್ ಜಿ (ಖಜಾಂಚಿ) ಪದಾಧಿಕಾರಿಗಳಾಗಿ ಆಯ್ಕೆ ಆಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ರೋಹಿಣಿ ಅಡಿಗ, ಸಿ.ಆರ್. ಮಂಜುನಾಥ್, ಮುಮ್ತಾಜ್ ಅಲೀಂ, ಯಾಸಿರ್ ಮುಶ್ತಾಕ್, ಶರಣಬಸಪ್ಪ ಎ.ಎಚ್., ಶಿವಣ್ಣ ಹಾಗೂ ಮಿನಿ ತೇಜಸ್ವಿ ಆಯ್ಕೆಯಾಗಿದ್ದಾರೆ ಎಂದು ಪ್ರೆಸ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ವಿಕ್ರಮ ಹುಯಿಲಗೋಳ ರಾಜೀನಾಮೆ

ಬೆಂಗಳೂರು: ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಮ ಹುಯಿಲಗೋಳ ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ. ವೈಯಕ್ತಿಕ ಕಾರಣಗಳಿಗಾಗಿ ರಾಜೀನಾಮೆ ನೀಡುತ್ತಿರುವುದಾಗಿ ಅವರು ತಿಳಿಸಿದ್ದಾರೆ. ತೆರಿಗೆ ಮತ್ತು ವಾಣಿಜ್ಯ ಕಾನೂನು ಕ್ಷೇತ್ರದಲ್ಲಿ ಪರಿಣತರು. ಹಲವು ಪ್ರಕರಣಗಳಲ್ಲಿ ಅವರು ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ್ದರು.

‘ಪರಿಸರ ನಾಶ ಆರೋಗ್ಯಕ್ಕೆ ಕುತ್ತು’

ಪ್ರಜಾವಾಣಿ ವಾರ್ತೆ

ಆನೇಕಲ್ : ದಶಕಗಳ ಹಿಂದೆ ಆಹಾರ, ವಸತಿ, ವಸ್ತ್ರದ ಕೊರತೆ ಇತ್ತು. ಈಚೆಗೆ ಇವುಗಳ ಬದಲಿಗೆ ಆರೋಗ್ಯ ಸಮಸ್ಯೆ ಹೆಚ್ಚಾಗುತ್ತಿದೆ. ಈ ಸಮಸ್ಯೆಗಳಿಗೆ ಪರಿಸರ ನಾಶವೇ ಕಾರಣ. ಆರೋಗ್ಯಕರ ಸಮಾಜಕ್ಕಾಗಿ ಪರಿಸರ ಉಳಿಸಿ ಸಂರಕ್ಷಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಕಿವಿಮಾತು ಹೇಳಿದರು.

ತಾಲ್ಲೂಕಿನ ದ್ಯಾವಸಂದ್ರದಲ್ಲಿ ಬೆಂಗಳೂರಿನ ಕಾಳಿದಾಸ ಮತ್ತು ಸಂಗೊಳ್ಳಿ ರಾಯಣ್ಣ ವಿದ್ಯಾರ್ಥಿನಿಲಯದ ಹಳೆ ವಿದ್ಯಾರ್ಥಿಗಳ ಸಂಘ, ದ್ಯಾವಸಂದ್ರ ನವಭಾರತ ಅಸೋಸಿಯೇಷನ್ ಸಹಯೋಗದಲ್ಲಿ ಭಾನುವಾರ ಗುಂಡು ತೋಪಿನಲ್ಲಿ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜು ಮಾತನಾಡಿ, ಸಮಾಜದ ಋಣ ತೀರಿಸಬೇಕಾದರೆ ಪ್ರಕೃತಿ ರಕ್ಷಣೆಗೆ ಕೊಡುಗೆ ನೀಡಬೇಕು ಎಂದರು.

ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿ, ಸಂಘದ ಅಧ್ಯಕ್ಷ ಎಂ.ರಾಮಯ್ಯ ಮಾತನಾಡಿ, ಪರಿಸರ ಜಾಗೃತಿ ಮೂಡಿಸಲು ಗಿಡ ನೆಡುವ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ದ್ಯಾವಸಂದ್ರ ಗ್ರಾಮದಲ್ಲಿ 10ನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ, ಹಳೆ ವಿದ್ಯಾರ್ಥಿಗಳ ಸಂಘದ ನೆರವು ಪಡೆದು ಎಂಬಿಬಿಎಸ್ ತೇರ್ಗಡೆಯಾದ ಗ್ರಾಮದ ಮೊದಲ ವಿದ್ಯಾರ್ಥಿ ಮನೀಷ್ ಅವರನ್ನು ಸನ್ಮಾನಿಸಲಾಯಿತು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಿಇಒ ಕಾಂತರಾಜು, 5ನೇ ಹಣಕಾಸಿನ ಆಯೋಗದ ಸದಸ್ಯ ಆರ್.ಎಸ್.ಪೋಂಡೆ, ತಹಶೀಲ್ದಾರ್ ಶಶಿಧರ್ ಮಾಡ್ಯಾಳ್, ತಾ.ಪಂ.ಸಿಇಒ ಕೆ.ಮಂಜುನಾಥ್, ಎಸಿಎಫ್ ದೇವರಾಜು, ವಲಯ ಅರಣ್ಯಾಧಿಕಾರಿ ಪ್ರಶಾಂತ್ ಕುಮಾರ್, ಕಲ್ಲುಬಾಳು ಗ್ರಾ.ಪಂ. ಪಿಡಿಒ ಲಕ್ಷ್ಮಿನಾರಾಯಣ್ ಹಾಜರಿದ್ದರು.

ಆನೇಕಲ್‌ನ ದ್ಯಾವಸಂದ್ರದಲ್ಲಿ ಗುಂಡು ತೋಪಿನಲ್ಲಿ ಗಿಡಗಳನ್ನು ನೆಡಲಾಯಿತು. ಜಿಲ್ಲಾಧಿಕಾರಿ ಕೆ.ಎ.ದಯಾನಂದ್, ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ಉಪಸ್ಥಿತರಿದ್ದರು

ಮೈಶುಗರ್: ಕಡತ ಮಂಡಿಸಲು ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯ ವಿದ್ಯುತ್ ಬಿಲ್ ಬಾಕಿಯನ್ನು ಮನ್ನಾ ಮಾಡುವ ಬಗ್ಗೆ ಪರಿಶೀಲಿಸಿ, ಕಡತ ಮಂಡಿಸುವಂತೆ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಮೈಶುಗರ್ ಸಕ್ಕರೆ ಕಾರ್ಖಾನೆಯ ಬಾಕಿ ವಿದ್ಯುತ್ ಬಿಲ್ ಅನ್ನು ಮನ್ನಾ ಮಾಡುವಂತೆ ಮುಖ್ಯಮಂತ್ರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ ಗೂಳಿಗೌಡ ಅವರು ಮನವಿ ಸಲ್ಲಿಸಿದ್ದರು. ಬಿಲ್ ಮನ್ನಾ ಪ್ರಸ್ತಾವವನ್ನು ಸಚಿವ ಸಂಪುಟದ ಮುಂದೆ ತರಲು ಕ್ರಮ ವಹಿಸುವಂತೆ ಕೂಡಾ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಮನವಿ ಪತ್ರದಲ್ಲೇನಿತ್ತು?: ಮಂಡ್ಯದ ರೈತರ ಜೀವನಾಡಿ ಆದ ಮೈ ಶುಗರ್ ಕಾರ್ಖಾನೆ ಕಳೆದ 25 ವರ್ಷಗಳಿಂದ ವಿದ್ಯುತ್ ಬಿಲ್ ಕಟ್ಟದೆ ತೀವ್ರ ಸಂಕಷ್ಟಕ್ಕೆ ಗುರಿಯಾಗಿದೆ. ₹52.25 ಕೋಟಿ ಬಾಕಿ ಪಾವತಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯು ಕಾರ್ಖಾನೆಗೆ ನೋಟಿಸ್ ನೀಡಿದೆ. ಇದರಿಂದ ಪಾರು ಮಾಡುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿದ್ದು, ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡು ಬಾಕಿ ಇರುವ ವಿದ್ಯುತ್ ಬಿಲ್ ಮನ್ನಾ ಮಾಡಬೇಕು ಎಂದು ದಿನೇಶ ಗೂಳಿಗೌಡ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದ್ದರು.

‘ಈ ಕಾರ್ಖಾನೆಯು ಕಳೆದ ವರ್ಷ ಕಾಂಗ್ರೆಸ್ ಸರ್ಕಾರದ ಮುತುವರ್ಜಿಯಿಂದ ಪುನರಾರಂಭಗೊಂಡಿತು. ಕಾರ್ಖಾನೆಯ ಪುನಶ್ಚೇತನಕ್ಕೆ ಸರ್ಕಾರ ₹50 ಕೋಟಿ ನೀಡಿದೆ. ಕಳೆದ ವರ್ಷ ಕಾರ್ಖಾನೆಯು ಮಂಡ್ಯದ ರೈತರು ಬೆಳೆದ 2.41 ಲಕ್ಷ ಟನ್ ಕಬ್ಬನ್ನು ನುರಿಸಲಾಗಿತ್ತು. ಕಾರ್ಖಾನೆಯಿಂದ ರೈತರಿಗೆ ಅನುಕೂಲವಾಗುತ್ತಿದೆ. ಆದರೆ, ಕೆಲವು ಕಾರಣಗಳಿಂದ ಕಾರ್ಖಾನೆಯ ವಿದ್ಯುತ್ ಬಿಲ್ ಕಟ್ಟಿಲ್ಲ. ಬಿಲ್ ಪಾವತಿಸಲು ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಸಮರ್ಪಕವಾಗಿಲ್ಲ’ ಎಂದೂ ಉಲ್ಲೇಖಿಸಿದ್ದಾರೆ.

ಸೋಮವಾರ, ಜುಲೈ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 189 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಮಕ್ಕಳ ಹಕ್ಕುಗಳಿಗೆ ಧ್ವನಿಯಾಗುವ ಶಾಲಾ ಸಂಸತ್

ಆಳ-ಅಗಲ
ಬಿಹಾರ ಸರಣಿ ಸೇತುವೆ ಕುಸಿತ ನಿರ್ಲಕ್ಷ್ಯವೇ ಕಾರಣ?

ಮುಡಾ ಸದಸ್ಯರಿಂದಲೇ 'ಅಕ್ರಮ' 8
'ಇಸ್ರೇಲ್ ಪ್ರತಿಕ್ರಿಯೆಗೆ ಕಾಯುತ್ತಿದ್ದೇವೆ' 10
ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನೌಕರರ ನಿರ್ಣಯ 5
ಅಸ್ಸಾಂ, ಬಿಹಾರದಲ್ಲಿ ಭಾರಿ ಮಳೆ 11



ತೀವ್ರ ಬರ, ಬೆಳೆಹಾನಿ, ಸಾಲದ ಹೊರೆ ಕಾರಣ

15 ತಿಂಗಳಲ್ಲಿ 1,182 ಅನ್ನದಾತರ ಆತ್ಮಹತ್ಯೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ತೀವ್ರ ಬರ, ಬೆಳೆ ಹಾನಿ, ಸಾಲದ ಹೊರೆ ಹೀಗೆ ನಾನಾ ಕಾರಣಗಳಿಗೆ 2023 ಏಪ್ರಿಲ್ 1ರಿಂದ 2024 ಜುಲೈ 4ರೊಳಗೆ ಒಟ್ಟು 1,182 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಳೆದ 15 ತಿಂಗಳಲ್ಲಿ ನಡೆದ ರೈತರ ಆತ್ಮಹತ್ಯೆ ಪ್ರಕರಣಗಳ ಸಮಗ್ರ ವಿವರಗಳನ್ನು ಕಂದಾಯ ಇಲಾಖೆ ಸಂಗ್ರಹಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ (ಜುಲೈ 8) ಮತ್ತು ಮಂಗಳವಾರ (ಜುಲೈ 9) ನಡೆಯಲಿರುವ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಈ ಮಾಹಿತಿಯನ್ನು ಸಲ್ಲಿಸಲಿದೆ.

ಬೆಳಗಾವಿ ಜಿಲ್ಲೆಯಲ್ಲಿ ಅತೀ ಹೆಚ್ಚು 122, ಹಾವೇರಿಯಲ್ಲಿ 120, ಧಾರವಾಡದಲ್ಲಿ 101 ರೈತರು ಸಾವಿನ ಮೊರೆ ಹೋಗಿದ್ದಾರೆ. ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಉಡುಪಿ ಜಿಲ್ಲೆಯಲ್ಲಿ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿಲ್ಲ.

ಒಟ್ಟು 1,003 ಆತ್ಮಹತ್ಯೆ ಪ್ರಕರಣಗಳಲ್ಲಿ ರೈತನ ಕುಟುಂಬ ಪರಿಹಾರಧನ ಪಡೆಯಲು ಅರ್ಹ ಎಂದು ಪರಿಗಣಿಸಲಾಗಿದೆ. ವಿವಿಧ ಕಾರಣಗಳಿಗಾಗಿ 161 ಪ್ರಕರಣಗಳು ಅರ್ಹವಲ್ಲವೆಂದು ತಿರಸ್ಕರಿಸಲಾಗಿದೆ. ಈ ಪೈಕಿ, ಈಗಾಗಲೇ 994 ರೈತರ ಕುಟುಂಬಗಳಿಗೆ ಪರಿಹಾರಧನ ವಿತರಿಸಲಾಗಿದೆ. ಒಂಬತ್ತು ಪ್ರಕರಣಗಳಲ್ಲಿ ಪರಿಹಾರಧನ ವಿತರಿಸಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಬಾಕಿ ಉಳಿದಿದೆ. 18 ಪ್ರಕರಣಗಳಲ್ಲಿ ಪರಿಹಾರ ಧನ ವಿತರಿಸುವ ಕುರಿತು ತೀರ್ಮಾನ ತೆಗೆದುಕೊಳ್ಳಲು ಬಾಕಿಯಿದೆ ಎಂದೂ ಕಂದಾಯ ಇಲಾಖೆ ಮಾಹಿತಿ ನೀಡಿದೆ.

> ರೈತರ ಬದುಕು ಹಸನುಗೊಳಿಸಲು ಕೇಂದ್ರ-ರಾಜ್ಯ ಸರ್ಕಾರಗಳು ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸಲು ಗಂಭೀರ ಪ್ರಯತ್ನಗಳನ್ನು ಮಾಡದೇ ಇದ್ದರೆ ಆತ್ಮಹತ್ಯೆ ಪ್ರಕರಣಗಳು ಇನ್ನಷ್ಟು ಹೆಚ್ಚಲಿದೆ. ಆರ್ಥಿಕವಾಗಿ ಕುಗ್ಗಿರುವ ರೈತರನ್ನು ಮೇಲೆತ್ತಲು ಕನಿಷ್ಠ ಬೆಂಬಲ ಬೆಲೆಯನ್ನು ಎಲ್ಲ ಬೆಳೆಗಳಿಗೆ ವಿಸ್ತರಿಸಬೇಕು. ರಾಜ್ಯದಲ್ಲಿರುವ ಕೃಷಿ ಬೆಲೆ ಆಯೋಗಕ್ಕೆ ಅಧ್ಯಕ್ಷರನ್ನು ನೇಮಿಸಿ, ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಲು ಮುಂದಾಗಬೇಕು
>
> **ಬಡಗಲಪುರ ನಾಗೇಂದ್ರ,** ಅಧ್ಯಕ್ಷ, ರಾಜ್ಯ ರೈತ ಸಂಘ

8ನೇ ಪುಟ ನೋಡಿ

ಜೈ ಜಗನ್ನಾಥ... ಒಡಿಶಾದ ಪುರಿಯಲ್ಲಿ ಭಾನುವಾರ ನಡೆದ ವಾರ್ಷಿಕ ರಥಯಾತ್ರೆಯಲ್ಲಿ ಪಾಲ್ಗೊಂಡಿದ್ದ ಭಕ್ತರು –ಪಿಟಿಐ ಚಿತ್ರ

ಶಿವಸೇನಾ ಮುಖಂಡನ ಪುತ್ರ ಚಾಲನೆ ಮಾಡುತ್ತಿದ್ದ ಕಾರು

ಬಿಎಂಡಬ್ಲ್ಯು ಡಿಕ್ಕಿ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಶಿವಸೇನಾ ಪಕ್ಷದ ಸ್ಥಳೀಯ ಮುಖಂಡನ ಪುತ್ರ ಚಾಲನೆ ಮಾಡುತ್ತಿದ್ದರು ಎನ್ನಲಾದ ಬಿಎಂಡಬ್ಲ್ಯು ಕಾರು ಇಲ್ಲಿನ ವರ್ಲಿ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಮಹಿಳೆ ಮೃತಪಟ್ಟಿದ್ದು, ಆಕೆಯ ಪತಿ ಗಾಯಗೊಂಡಿದ್ದಾರೆ.

ಮೃತರನ್ನು ವರ್ಲಿ ನಿವಾಸಿ ಕಾವೇರಿ ನಖವಾ (45) ಎಂದು ಗುರುತಿಸಲಾಗಿದ್ದು, ಅವರ ಪತಿ ಪ್ರದೀಕ್ ನಖವಾ (50) ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಈ ಘಟನೆಯು ಮಹಾರಾಷ್ಟ್ರದಲ್ಲಿ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

ಮದ್ಯ ಕುಡಿದು ಕಾರು ಚಾಲನೆ ಮಾಡಿದ್ದು ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಇಂತಹದೇ ಘಟನೆಗಳು ಈ ಹಿಂದೆ ಪುಣೆ ಮತ್ತು ನಾಗ್ಪುರದಲ್ಲಿ ನಡೆದಿದ್ದವು.

ಏಟ್ರಿಯಾ ಮಾಲ್ ಮತ್ತು ವರ್ಲಿ ನಡುವೆ ಮುಂಬೈ ಕೋಸ್ಟಲ್ ರಸ್ತೆಯಲ್ಲಿ ಬೆಳಿಗ್ಗೆ 5.30ಕ್ಕೆ ಅಪಘಾತ ಸಂಭವಿಸಿದೆ. ದಂಪತಿಯು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಕೊಲಾಬಾದ ಸಸೂನ್ ಧಕ್ಕೆಯಿಂದ ಮೀನು ಖರೀದಿಸಿ ವಾಪಸಾಗುತ್ತಿದ್ದರು. ಡಿಕ್ಕಿಯ ರಭಸಕ್ಕೆ ಕಾರು, ಮಹಿಳೆಯನ್ನು ಸುಮಾರು 100 ಮೀ. ದೂರದವರೆಗೆ ಎಳೆದೊಯ್ದಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣದ ನಾಯಕ ರಾಜೇಶ್ ಶಾ ಅವರ ಪುತ್ರ ಮಿಹಿರ್ ಶಾ ಕಾರು ಚಾಲನೆ ಮಾಡುತ್ತಿದ್ದರು ಎಂದು ಆರೋಪಿಸಲಾಗಿದೆ. ರಾಜೇಶ್ ಅವರು ಶಿವಸೇನಾದ ಪಾಲ್ಘರ್ ಜಿಲ್ಲಾ ಘಟಕದ ಉಪಾಧ್ಯಕ್ಷ.

ಘಟನೆಯ ಬಳಿಕ ಮಿಹಿರ್ (24 ವರ್ಷ) ತಲೆಮರೆಸಿಕೊಂಡಿದ್ದಾರೆ.

11ನೇ ಪುಟ ನೋಡಿ

ನಿಷ್ಪಕ್ಷಪಾತ ತನಿಖೆ: ಶಿಂದೆ

ಕಾರು ಅಪಘಾತದ ಬಗ್ಗೆ ಸಮಗ್ರ ತನಿಖೆ ನಡೆಸುವ ಭರವಸೆಯನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೀಡಿದ್ದಾರೆ.

'ನಡೆದಿರುವ ಘಟನೆ ತೀರಾ ದುರದೃಷ್ಟಕರ. ಕಾನೂನಿನಡಿ ಎಲ್ಲರೂ ಸಮಾನರು. ಅಪಘಾತದ ಬಗ್ಗೆ ಪೊಲೀಸರ ಜತೆ ಮಾತನಾಡಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಶಿವಸೇನಾ (ಯುಬಿಟಿ) ಬಣದ ನಾಯಕರೂ ಆಗಿರುವ ವರ್ಲಿ ಕ್ಷೇತ್ರದ ಶಾಸಕ ಆದಿತ್ಯ ಠಾಕ್ರೆ ಅವರು ಆರೋಪಿಗಳ ವಿರುದ್ಧ ಶೀಘ್ರ ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ.

ಮುಖ್ಯಾಂಶಗಳು

- ಮುಂಬೈನ ವರ್ಲಿಯಲ್ಲಿ ಭಾನುವಾರ ಬೆಳಿಗ್ಗೆ ಅಪಘಾತ
- ರಾಜಕೀಯ ವಾಕ್ಸಮರಕ್ಕೆ ಕಾರಣವಾದ ಘಟನೆ
- ಶಿವಸೇನಾ ಮುಖಂಡ, ಚಾಲಕ ಬಂಧನ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅಭಿನಂದನೆ: 'ಮದ್ಯ' ಸಮಾರಾಧನೆ

ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿದ್ದ 'ಮೈತ್ರಿ ಹಬ್ಬ'ದಲ್ಲಿ ನಶೆಯಲ್ಲಿ ತೇಲಾಡಿದ ಜನ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಚಿಕ್ಕಬಳ್ಳಾಪುರ ಕ್ಷೇತ್ರದ ಸಂಸದ ಡಾ. ಕೆ.ಸುಧಾಕರ್ ಅವರ ಅಭಿನಂದನೆಯ ಹೆಸರಿನಲ್ಲಿ ಭಾನುವಾರ ಇಲ್ಲಿ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಮದ್ಯದ ಹೊಳೆಯೇ ಹರಿದಿರುವುದನ್ನು ತೋರಿಸುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಆಯೋಜಕರು, ಪೊಲೀಸರು, ಬೌನ್ಸರ್‌ಗಳ ಭದ್ರತೆಯಲ್ಲಿ ವಿತರಿಸಿದ ಮದ್ಯ ಕುಡಿದು ಸಮಾರಂಭಕ್ಕೆ ಬಂದಿದ್ದ ಜನ ನಶೆಯಲ್ಲಿ ತೇಲಾಡಿದರು.

ಅಭಿನಂದನಾ ಕಾರ್ಯಕ್ರಮದಲ್ಲಿ ನಡೆದ ಮದ್ಯ ಹಂಚಿಕೆಯಲ್ಲಿ ಗೊಂದಲ ಉಂಟಾಗದಂತೆ ಬೌನ್ಸರ್‌ಗಳು ಮತ್ತು ಪೊಲೀಸರು ಕ್ರಮ ವಹಿಸಿದರು

ವಿಡಿಯೊದಲ್ಲಿರುವ ದೃಶ್ಯಗಳ ಪ್ರಕಾರ, ನೆಲಮಂಗಲ ತಾಲ್ಲೂಕಿನ ಬಾವಿಕೆರೆಯ ಮೈದಾನದಲ್ಲಿ ಬಿಜೆಪಿ–ಜೆಡಿಎಸ್ ನಾಯಕರು ಆಯೋಜಿಸಿದ್ದ 'ಮೈತ್ರಿ ಹಬ್ಬ' ಮದ್ಯ 'ಸಮಾರಾಧನೆ'ಯ ಸಮಾರಂಭವಾಗಿ ಪರಿವರ್ತನೆಗೊಂಡಿತ್ತು. ಜನರು ಸರದಿಯಲ್ಲಿ ನಿಂತು ಮದ್ಯ ಸ್ವೀಕರಿಸುವಾಗ ಗೊಂದಲ, ಗಲಾಟೆಗಳಾಗದಂತೆ ನೋಡಿಕೊಳ್ಳಲು ಬೌನ್ಸರ್‌ಗಳಿದ್ದರು. 'ಕಾನೂನು ಸುವ್ಯವಸ್ಥೆ' ಕಾಪಾಡಲು ಮತ್ತು ಮುಗಿಬಿದ್ದ ಜನರನ್ನು ನಿಯಂತ್ರಿಸಲು ಪೊಲೀಸರೂ ಕ್ರಮ ವಹಿಸಿದರು. ಎರಡು ಟ್ರಕ್ ಮದ್ಯ ಕೆಲವೇ ಗಂಟೆಗಳಲ್ಲಿ ಖಾಲಿಯಾಯಿತು.

8ನೇ ಪುಟ ನೋಡಿ

ಭದ್ರಾ: ನೀರು ಸೋರಿಕೆ ಬಂದ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ತಜ್ಞರು ಮೂರು ದಿನ ಸತತವಾಗಿ ದುರಸ್ತಿ ಕಾರ್ಯಾಚರಣೆ ನಡೆಸಿದ ಫಲವಾಗಿ ಲಕ್ಕವಳ್ಳಿ ಬಳಿಯ ಭದ್ರಾ ಜಲಾಶಯದಲ್ಲಿನ ನದಿಮಟ್ಟದ ಸ್ಲುಸ್ ಗೇಟ್‌ನಲ್ಲಿ ಆಗುತ್ತಿದ್ದ ನೀರಿನ ಸೋರಿಕೆ ಭಾನುವಾರ ಬೆಳಿಗ್ಗೆ ನಿಲುಗಡೆಯಾಗಿದೆ.

ಜಲಾಶಯದ ನೀರು ಸೋರಿಕೆ ಆಗುತ್ತಿರುವುದು ನೋಡಿ ಜನರಲ್ಲಿ ಆತಂಕ ಶುರುವಾಗಿತ್ತು. ಮೂರು ದಿನಗಳಿಂದ ತಜ್ಞರು ನಿರಂತರ ದುರಸ್ತಿ ಕೆಲಸ ಮಾಡಿದ ಪರಿಣಾಮ ನೀರು ಸೋರಿಕೆ ತಡೆಗಟ್ಟಲಾಗಿದೆ.

ಕರ್ನಾಟಕ ನೀರಾವರಿ ನಿಗಮದ ಸಿಬ್ಬಂದಿ, ಕೇಂದ್ರ ಜಲಸಂಪನ್ಮೂಲ ಇಲಾಖೆಯ ಅಧೀನದ ಡ್ಯಾಂ ಸೇಫ್ಟಿ ರಿವ್ಯೂ ಪ್ಯಾನಲ್ (ಡಿಎಸ್‌ಆರ್‌ಪಿ) ಮತ್ತು ಡ್ಯಾಂ ಸೇಫ್ಟಿ ಆರ್ಗನೈಸೇಷನ್ (ಡಿಎಸ್‌ಒ)ನ ತಜ್ಞರು ತ್ವರಿತವಾಗಿ ಕಾರ್ಯಾಚರಣೆ ಮಾಡಿದ್ದಾರೆ. ಆಮ್ಲಜನಕದ ಮಾಸ್ಕ್ ಧರಿಸಿಕೊಂಡು ತಜ್ಞರು ಸಮರೋಪಾದಿಯಲ್ಲಿ ಗೇಟ್‌ನ ದುರಸ್ತಿ ಮಾಡಿದ್ದಾರೆ.

6 ಮುಳುಗು ತಜ್ಞರು ಮತ್ತು ಕೊಡಗಿನಿಂದ ಬಂದಿದ್ದ 20 ಜನ ತಜ್ಞರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಹೈದರಾಬಾದ್‌ನ ಡಿಎಸ್‌ಆರ್‌ಪಿಯ ಗೇಟ್ ತಂತ್ರಜ್ಞರೊಬ್ಬರು ಆನ್‌ಲೈನ್ ಮೂಲಕ ಮಾರ್ಗದರ್ಶನ ನೀಡಿದ್ದರು. ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ ಅಮ್ಮಿನಬಾವಿ, ಕಾರ್ಯಾಚರಣೆಯ ಸಮನ್ವಯ ನಡೆಸಿದ್ದರು.

ಅನುಭವಿ ತಂಡದ ಶ್ರಮದಿಂದ ನೀರು ಹೊರಹೋಗುವುದು ತಪ್ಪಿದೆ. ಮಳೆಗಾಲದಲ್ಲಿ ಜಲಾಶಯದಲ್ಲಿ ನೀರು ಸಂಗ್ರಹ ಆಗುತ್ತಿದ್ದ ಸಂದರ್ಭ ನೀರು ಸೋರಿಕೆ ಆಗುತ್ತಿರುವುದು ರೈತರಲ್ಲಿ ಆತಂಕ ಉಂಟುಮಾಡಿತ್ತು. ತ್ವರಿತವಾಗಿ ದುರಸ್ತಿ ಮಾಡುವ ಮೂಲಕ ಅಧಿಕಾರಿಗಳು ರೈತರ ಸಮಸ್ಯೆ ನೀಗಿಸಿದ್ದಾರೆ.

ಭದ್ರಾ ಜಲಾಶಯದಲ್ಲಿನ ಸ್ಲುಸ್ ಗೇಟ್‌ನಲ್ಲಿ ಆಗುತ್ತಿದ್ದ ನೀರಿನ ಸೋರಿಕೆ ತಡೆಗಟ್ಟಿದ ಬಳಿಕ ತಜ್ಞರ ತಂಡದ ಸದಸ್ಯರು ಸಂಭ್ರಮಿಸಿದರು

> ತಜ್ಞರು ಸಮರ್ಪಕವಾಗಿ ದುರಸ್ತಿ ಕಾರ್ಯ ಮಾಡಿದ ಕಾರಣ ಜಲಾಶಯದಲ್ಲಿ ಆಗುತ್ತಿದ್ದ ನೀರಿನ ಸೋರಿಕೆಯನ್ನು ಭಾನುವಾರ ಬೆಳಿಗ್ಗೆಯಿಂದಲೇ ಸಂಪೂರ್ಣವಾಗಿ ತಡೆಗಟ್ಟಲಾಗಿದೆ
>
> **ಎನ್.ರವಿಕುಮಾರ್**, ಕಾರ್ಯನಿರ್ವಾಹಕ ಎಂಜಿನಿಯರ್, ಭದ್ರಾ ಜಲಾಶಯ ವಿಭಾಗ, ಲಕ್ಕವಳ್ಳಿ

₹4,000 ಕೋಟಿ ವೆಚ್ಚದ ಕಾಮಗಾರಿ • ಆರ್ಥಿಕ ಬಿಡ್ ತೆರೆಯಲು ಹಿಂದೇಟು

ಎಸ್‌ಎಚ್‌ಡಿಪಿ: ಟೆಂಡರ್‌ಗೆ 'ಗ್ರಹಣ'

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ (ಎಸ್‌ಎಚ್‌ಡಿಪಿ) ಐದನೇ ಹಂತದ ಮೊದಲನೇ ಘಟ್ಟದಲ್ಲಿ ₹4,000 ಕೋಟಿ ವೆಚ್ಚದ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ತೆರೆದು ಎರಡು ತಿಂಗಳಾದರೂ ಆರ್ಥಿಕ ಬಿಡ್ ತೆರೆದಿಲ್ಲ. ಟೆಂಡರ್ ಆಹ್ವಾನ ಪ್ರಾಧಿಕಾರದ ಅಧಿಕಾರಿಗಳ ವಿಳಂಬ ಧೋರಣೆಯಿಂದ ಗುತ್ತಿಗೆದಾರರು ಹೈರಾಣಾಗಿದ್ದಾರೆ.

ಟೆಂಡರ್ ಆಹ್ವಾನ ಪ್ರಾಧಿಕಾರದಲ್ಲಿರುವ ಒಂದು ಗುಂಪಿನ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿರುವ ಕುರಿತು ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ ಜಾರಕಿಹೊಳಿ ಅವರ ಬಳಿ ಗುತ್ತಿಗೆದಾರರು ದೂರು ಒಯ್ದಿದ್ದರು. ಜೂನ್ ಮೊದಲ ವಾರ ಸಭೆ ನಡೆಸಿದ್ದ ಸಚಿವರು, ಹತ್ತು ದಿನಗಳೊಳಗೆ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಳಿಸಿ, ಆರ್ಥಿಕ ಬಿಡ್ ತೆರೆಯುವಂತೆ ನಿರ್ದೇಶನ ನೀಡಿದ್ದರು. ಸಚಿವರ ನಿರ್ದೇಶನಕ್ಕೆ ಕಿಮ್ಮತ್ತು ನೀಡದ ಅಧಿಕಾರಿಗಳು, ಆ ಬಳಿಕ ತಿಂಗಳು ಕಳೆದರೂ ತಾಂತ್ರಿಕ ಬಿಡ್ ಪರಿಶೀಲನೆಯ ಹಂತದಲ್ಲೇ ಇದ್ದಾರೆ.

ಎಸ್‌ಎಚ್‌ಡಿಪಿ ಐದನೇ ಹಂತದ ಮೊದಲ ಘಟ್ಟದಲ್ಲಿ 204 ತಾಲ್ಲೂಕುಗಳ ವ್ಯಾಪ್ತಿಯಲ್ಲಿ 1,200 ಕಿಲೋಮೀಟರ್ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಟೆಂಡರ್ ಪ್ರಕ್ರಿಯೆಯನ್ನು ಲೋಕಸಭಾ ಚುನಾವಣೆ ಘೋಷಣೆಗೂ ಮೊದಲೇ ಆರಂಭಿಸಲಾಗಿತ್ತು. ಮೇ 8 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿತ್ತು.

ಸ್ಪಷ್ಟ ಕಾರಣವೇ ಇಲ್ಲ: 'ತಾಂತ್ರಿಕ ಬಿಡ್ ದಾಖಲೆಗಳ ಪರಿಶೀಲನೆಯ ನೆಪದಲ್ಲೇ ಎಸ್‌ಎಚ್‌ಡಿಪಿ ಟೆಂಡರ್ ಆಹ್ವಾನ ಪ್ರಾಧಿಕಾರದ ಅಧಿಕಾರಿಗಳು ಕಾಲಹರಣ ಮಾಡುತ್ತಿದ್ದಾರೆ. ವಿಳಂಬಕ್ಕೆ ಸ್ಪಷ್ಟ ಕಾರಣವನ್ನೇ ನೀಡುತ್ತಿಲ್ಲ' ಎಂದು ಕೆಲವು ಗುತ್ತಿಗೆದಾರರು ದೂರುತ್ತಾರೆ.

'ಎಸ್‌ಎಚ್‌ಡಿ ಕಾಮಗಾರಿಗಳ ಟೆಂಡರ್‌ನಲ್ಲಿ ಅಧಿಕಾರಿಗಳ ಕೂಟವೊಂದು ಗುತ್ತಿಗೆದಾರರಿಗೆ ಕಿರುಕುಳ ನೀಡುತ್ತಿರುವ ಬಗ್ಗೆ ನಮ್ಮ ಬಳಿಯೂ ಕೆಲವರು ದೂರಿದ್ದಾರೆ. ತಾಂತ್ರಿಕ ಬಿಡ್ ತೆರೆದು ಎರಡು ತಿಂಗಳಾದರೂ ಆರ್ಥಿಕ ಬಿಡ್ ತೆರೆಯದಿರುವುದರ ಹಿಂದಿನ ಉದ್ದೇಶವೇ ಭ್ರಷ್ಟಾಚಾರ. ಅಧಿಕಾರಿಗಳ ಬೇಡಿಕೆಗೆ ಗುತ್ತಿಗೆದಾರರನ್ನು ಒಪ್ಪಿಸಲು ಈ ಹಾದಿ ಹಿಡಿದಿದ್ದಾರೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆರೋಪಿಸಿದರು.

'ಟೆಂಡರ್ ಪ್ರಕ್ರಿಯೆಗೆ ವೇಗ': '10 ದಿನಗಳೊಳಗೆ ತಾಂತ್ರಿಕ ಬಿಡ್ ಪರಿಶೀಲನೆಗೆ ಸಚಿವರು ಸೂಚಿಸಿರುವುದು ನಿಜ. ಆದರೆ, ದಾಖಲೆಗಳ ಪರಿಶೀಲನೆ ವಿಳಂಬವಾದ ಕಾರಣ ಆರ್ಥಿಕ ಬಿಡ್ ತೆರೆಯಲು ಸಾಧ್ಯವಾಗಿಲ್ಲ. ಟೆಂಡರ್ ಪ್ರಕ್ರಿಯೆಗೆ ವೇಗ ನೀಡಿದ್ದೇವೆ' ಎಂದು ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಸಿ. ಸತ್ಯನಾರಾಯಣ ಹೇಳಿದರು.

> ಅಧಿಕಾರಿಗಳು ಸಚಿವರ ಮಾತು ಕೇಳುತ್ತಿಲ್ಲ ಅನಿಸುತ್ತಿದೆ. ಈ ಅಧಿಕಾರಿಗಳೇ ಸಚಿವರಿಗೆ ಕಳಂಕ ತರಲು ಹೊರಟಿದ್ದಾರೆ
>
> **ಡಿ. ಕೆಂಪಣ್ಣ**, ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ

ಇಲ್ಲದ ಹುದ್ದೆಯ ಪ್ರಭಾರದಲ್ಲಿ ಟೆಂಡರ್

ಎಸ್‌ಎಚ್‌ಡಿಪಿ ಮುಖ್ಯ ಎಂಜಿನಿಯರ್ ಹುದ್ದೆಯನ್ನು 2023ರ ಡಿಸೆಂಬರ್‌ನಲ್ಲಿ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ಉತ್ತರ ವಲಯ (ಬೆಳಗಾವಿ) ಕಚೇರಿಗೆ ಮರು ಹೊಂದಾಣಿಕೆ ಮಾಡಲಾಗಿತ್ತು. ಈಗ ಮಂಜೂರಾತಿಯೇ ಇಲ್ಲದ ಈ ಹುದ್ದೆಯ ಪ್ರಭಾರವನ್ನು ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆಯ (ಕೆಶಿಪ್) ಯೋಜನಾ ನಿರ್ದೇಶಕ ಪುರುಷೋತ್ತಮ ದಾಸ್ ಹೆಗ್ಗಡೆ ಅವರಿಗೆ ವಹಿಸಿದ್ದು, ಅವರೇ ಟೆಂಡರ್ ನಿರ್ವಹಣಾ ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಹುದ್ದೆಯ ಮಂಜೂರಾತಿಯೇ ಇಲ್ಲದಿರುವಾಗ ಟೆಂಡರ್‌ನಲ್ಲಿ ಅಕ್ರಮಗಳು ನಡೆದರೆ ಆ ಅಧಿಕಾರಿಯನ್ನು ಹೊಣೆ ಮಾಡಲು ಹೇಗೆ ಸಾಧ್ಯ' ಎನ್ನುತ್ತಾರೆ ಲೋಕೋಪಯೋಗಿ ಇಲಾಖೆಯ ನಿವೃತ್ತ ಅಧಿಕಾರಿಗಳು.

ಈ ಕುರಿತು ಪ್ರತಿಕ್ರಿಯಿಸಿದ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಸಿ. ಸತ್ಯನಾರಾಯಣ, 'ಎಸ್‌ಎಚ್‌ಡಿಪಿಯಲ್ಲಿ ಮುಖ್ಯ ಎಂಜಿನಿಯರ್ ಹುದ್ದೆಯ ಮಂಜೂರಾತಿ ಇಲ್ಲದಿರುವುದು ನಿಜ. ಆದರೆ, ಅನಿವಾರ್ಯ ಕಾರಣದಿಂದ ಕೆಶಿಪ್ ಯೋಜನಾ ನಿರ್ದೇಶಕರಿಗೆ ಹೆಚ್ಚುವರಿ ಪ್ರಭಾರ ವಹಿಸಲಾಗಿದೆ' ಎಂದರು.

ಅನುಮತಿ ನೀಡಲು ರಾಜ್ಯ, ಕೇಂದ್ರ ಸರ್ಕಾರಕ್ಕೆ ಬಿಎಂಆರ್‌ಸಿಎಲ್ ಪತ್ರ

‘ಡಬಲ್ ಡೆಕರ್’ಗಿಲ್ಲ ಉದ್ಘಾಟನೆ ಭಾಗ್ಯ!

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್ ಮೆಟ್ರೊ ಮಾರ್ಗದಲ್ಲಿ ‘ಡಬಲ್ ಡೆಕರ್’ ಮೇಲ್ಸೇತುವೆ ಒಂದು ಬದಿಯಿಂದ ಪೂರ್ಣಗೊಂಡಿದೆ. ಉದ್ಘಾಟನೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಪ್ಪಿಗೆಗಾಗಿ ಬಿಎಂಆರ್‌ಸಿಎಲ್ ಕಾಯುತ್ತಿದೆ.

‘ನಮ್ಮ ಮೆಟ್ರೊ’ ಆರ್.ವಿ. ರಸ್ತೆ –ಬೊಮ್ಮಸಂದ್ರ ಗುಲಾಬಿ ಮಾರ್ಗದಲ್ಲಿ ಮೇಲ್ಸೇತುವೆ ರಸ್ತೆ ಮತ್ತು ಅದರ ಮೇಲೆ ಮೆಟ್ರೊ ರೈಲು ಸಂಚಾರ ವ್ಯವಸ್ಥೆ ಇರುವ ‘ರೋಡ್ ಕಂ ರೇಲರ್’ (ಡಬಲ್ ಡೆಕರ್) ನಿರ್ಮಾಣಗೊಳ್ಳುತ್ತಿದೆ. ಅದರಲ್ಲಿ ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್‌ಬೋರ್ಡ್ ಕಡೆಗೆ ಬರುವ ಮೇಲ್ಸೇತುವೆ ಕಾಮಗಾರಿ ಮುಗಿದಿದೆ. ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ರಾಗಿಗುಡ್ಡ ಕಡೆಗೆ ತೆರಳುವ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದ್ದು, ಒಂದು ವರ್ಷದಲ್ಲಿ ಅದು ಸಂಚಾರಕ್ಕೆ ತೆರೆದುಕೊಳ್ಳಲಿದೆ. ನೆಲ ಅಂತಸ್ತಿ ನಲ್ಲಿರುವ ತ್ರಿಪಥ ರಸ್ತೆಯಲ್ಲಿ ಸಂಚಾರ ಎಂದಿನಂತೆ ಮುಂದುವರಿಯಲಿದೆ.

‘ನಗರದ ವಾಹನದಟ್ಟಣೆ ಹೆಚ್ಚಿರುವ ರಸ್ತೆಗಳಲ್ಲಿ ಒಂದಾಗಿರುವ ಈ ಮಾರ್ಗದಲ್ಲಿ 3.3 ಕಿ.ಮೀ. ಹಾದುಹೋಗಲು ಬೆಳಿಗ್ಗೆ ಮತ್ತು ಸಂಜೆಯ ಸಮಯದಲ್ಲಿ ಅರ್ಧ ಗಂಟೆಗೂ ಹೆಚ್ಚು ಸಮಯ ಹಿಡಿಯುತ್ತದೆ. ಈ ದಟ್ಟಣೆಯನ್ನು ಕಡಿಮೆ ಮಾಡಲು ಡಬಲ್ ಡೆಕರ್ ಯೋಜನೆ ಪೂರಕವಾಗಿದೆ. ಆದರೆ, 2021ರಲ್ಲಿಯೇ ಪೂರ್ಣಗೊಳ್ಳಬೇಕಿದ್ದ ಈ ಕಾಮಗಾರಿ ಈಗಾಗಲೇ ಮೂರು ವರ್ಷ ತಡವಾಗಿದೆ. ಈಗ ಒಂದು ಬದಿ ಪೂರ್ಣಗೊಂಡರೂ ಚಾಲನೆಗೊಂಡಿಲ್ಲ. ಮೇಲ್ಸೇತುವೆ ತೆರೆದುಕೊಂಡರೆ ಅರ್ಧ ಗಂಟೆಯ ಬದಲು 5–6 ನಿಮಿಷದಲ್ಲಿ ವಾಹನಗಳು ಕ್ರಮಿಸಲಿವೆ’ ಎಂದು ಆಟೊ ಚಾಲಕ ಪ್ರಕಾಶ್ ತಿಳಿಸಿದರು.

ಸಿಗ್ನಲ್ ರಹಿತ ಸಂಚಾರ: ‘ಡಬಲ್ ಡೆಕರ್’ನ ಮೇಲ್ಸೇತುವೆ ಸಿಗ್ನಲ್ ರಹಿತವಾಗಿರುವುದರಿಂದ ವಾಹನಗಳು ತಡೆರಹಿತವಾಗಿ ಸಂಚರಿಸಲಿವೆ. ಆದರೆ, ವಾಹನಗಳು ಒಮ್ಮೆ ಮೇಲ್ಸೇತುವೆ ಏರಿದರೆ 3.3 ಕಿ.ಮೀ. ಮಧ್ಯೆ ಎಲ್ಲಿಯೂ ಇಳಿಯಲು ಅವಕಾಶವಿಲ್ಲ. ಆದರೆ, ತಿರುಗಿ ಬರಲು ಮೂರು ಯು ಟರ್ನ್‌ಗಳನ್ನು ಒದಗಿಸಲಾಗಿದೆ.

ಮೇಲ್ಸೇತುವೆ ರಸ್ತೆ ವಾಹನಗಳಿಗೆ ಮುಕ್ತಗೊಂಡರೆ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ತೆರಳುವವರಿಗೆ ಭಾರಿ ಉಪಯೋಗವಾಗಲಿದೆ. ಜೊತೆಗೆ ಎಚ್‌ಎಸ್‌ಆರ್ ಬಡಾವಣೆಗೆ ಕಡೆಗೆ, ಬಿಟಿಎಂ ಲೇಔಟ್ ಕಡೆಗೆ ಸಂಚರಿಸುವ ವಾಹನಗಳಿಗೂ ಸಮಯ ಉಳಿತಾಯವಾಗಲಿದೆ.

ಎರಡು ವಾರದಲ್ಲಿ ಉದ್ಘಾಟನೆ ನಿರೀಕ್ಷೆ

‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಅಡಿಯಲ್ಲಿ ಬಿಎಂಆರ್‌ಸಿಎಲ್ ಇರುವುದರಿಂದ ಎರಡೂ ಸರ್ಕಾರಗಳು ಒಪ್ಪಿಗೆ ನೀಡಬೇಕು. ಎರಡೂ ಸರ್ಕಾರಗಳಿಗೆ ಪತ್ರ ಬರೆಯಲಾಗಿದೆ. ಇನ್ನು ಎರಡು ವಾರದ ಒಳಗೆ ಉದ್ಘಾಟನೆಗೆ ದಿನ ನಿಗದಿಯಾಗುವ ನಿರೀಕ್ಷೆ ಇದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಂಕಿ ಅಂಶಗಳು

₹3.3 ಕಿ.ಮೀ. ಡಬಲ್ ಡೆಕರ್ ಉದ್ದ

50 ಸಾವಿರ ನಿತ್ಯ ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳ ಅಂದಾಜು ಸಂಖ್ಯೆ

₹449 ಕೋಟಿ ಡಬಲ್ ಡೆಕರ್ ಯೋಜನೆ ವೆಚ್ಚ

8 ಮೀಟರ್ ಮೇಲ್ಸೇತುವೆಯ ಎತ್ತರ

16 ಮೀಟರ್ ಮೆಟ್ರೊ ಹಳಿ ಮಾರ್ಗದ ಎತ್ತರ



ಬೆಂಗಳೂರಿನ ಮೊದಲ ಡಬಲ್ ಡೆಕರ್ ಫ್ಲೈಓವರ್ –ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ಹುದ್ದೆ ಜಗ್ಗಾಟದಿಂದ ಅಭಿವೃದ್ಧಿ ಸ್ಥಗಿತ: ಶೋಭಾ ಕರಂದ್ಲಾಜೆ

ಪ್ರಜಾವಾಣಿ ವಾರ್ತೆ

ಶೋಭಾ ಕರಂದ್ಲಾಜೆ

ಬೆಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆಗಾಗಿ ಜಗ್ಗಾಟ ನಡೆಯುತ್ತಿದ್ದು, ಅಭಿವೃದ್ಧಿ ಸ್ಥಗಿತವಾಗಿದೆ ಎಂದು ಸಂಸದೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಲಾಗಿದ್ದ ‘ಕರ್ನಾಟಕ ಮೆಮೊರಿ ಚಾಂಪಿಯನ್‌ಶಿಪ್’ ಕಾರ್ಯಕ್ರಮದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರು ಅಧಿಕಾರಕ್ಕಾಗಿ ಹಗ್ಗಜಗ್ಗಾಟ ನಡೆಸುತ್ತಿದ್ದಾರೆ. ಇದರಿಂದಾಗಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಅವರು ಆರೋಪಿಸಿದರು.

ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚುತ್ತಿವೆ. ಝೀಕಾ ಸೋಂಕು ಸಹ ತೀವ್ರವಾಗಿದೆ. ಆಸ್ಪತ್ರೆಗೆ ಬಹಳಷ್ಟು ಜನರು ದಾಖಲಾಗುತ್ತಿದ್ದಾರೆ. ಆದರೆ ಸರಿಯಾದ ಚಿಕಿತ್ಸೆ, ಔಷಧ ದೊರೆಯುತ್ತಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದರು.

IN THE COURT OF CIVIL JUDGE AND JMFC AT HAGARIBOMMANAHALLI
OS.No: 117/2021

Between
Smt. Gulabjan Bennihalli and another ...**Plaintiffs**
V/s.
The Veterinary Doctor, Govt veterinary hospital and others ....**Defendants**

NOTICE

Whereas the above named Plaintiffs has filed a case U/o 7 rule 1 & 2 of C.P.C. against the Defendants the Hon'ble court has issued the summons against the Defendant no. 4, 5, 6 and 9, but same was un-served. Hence the Plaintiffs has taken steps by way of RPAD said Notice also returned un-served.
And whereas the Hon'ble court has ordered to issue by Notice by way paper publication therefore the Defendants.no.
D4. The Deputy Director, Animal husbandry and veterinary services, 1st floor, Pashupalana Bhavan, Opp: CBI office, Ballari road, Hebbal, Bengaluru.
D5. The commissioner, Director of animal husbandry and veterinary services, 1st floor, Pashupalana Bhavan, Opp: CBI office, Ballari road, Hebbal, Bengaluru.
D6. The Chief Secretary, Animal husbandry and veterinary services, Bengaluru.
D9. Smt. B. Asha W/o Suleman D/o Late Badiger Bhasha sab, C/o Smt. Mehaboobi, ward no.8, Bangerakeri, Harapanahalli Taluk, Vijayanagara District.
May appear in the court Civil Judge J.M.F.C. H.B.Halli on day 09 of.08.2024 at 11 ‘0’ clock and file your objections if any failing to appear on the above said date and time the Matter will be heard and determined exparte.
Given under my hand seal of the court at H.B.Halli on this: 06/07 day of 2024.
Chief Ministerial officer, Court of civil Judge and JMFC H.B. Halli
B.BASAVARAJA,
Advocate for plaintiffs

ಬೈಕ್ ಡಿಕ್ಕಿ: ಸವಾರ ಸಾವು

ಬೆಂಗಳೂರು: ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಬಿಎಸ್‌ಎಫ್ ಕ್ಯಾಂಪ್ ಬಳಿ ಬೈಕ್ ಒಂದು ನಿಯಂತ್ರಣ ತಪ್ಪಿ ರಸ್ತೆ ಬದಿಯ ತಡೆಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಾಗಲೂರಿನಲ್ಲಿ ನೆಲೆಸಿದ್ದ ಮೊಹಮ್ಮದ್ ಸುಹೇಲ್(25) ಮೃತ ಸವಾರ. ಹಿಂಬದಿ ಸವಾರ ಅನಿರುದ್ಧ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶನಿವಾರ ತಡರಾತ್ರಿ ಈ ಅಪಘಾತ ಸಂಭವಿಸಿದೆ.

ಕೇರಳದ ಮೊಹಮ್ಮದ್ ಸುಹೇಲ್ ಅವರು ಇಂಡಿಗೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನಗರದ ಬಾಗಲೂರಿನಲ್ಲಿ ಸ್ನೇಹಿತ ಅನಿರುದ್ಧ್ ಜತೆಗೆ ಬಾಡಿಗೆ ಕೊಠಡಿಯಲ್ಲಿ ನೆಲೆಸಿದ್ದರು. ಶನಿವಾರ ರಾತ್ರಿ ಇಬ್ಬರೂ ಹುಣಸಮಾರನಹಳ್ಳಿಯಲ್ಲಿ ಊಟ ಮುಗಿಸಿಕೊಂಡು ಬೈಕ್‌ನಲ್ಲಿ ತೆರಳುತ್ತಿದ್ದರು. ಬಿಎಸ್‌ಎಫ್ ಕ್ಯಾಂಪ್ ಬಳಿ ಬರುವಾಗ ನಿಯಂತ್ರಣ ತಪ್ಪಿದ ಬೈಕ್ ರಸ್ತೆಯ ಎಡಭಾಗದ ತಡೆಗೋಡೆಗೆ ಡಿಕ್ಕಿ ಹೊಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಡಿಕ್ಕಿಯ ರಭಸಕ್ಕೆ ಸವಾರರಿಬ್ಬರೂ ಬೈಕ್ ಸಹಿತ ರಸ್ತೆಗೆ ಬಿದ್ದಿದ್ದರು. ಹೆಲ್ಮೆಟ್ ಧರಿಸದ ಕಾರಣ ಸವಾರ ಸುಹೇಲ್ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು. ಸ್ಥಳೀಯರ ನೆರವಿನಿಂದ ಅವರನ್ನು ಶನಿವಾರ ರಾತ್ರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಭಾನುವಾರ ಮುಂಜಾನೆ ಸುಹೇಲ್ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಅನಿರುದ್ಧ್ ಅವರ ಬಲಗಾಲಿಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರು.

ಅತಿವೇಗ, ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈ ಸಂಬಂಧ ಯಲಹಂಕ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಪೊಲೀಸರು ಹೇಳಿದರು.

hudco ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ
(ಭಾರತ ಸರ್ಕಾರದ ಉದ್ಯಮ)
ಪ್ರಾದೇಶಿಕ ಕಛೇರಿ, ಬೆಂಗಳೂರು.
ಇ–ಮೇಲ್: bro@hudco.org

ಟೆಂಡರ್ ಪ್ರಕಟಣೆ

ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ (ಹುಡ್ಕೋ), ಭಾರತ ಸರ್ಕಾರದ ಉದ್ಯಮ, ಇವರು ಬೆಂಗಳೂರಿನ ಆರ್‌ಎಂವಿ ಎಕ್ಸ್‌ಟೆನ್ಷನ್ ನಲ್ಲಿರುವ ಒಂದು ಸಿಬ್ಬಂದಿ ಕ್ವಾರ್ಟರ್ಸ್‌ನಲ್ಲಿ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ/ಪ್ರತಿಷ್ಠಿತ ಸಂಸ್ಥೆಗಳು/ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗೆ ನಮ್ಮ ವೆಬ್‌ಸೈಟ್: www.hudco.orgಗೆ ಭೇಟಿನೀಡಿ. ಸಂಪರ್ಕಿಸಬೇಕಾದ ಸಂಖ್ಯೆ: 080–25587009/ 25582602. ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 23.07.2024.**

ಭೇಟಿನೀಡಿ : www.hudco.org ಮತ್ತು www.eprocure.gov.in

‘ಡೇಟಿಂಗ್ ಆ್ಯಪ್’ನಲ್ಲಿ ಖಾಸಗಿ ಮಾಹಿತಿ ಹಂಚಿಕೆ

ಯುವತಿಗೆ ಕಿರುಕುಳ: ಪಿ.ಜಿ ಮಾಲೀಕನ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ಪೇಯಿಂಗ್ ಗೆಸ್ಟ್‌ನ(ಪಿ.ಜಿ) ಅವ್ಯವಸ್ಥೆಯ ಬಗ್ಗೆ ವಿಮರ್ಶೆ ಮಾಡಿದ್ದ ಯುವತಿಯ ವೈಯಕ್ತಿಕ ಮಾಹಿತಿಯನ್ನು ‘ಡೇಟಿಂಗ್ ಆ್ಯಪ್’ನಲ್ಲಿ ಪೋಸ್ಟ್ ಮಾಡಿ ಕಿರುಕುಳ ನೀಡಿದ್ದ ಪಿ.ಜಿ ಮಾಲೀಕನನ್ನು ಪೂರ್ವ ವಿಭಾಗದ ಸೆನ್ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಶೇಷಾದ್ರಿಪುರ ನಿವಾಸಿ ಆನಂದ್ ಶರ್ಮಾ(32) ಬಂಧಿತ ಆರೋಪಿ.

‘ಆರೋಪಿಯ ಮೊಬೈಲ್ ಜಪ್ತಿ ಮಾಡಲಾಗಿದೆ. 24 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಸೆನ್ ಠಾಣೆ ಪೊಲೀಸರು ಹೇಳಿದರು.

‘ರಾಜಸ್ಥಾನ ಮೂಲದ ಆನಂದ್ ಶರ್ಮಾ ಅವರು ಶೇಷಾದ್ರಿಪುರದಲ್ಲಿ ‘ವಿ–ಸ್ಟೇಜ್’ ಹೆಸರಿನ ಪಿ.ಜಿ ನಡೆಸುತ್ತಿದ್ದಾರೆ. ಇದೇ ಪಿ.ಜಿಯಲ್ಲಿ ದೂರು ನೀಡಿದ್ದ ಯುವತಿ ಕೆಲವು ತಿಂಗಳಿಂದ ನೆಲೆಸಿದ್ದರು. ಪಿ.ಜಿಯಲ್ಲಿ ಸರಿಯಾದ ವ್ಯವಸ್ಥೆ ಇರಲಿಲ್ಲದ್ದಕ್ಕೆ ಆಕೆ ಪಿ.ಜಿ ತೊರೆದು ಬೇರೊಂದು ಪಿ.ಜಿಗೆ ಹೋಗಿದ್ದರು. ಸಾಮಾಜಿಕ ಮಾಧ್ಯಮದಲ್ಲಿ ಯುವತಿ ಮಾಡಿದ್ದ ವಿಮರ್ಶೆ ಗಮನಿಸಿದ್ದ ಆರೋಪಿ, ಆಕೆಗೆ ಬುದ್ಧಿ ಕಲಿಸಬೇಕೆಂದು ಕಿರುಕುಳ ನೀಡಿದ್ದರು’ ಎಂದು ಪೊಲೀಸರು ಹೇಳಿದರು

‘ಕಾಲ್ ಗರ್ಲ್’ ಎಂದು ಬಿಂಬಿಸಿದ್ದ ಆರೋಪಿ’: ‘ಯುವತಿ ಪಿ.ಜಿ ಸೇರುವಾಗ ತನ್ನ ವೈಯಕ್ತಿಕ ದಾಖಲೆಗಳನ್ನು ಪಿ.ಜಿ ಮಾಲೀಕರಿಗೆ ನೀಡಿದ್ದರು. ಆ ಎಲ್ಲ ಮಾಹಿತಿಯನ್ನು ಆನಂದ್ ಶರ್ಮಾ ಅವರು ‘ಲೋಕ್ಯಾಂಟೊ’ ಎಂಬ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಿದ್ದರು.ಅಲ್ಲದೆ, ಯುವತಿಯ ಪೋಟೊವನ್ನು ಅಪ್‌ಲೋಡ್ ಮಾಡಿ, ‘ಕಾಲ್ ಗರ್ಲ್’ ಎಂದು ಬಿಂಬಿಸಿದ್ದರು. ಹೀಗಾಗಿ ಆಕೆಗೆ ಕೆಲವು ಯುವಕರಿಂದ ಕರೆಗಳು ಬರುತ್ತಿದ್ದವು. ಅಲ್ಲದೇ ಆಕೆಯ ಮೊಬೈಲ್ ಸಂಖ್ಯೆಯನ್ನೂ ಆರೋಪಿ ತನ್ನ ಆಪ್ತ ಬಳಗದಲ್ಲಿ ಹಂಚಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

ತಪ್ಪೊಪ್ಪಿಕೊಂಡ ಆರೋಪಿ: ‘ವಿಚಾರಣೆ ವೇಳೆ ಕೃತ್ಯ ಎಸಗಿರುವ ಬಗ್ಗೆ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

2ನೇ ವಿಮಾನ ನಿಲ್ದಾಣ: ಚರ್ಚಿಸಿ ತೀರ್ಮಾನ –ಎಂ.ಬಿ. ಪಾಟೀಲ

ಬೆಂಗಳೂರು: ‘ರಾಜ್ಯದ ರಾಜಧಾನಿಯ ಸಮೀಪ ಮತ್ತೊಂದು ವಿಮಾನ ನಿಲ್ದಾಣ ಅಗತ್ಯವಾಗಿದ್ದು, ಇದನ್ನು ಎಲ್ಲಿ ನಿರ್ಮಿಸಬೇಕು ಎನ್ನುವ ಬಗ್ಗೆ ಮತ್ತೊಂದು ಸುತ್ತಿನ ಚರ್ಚೆ ಮತ್ತು ಮುಖ್ಯಮಂತ್ರಿ ಜತೆ ವಿಚಾರ ವಿನಿಮಯ ನಡೆಸಿ ತೀರ್ಮಾನಿಸಲಾಗುವುದು’ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಭಾನುವಾರ ಮಾತನಾಡಿ, ‘ಈ ಕುರಿತು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯಲ್ಲಿ ಒಂದು ಸಭೆ ನಡೆದಿದೆ. ಸದ್ಯಕ್ಕೆ ಬಿಐಎಎಲ್ ಜತೆ ಚಾಲ್ತಿಯಲ್ಲಿರುವ ಒಪ್ಪಂದದ ಪ್ರಕಾರ 2033ರವರೆಗೆ 150 ಕಿ.ಮೀ. ಅಂತರದಲ್ಲಿ ಇನ್ನೊಂದು ವಿಮಾನ ನಿಲ್ದಾಣ ನಿರ್ಮಿಸಬಾರದು ಎಂಬ ಷರತ್ತಿದೆ. ನಾವು ಈಗಿನಿಂದಲೇ ಕಾರ್ಯಪ್ರವೃತ್ತರಾದರೆ ಇನ್ನು ಎಂಟು ವರ್ಷಗಳಲ್ಲಿ ಪ್ರಗತಿ ಸಾಧಿಸಬಹುದು’ ಎಂದರು.

‘ಬೆಂಗಳೂರಿನ ದಕ್ಷಿಣ ಭಾಗ, ಕನಕಪುರ ಕಡೆಯಿಂದ ಪ್ರಯಾಣಿಕರ ಒತ್ತಡವಿದೆ. ಈಗಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದಲ್ಲೇ ನೂತನ ವಿಮಾನ ನಿಲ್ದಾಣ ನಿರ್ಮಿಸಬೇಕು ಎಂದಾದರೆ ದಾಬಸ್‌ಪೇಟೆ, ತುಮಕೂರನ್ನು ಆಯ್ಕೆ ಮಾಡಬೇಕಾಗುತ್ತದೆ’ ಎಂದರು.

‘ಮುಂಬೈ ನಗರದಲ್ಲಿ ಎರಡು ವಿಮಾನ ನಿಲ್ದಾಣಗಳ ನಡುವೆ ಕೇವಲ 36 ಕಿ.ಮೀ. ಅಂತರವಿದೆ. ನ್ಯೂಯಾರ್ಕ್ ಮತ್ತು ಲಂಡನ್‌ನಲ್ಲಿ ಕೂಡ ಹೆಚ್ಚು ದೂರವಿಲ್ಲ. ಜೊತೆಗೆ, ಬಿಐಎಎಲ್ ಹೊಂದಿರುವ ಷರತ್ತು ತಮಿಳುನಾಡಿಗೂ ಅನ್ವಯ ಆಗುತ್ತದೆಯೇ ಇಲ್ಲವೋ ಪರಿಶೀಲಿಸಬೇಕು’ ಎಂದು ಅವರು ವಿವರಿಸಿದರು.

‘ಸಾಮಾಜಿಕ ಜಾಲತಾಣ ಸರ್ವಜ್ಞ ಪೀಠದಂತಾಗಿವೆ’

ಬೆಂಗಳೂರು: ‘ಸಾಮಾಜಿಕ ಜಾಲತಾಣಗಳು ಸರ್ವಜ್ಞ ಪೀಠದಂತೆ, ನ್ಯಾಯಾಲಯಗಳಂತೆ ಕೆಲಸ ಮಾಡಲು ಶುರುಮಾಡಿವೆ. ಇದರಿಂದ ಸತ್ಯವು ಅಗ್ಗವಾಗಿದೆ’ ಎಂದು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಗುರುಪ್ರಸಾದ ಕಾಗಿನೆಲೆ ಅವರ ‘ಸತ್ಕುಲಪ್ರಸೂತರು’, ಸಂತೋಷ್ ಅನಂತಪುರ ಅವರ ‘ತೃಷೆ’, ಮೌನೇಶ ಬಡಿಗೇರ ಅವರ ‘ಜೀವ ಜಾತ್ರೆ’ ಹಾಗೂ ‘ಪ್ರಜಾವಾಣಿ’ ಉಪ ಸಂಪಾದಕಿ ಸುಶೀಲಾ ಡೋಣೂರ ಅವರ ‘ಪೀಜಿ’ ಕೃತಿಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು. ‘ಸಾಮಾಜಿಕ ಜಾಲತಾಣವು ಅಗಾಧವಾಗಿ ಬೆಳೆದು ನಿಂತಿದೆ. ಪ್ರಭುತ್ವವು ಅದನ್ನು ಒಪ್ಪಿಕೊಳ್ಳಬೇಕಾದ ಸ್ಥಿತಿಗೆ ತಲುಪಿದೆ. ಈ ಜಾಲತಾಣಗಳು ಸತ್ಯವನ್ನು ಉತ್ಪಾದಿಸಲು ತೊಡಗಿಕೊಂಡಿವೆ. ಉತ್ಪಾದನೆ ಮತ್ತು ಶೋಧನೆಯ ನಡುವೆ ವ್ಯತ್ಯಾಸವಿದ್ದು, ಉತ್ಪಾದನೆಯಿಂದ ಸತ್ಯ ಅಗ್ಗವಾಗುತ್ತಿದೆ’ ಎಂದು ತಿಳಿಸಿದರು.

ಪತ್ರಕರ್ತ ಜೋಗಿ ಹಾಗೂ ‘ಪ್ರಜಾವಾಣಿ’ಯ ಮುಖ್ಯ ಉಪಸಂಪಾದಕಿ ರಶ್ಮಿ ಎಸ್. ಕೃತಿಯ ಬಗ್ಗೆ ಮಾತನಾಡಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಅಪಘಾತ: ಮಹಿಳೆ ಸಾವು

ಬೆಂಗಳೂರು: ನೆಲಮಂಗಲದ ದಾಸನಪುರ ಸಮೀಪ ರಾಷ್ಟ್ರೀಯ ಹೆದ್ದಾರಿ ದಾಟುತ್ತಿದ್ದ ಮಹಿಳೆಗೆ ಲಾರಿ ಡಿಕ್ಕಿಯಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತಪಟ್ಟ ಮಹಿಳೆಯ ಗುರುತು ಪತ್ತೆಯಾಗಿಲ್ಲ.

‘ನೆಲಮಂಗಲದ ಕಡೆಯಿಂದ ಬೆಂಗಳೂರಿನತ್ತ ಬರುತ್ತಿದ್ದ ಲಾರಿಯು ರಸ್ತೆ ದಾಟುತ್ತಿದ್ದ ಮಹಿಳೆಗೆ ಡಿಕ್ಕಿ ಆಗಿದೆ. ಚಾಲಕ ರಸ್ತೆಯಲ್ಲೇ ಲಾರಿ ಬಿಟ್ಟು ಪರಾರಿಯಾಗಿದ್ದಾನೆ’ ಎಂದು ಸಂಚಾರ ಪೊಲೀಸರು ಹೇಳಿದರು.

ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಿಂಗಳಿಗೆ ₹20 ಸಾವಿರ ಕೊಡುವಂತೆ ಬೆದರಿಕೆ

‘ರಾಜ್’ ನ್ಯೂಸ್ ಸಿಇಒ ವಿರುದ್ಧ ಇನ್ನೊಂದು ಎಫ್‌ಐಆರ್: ನಿರೂಪಕಿ ದಿವ್ಯಾಗಾಗಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪಾ ಮಾಲೀಕರನ್ನು ಬೆದರಿಸಿ ಹಣ ಸುಲಿಗೆಗೆ ಪ್ರಯತ್ನಿಸಿದ್ದ ಆರೋಪದಡಿ ‘ರಾಜ್’ ನ್ಯೂಸ್ ಸಿಇಒ ವೆಂಕಟೇಶ್ ಅವರ ವಿರುದ್ಧ ಇನ್ನೊಂದು ಎಫ್‌ಐಆರ್ ದಾಖಲಾಗಿದೆ.

ಮಹೇಶ್ ಶೆಟ್ಟಿ ಎಂಬುವವರು ನೀಡಿದ ದೂರು ಆಧರಿಸಿ ಇಂದಿರಾನಗರ ಠಾಣೆ ಪೊಲೀಸರು ಜುಲೈ 5ರಂದು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಇಂದಿರಾನಗರದ (100 ಅಡಿ ರಸ್ತೆ) 15ನೇ ಮುಖ್ಯರಸ್ತೆಯಲ್ಲಿರುವ ‘ಟ್ರೀ ಸ್ಪಾ ಆ್ಯಂಡ್ ಬ್ಯೂಟಿ ಪಾರ್ಲರ್’ನ ವ್ಯವಸ್ಥಾಪಕ ಶಿವಕುಮಾರ್ ಎಂಬುವವರು ನೀಡಿದ್ದ ದೂರು ಆಧರಿಸಿ ಜೆ.ಬಿ. ನಗರ ಠಾಣೆಯ ಪೊಲೀಸರು ವೆಂಕಟೇಶ್ ಹಾಗೂ ನಿರೂಪಕಿ ದಿವ್ಯಾ ವಸಂತ ಅವರ ಸಹೋದರ ಸಂದೇಶ ಅವರನ್ನು ಶುಕ್ರವಾರ ಬಂಧಿಸಿದ್ದರು. ಅದೇ ಮಾದರಿ ಯಲ್ಲಿ ಸುಲಿಗೆಗೆ ಯತ್ನಿಸಿದ್ದ ಅರೋಪದಡಿ ವೆಂಕಟೇಶ್ ಮೇಲೆ ಮತ್ತೊಂದು ಪ್ರಕರಣ ದಾಖಲಾಗಿದೆ.

ವೆಂಕಟೇಶ್

ಜೆ.ಬಿ. ನಗರ ಠಾಣೆ ಪ್ರಕರಣ ಸಂಬಂಧ ದಿವ್ಯಾ ಹಾಗೂ ಆಕಾಶ್ ಅವರ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಏನಿದು ಇನ್ನೊಂದು ಪ್ರಕರಣ?: ಮಹೇಶ್ ಶೆಟ್ಟಿ ಅವರು ಇಂದಿರಾನಗರದ 80 ಅಡಿ ರಸ್ತೆಯ ಮೈಕಲ್ ಪಾಳ್ಯದಲ್ಲಿ ‘ಸಹಾರಾ ಇಂಟರ್‌ನ್ಯಾಷನಲ್ ಸ್ಪಾ’ ತೆರೆದಿದ್ದರು. ಬಿಬಿಎಂಪಿಯಿಂದ ಪರವಾನಗಿ ಪಡೆದುಕೊಂಡಿದ್ದರು. ನಂತರ ಮಧುಸೂದನ್ ಅವರಿಗೆ ಸ್ಪಾದ ಉಸ್ತುವಾರಿ ವಹಿಸಿಕೊಟ್ಟಿದ್ದರು. ಜೂನ್ 19ರಂದು ಗ್ರಾಹಕರ ಸೋಗಿನಲ್ಲಿ ವ್ಯಕ್ತಿಯೊಬ್ಬರು ಸ್ಪಾಗೆ ಬಂದು, 90 ನಿಮಿಷದ ಥೆರಪಿಗೆ ಹೆಸರು ನೋಂದಾಯಿಸಿ ₹8 ಸಾವಿರ ಪಾವತಿಸಿದ್ದರು. ಸ್ಪಾ ಸಿಬ್ಬಂದಿ ಥೆರಪಿ ಮಾಡಿ ಅವರನ್ನು ಕಳುಹಿಸಿದ್ದರು. ಅದಾದ ಕೆಲವೇ ನಿಮಿಷಗಳಲ್ಲಿ ಸ್ಪಾದ ವ್ಯವಸ್ಥಾಪಕ ಇಮ್ಯಾನುವೆಲ್‌ಗೆ ಆರೋಪಿ ವೆಂಕಟೇಶ್ ಕರೆ ಮಾಡಿ, ರಾಜ್ ನ್ಯೂಸ್ ಸಿಇಒ ಎಂದು ಪರಿಚಯಿಸಿಕೊಂಡಿದ್ದರು. ಖಾಸಗಿಯಾಗಿ ಮಾತುಕತೆ ನಡೆಸಬೇಕೆಂದು ಹೇಳಿ ಮಹೇಶ್ ಶೆಟ್ಟಿ ಅವರನ್ನು ಯಲಹಂಕ ನ್ಯೂಟೌನ್‌ಗೆ ಕರೆಸಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

₹25 ಲಕ್ಷಕ್ಕೆ ಬೇಡಿಕೆ: ‘ಸ್ಥಳಕ್ಕೆ ಬಂದಿದ್ದ ಆರೋಪಿ ವೆಂಕಟೇಶ್ ಅವರು ಮಹೇಶ್ ಶೆಟ್ಟಿ ಅವರನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಮೊಬೈಲ್ ಸ್ವಿಚ್ಡ್ ಆಫ್ ಮಾಡಿಸಿದ್ದರು. ನಿಮ್ಮ ಸ್ಪಾದಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆ ಎಂದು ಹೇಳಿ, ಮೊಬೈಲ್‌ನಲ್ಲಿದ್ದ ವಿಡಿಯೊವೊಂದನ್ನು ತೋರಿಸಿದ್ದರು. ₹25 ಲಕ್ಷ ನೀಡಿದರೆ ವಿಡಿಯೊ ಡಿಲೀಟ್ ಮಾಡುತ್ತೇನೆಂದು ಹೇಳಿದ್ದರು. ಹಣ ಕೊಡದಿದ್ದರೆ ವಾಹಿನಿಯಲ್ಲಿ ಪ್ರಸಾರ ಮಾಡುವುದಾಗಿ ಬೆದರಿಸಿದ್ದರು. ಅಷ್ಟು ಹಣವಿಲ್ಲ ಎಂದು ತಿಳಿಸಿದಾಗ ₹10 ಲಕ್ಷಕ್ಕೆ ಪಟ್ಟು ಹಿಡಿದಿದ್ದರು. ಅಂತಿಮವಾಗಿ ₹1 ಲಕ್ಷಕ್ಕೆ ಮಾತುಕತೆ ಆಗಿತ್ತು. ಸ್ಪಾ ಮಾಲೀಕರು ಹೆದರಿ ನಾಲ್ಕು ಕಂತುಗಳಲ್ಲಿ ₹1 ಲಕ್ಷ ಪಾವತಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೆಲವು ದಿನಗಳ ಬಳಿಕ ಮತ್ತೆ ಕರೆ ಮಾಡಿದ್ದ ವೆಂಕಟೇಶ್ ಅವರು ಪ್ರತಿ ತಿಂಗಳು ₹20 ಸಾವಿರ ಹಣವನ್ನು ಗೂಗಲ್ ಪೇ ಮೂಲಕ ನೀಡುವಂತೆ ಬೇಡಿಕೆ ಇಟ್ಟಿದ್ದರು. ಹಣ ನೀಡದಿದ್ದರೆ ಸ್ಪಾದಲ್ಲಿ ರಾಜ್ಯ, ಹೊರ ರಾಜ್ಯದ ಮಹಿಳೆಯರನ್ನು ಇರಿಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಸುದ್ದಿ ಪ್ರಸಾರ ಮಾಡುತ್ತೇನೆಂದು ಬೆದರಿಕೆ ಹಾಕಿದ್ದರು’ ಎಂದು ಪೊಲೀಸರು ಹೇಳಿದರು.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು–560 029
ದೂರವಾಣಿ : 25536625, 25536789

IFT No.: ಕಹಾಮ/ಅಭಿ/CFPR-Solar Water heater/1893/2024–25 ದಿನಾಂಕ: 05–07–2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಡಿಯಲ್ಲಿ
ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರಿ ಹಾಲು ಮಂಡಳ ವತಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರ. ಸಂ.	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.ಗಳಲ್ಲಿ	ಮುಕ್ತಾಯದ ಅವಧಿ
1	ರಾಜಾನುಕುಂಟೆಯ ಪಶು ಆಹಾರ ಘಟಕಕ್ಕೆ 12000 LPD ಸೋಲಾರ್ ವಾಟರ್ ಹೀಟರ್, ಪೈಪಿಂಗ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ, ಚಾಲನೆಗೊಳಿಸುವ ಮತ್ತು ಮತ್ತಿತರೆ ಕೆಲಸಗಳು.	1 ಜಾಬ್	50,000/–	2 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 08–07–2024 ರಿಂದ 16–7–2024 ರ ಸಾಯಂಕಾಲ 4:00 ಗಂಟೆಯವರೆಗೆ. 2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16–7–2024 ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 18–7–2024 ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

ಒಪಿಎಸ್ ಜಾರಿಗೆ ಸರ್ಕಾರ ಬದ್ಧ: ಪರಮೇಶ್ವರ

ತುಮಕೂರು: ‘ಹಳೆ ಪಿಂಚಣಿ ಯೋಜನೆ (ಒಪಿಎಸ್), 7ನೇ ವೇತನ ಆಯೋಗದ ವರದಿ ಜಾರಿಗೆ ಸರ್ಕಾರ ಬದ್ಧವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಯಾರಿಗೂ ಮೋಸ ಮಾಡುವುದಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಭರವಸೆ ನೀಡಿದರು.

ನಗರದಲ್ಲಿ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರಿಗೆ ಏರ್ಪಡಿಸಿದ್ದ ಕೃತಜ್ಞತಾ ಸಮಾರಂಭದಲ್ಲಿ ಮಾತನಾಡಿದರು.

7ನೇ ವೇತನ ಆಯೋಗದ ವರದಿ ಜಾರಿಗೆ ₹18ಸಾವಿರ ಕೋಟಿ, ಒಪಿಎಸ್ ಅನುಷ್ಠಾನಕ್ಕೆ ಸಾವಿರಾರು ಕೋಟಿ, ಗ್ಯಾರಂಟಿ ಮುನ್ನಡೆಸಲು ₹58 ಸಾವಿರ ಕೋಟಿ ಬೇಕು. ಸಂದರ್ಭ ನೋಡಿಕೊಂಡು ಎಲ್ಲ ಯೋಜನೆಗಳನ್ನು ಅನುಷ್ಠಾನ ಮಾಡುತ್ತೇವೆ ಎಂದರು.

ರಾಜಕಾಲುವೆಯಲ್ಲಿ ಕೊಚ್ಚಿ ಹೋಗಿದ್ದ ಡೆಲಿವರಿ ಬಾಯ್ ಮೃತದೇಹ ಪತ್ತೆ

ಬೆಂಗಳೂರು: ಮೈಸೂರು ರಸ್ತೆಯ ಜ್ಞಾನಭಾರತಿ ಮೆಟ್ರೊ ನಿಲ್ದಾಣ ಬಳಿಯ ರಾಜಕಾಲುವೆಯಲ್ಲಿ ಬಿದ್ದು ಕೊಚ್ಚಿ ಹೋಗಿದ್ದ ಡೆಲಿವರಿ ಬಾಯ್ ಮೃತದೇಹ ಭಾನುವಾರ ಬೆಳಿಗ್ಗೆ ಪತ್ತೆಯಾಗಿದೆ.

ಬ್ಯಾಟರಾಯನಪುರ ನಿವಾಸಿ ಹೇಮಂತ್ ಕುಮಾರ್(28) ಮೃತಪಟ್ಟವರು.

‘ಪೋರ್ಟರ್ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಹೇಮಂತ್‌ಕುಮಾರ್, ಶುಕ್ರವಾರ ರಾತ್ರಿ 10.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಮೈಸೂರು ರಸ್ತೆಯ ಜ್ಞಾನಭಾರತಿ ಕಡೆಯಿಂದ ಬ್ಯಾಟರಾಯನಪುರದ ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿ ಬೈಕ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ಆಯತಪ್ಪಿ ರಸ್ತೆ ಪಕ್ಕದಲ್ಲಿರುವ ರಾಜಕಾಲುವೆಗೆ ಅವರು ಬಿದ್ದಿದ್ದರು.

ಸ್ಥಳದಲ್ಲಿದ್ದವರು ರಕ್ಷಣೆಗೆ ಮುಂದಾದರೂ ಸಾಧ್ಯವಾಗಿರಲಿಲ್ಲ. ಅದೇ ವೇಳೆಯಲ್ಲಿ ಜೋರು ಮಳೆ ಸುರಿಯುತ್ತಿದ್ದ ಪರಿಣಾಮ ನೀರಿನ ಹರಿವು ಹೆಚ್ಚಿದ್ದರಿಂದ ಅವರು ಕೊಚ್ಚಿ ಹೋಗಿದ್ದರು’ ಎಂದು ಪೊಲೀಸರು ಹೇಳಿದರು

‘ಮಾಹಿತಿ ತಿಳಿದು ಶುಕ್ರವಾರ ರಾತ್ರಿಯೇ ಸ್ಥಳಕ್ಕೆ ಬಂದಿದ್ದ ಸ್ಥಳೀಯ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರೂ ಸುಳಿವು ಸಿಕ್ಕಿರಲಿಲ್ಲ. ಶನಿವಾರ ಸಂಜೆವರೆಗೂ ಕಾರ್ಯಾಚರಣೆ ನಡೆಸಿ, ಸ್ಥಗಿತಗೊಳಿಸಲಾಗಿತ್ತು. ಭಾನುವಾರ ಬೆಳಿಗ್ಗೆ ಮತ್ತೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ಬೈಕ್‌ ಸವಾರ ಬಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮೃತದೇಹ ಸಿಕ್ಕಿದೆ’ ಎಂದು ಪೊಲೀಸರು ತಿಳಿಸಿದರು.

ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಈಗ ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆಯಲ್ಲಿ ಸ್ವಯಂ ಅಪಘಾತ ಪ್ರಕರಣ ದಾಖಲಾಗಿದೆ. ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಉಚಿತ ನೋಟ್ ಪುಸ್ತಕಗಳ ವಿತರಣೆ: ಚಾಲನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಬಿ.ಆರ್. ಶಿವಮಾದಯ್ಯ, ಎಂ. ಅಮೃತ್‌ಗೌಡ, ಆಯೋಜನೆ: ಎಸ್.ಟಿ. ಸೋಮಶೇಖರ್ ಗೌಡರ ಅಭಿಮಾನಿ ಬಳಗ, ಸ್ಥಳ: ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆ ರಘುವನಹಳ್ಳಿ, ಕನಕಪುರ ಮುಖ್ಯರಸ್ತೆ, ಹೆಮ್ಮಿಗೇಪುರ, ಬೆಳಿಗ್ಗೆ 11

‘ಖಲೀಲ್ ಮಾಮೂನ್’ ಅವರಿಗೆ ನುಡಿ ನಮನ: ಚಾಲನೆ: ಮೊಹಮ್ಮದ್ ಅಲಿ ಖಾಜಿ, ನುಡಿಗೌರವ: ಚಿರಂಜೀವಿ ಸಿಂಘ್, ಅಜಯ್ ಕುಮಾರ್ ಸಿಂಗ್, ಅಜೀಜುಲ್ಲಾ ಬೇಗ್, ಯು. ನಿಸಾರ್ ಅಹ್ಮದ್, ಮೊಹಮ್ಮದ್ ಆಜಂ ಶಾಹೀದ್, ಎಚ್.ಎಸ್. ಶಿವಪ್ರಕಾಶ, ಮಾಹೇರ್ ಮನಸೂರ್, ಮಿಲನ್‌ಸಾರ್ ಅಥರ್ ಅಹ್ಮದ್, ಶಾಹಿಸ್ತಾ ಯೂಸೂಫ್, ಆಯೋಜನೆ: ಕರ್ನಾಟಕ ಉರ್ದು ಅಕಾಡೆಮಿ, ಸ್ಥಳ: ಕೆಎಂಡಿಸಿ ಭವನದ ಸಭಾಂಗಣ, ಶೇಷಾದ್ರಿಪುರ, ಎಸ್.ಸಿ. ರಸ್ತೆ, ಸಂಜೆ 4

ಚಿರಂಜೀವಿ ಸಿಂಘ್

ಕ್ಲಾಸ್ ಆಫ್ 2024: ಅತಿಥಿಗಳು: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಮಾರ್ಟಿನ್ ಸಿ. ಬೂರಗ್ಗೆ, ಆಯೋಜನೆ ಮತ್ತು ಸ್ಥಳ: ಬಿಷಪ್ ಕಾಟನ್ ವುಮೆನ್ಸ್ ಕ್ರಿಶ್ಚಿಯನ್ ಕಾಲೇಜು, ಸಿಎಸ್‌ಐ ಕಾಂಪೌಂಡ್, ಮಿಷನ್ ರಸ್ತೆ, ಸಂಜೆ 5

‘ಸಾಲುಮರಗಳ ತಾಯಿ ತಿಮ್ಮಕ್ಕ’ ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಚಾಲನೆ: ಕನ್ನಿಕಾಪರಮೇಶ್ವರಿ, ಜಿ. ಪರಮೇಶ್ವರ್, ಉಪಸ್ಥಿತಿ: ಸಾಲುಮರದ ತಿಮ್ಮಕ್ಕ, ಅತಿಥಿಗಳು: ಎಂ. ರಾಮಚಂದ್ರ, ವೀರಕಪುತ್ರ ಶ್ರೀನಿವಾಸ್, ಬಳ್ಳೂರು ಉಮೇಶ್, ಜಿಪಿಓ ಚಂದ್ರು, ಸವಿತಕ್ಕ, ಆಯೋಜನೆ: ಕಾಜಾಣ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6

ಪದಾಧಿಕಾರಿಗಳ ಪದಗ್ರಹಣ ಸಮಾರಂಭ: ಅತಿಥಿಗಳು: ಶ್ರೀಮತಿ ಮಾಸ್ಟರ್, ಗೌರಿ ಓಝಾ, ಆಯೋಜನೆ: ಇನ್ನರ್ ವ್ಹೀಲ್ ಕ್ಲಬ್ ಆಫ್ ಬೆಂಗಳೂರು, ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲ್ಯಾವೆಲ್ಲೆ ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Industrial & Factory

Airport Road

NEED INDUSTRIAL land or industrial convertible land of 2 to 3 acres in 10 km surrounding of KIAL. Interested sellers may call on below number. 9886020888

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: **ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)**
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಬಿಡ್‌ದಾರರನ್ನು ಸೆಳೆಯಲು ಹೊಸಕ್ರಮಕ್ಕೆ ಮುಂದಾದ ಬಿಡಿಎ

ಪಿಆರ್‌ಆರ್ ಯೋಜನೆ ವಿಭಜನೆಗೆ ಚಿಂತನೆ

• ನವೀನ್ ಮಿನೇಜಸ್

ಬೆಂಗಳೂರು: ಬಿಡ್‌ದಾರರು ಬಾರದೇ ಇರುವುದರಿಂದ ಅನುಷ್ಠಾನಕ್ಕೆ ಬಾರದ ಹೊರ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಯನ್ನು ಮೂರು ಭಾಗಗಳನ್ನಾಗಿ ವಿಭಜಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಚಿಂತನೆ ನಡೆಸಿದೆ.

74 ಕಿ.ಮೀ. ಉದ್ದದ ಪಿಆರ್‌ಆರ್ ಕಾರಿಡಾರ್ ಅನ್ನು ನಿರ್ಮಿಸಲು ಬಿಡಿಎ ನಿರ್ಧರಿಸಿತ್ತು. ಈ ಯೋಜನೆಗೆ ಸಂಬಂಧಿಸಿದಂತೆ ಟೆಂಡರ್ ಕೂಡ ಕರೆಯಲಾಗಿತ್ತು. ಆದರೆ ಬಿಡ್‌ನಲ್ಲಿ ಭಾಗವಹಿಸಲು ಯಾವುದೇ ಕಂಪನಿಗಳು ಉತ್ಸಾಹ ತೋರಿರಲಿಲ್ಲ.

ಯೋಜನೆ ರೂಪಿಸಿ ಬಹುಕಾಲದಿಂದ ಬಾಕಿ ಉಳಿದಿರುವ ಈ ಯೋಜನೆಯನ್ನು ಮುಂದಕ್ಕೆ ಕೊಂಡೊಯ್ಯಲು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿತ್ತು. ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಆಯುಕ್ತ ಎನ್.ಜಯರಾಮ್, ಅಧಿಕಾರಿಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದರು.

₹27,000 ಕೋಟಿ ಅಂದಾಜು ವೆಚ್ಚದ ಈ ಯೋಜನೆಯನ್ನು ಮೂರು ಭಾಗಗಳಾಗಿ ವಿಂಗಡಿಸುವ ಮೂಲಕ ಬಿಡ್‌ದಾರರನ್ನು ಸೆಳೆಯಲು ಯೋಜನೆ ರೂಪಿಸಲಾಗುತ್ತಿದೆ. ನಗರದ ಸುತ್ತ ಅರ್ಧವೃತ್ತವನ್ನು ರೂಪಿಸುವ 74 ಕಿ.ಮೀ. ಉದ್ದದ ಈ ರಸ್ತೆಯನ್ನು ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆವರೆಗೆ, ಬಳ್ಳಾರಿ ರಸ್ತೆಯಿಂದ ಹಳೇ ಮದ್ರಾಸ್ ರಸ್ತೆವರೆಗೆ ಮತ್ತು ಹಳೇ ಮದ್ರಾಸ್ ರಸ್ತೆಯಿಂದ ಹೊಸೂರು ರಸ್ತೆವರೆಗೆ ಎಂದು ವಿಂಗಡಿಸುವ ಬಗ್ಗೆ ಚರ್ಚೆಗಳಾಗಿವೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

100 ಮೀಟರ್ ಅಗಲದ ರಸ್ತೆ, ಅದರ ಮಧ್ಯದಲ್ಲಿ ಮೆಟ್ರೊ ಅಥವಾ ಮೋನೊ ರೈಲಿಗೆ ಸ್ಥಳಾವಕಾಶ ಮತ್ತು ಸೈಕ್ಲಿಸ್ಟ್‌ಗಳಿಗೆ ಮೀಸಲು ಮಾರ್ಗ ನಿರ್ಮಿಸುವುದು ಮೂಲ ಯೋಜನೆಯಲ್ಲಿ ಸೇರಿತ್ತು. ಆದರೆ, ಈಗ ಸರ್ಕಾರವು ರಸ್ತೆಯ ಅಗಲವನ್ನು 60 ಮೀಟರ್ ಮತ್ತು 75 ಮೀಟರ್‌ಗೆ ಇಳಿಸುವ ಸಾಧ್ಯತೆಯ ಬಗ್ಗೆಯೂ ಚರ್ಚೆ ಆರಂಭಿಸಿದೆ.

'50 ವರ್ಷಗಳವರೆಗೆ ಟೋಲ್ ಸಂಗ್ರಹ ಮಾಡುವುದು ಸೇರಿ ಒಟ್ಟು ಯೋಜನಾ ವೆಚ್ಚ ₹14,000 ಕೋಟಿ ಎಂದು ಅಂದಾಜಿಸಲಾಗಿತ್ತು. ಭೂಸ್ವಾಧೀನ ಕಾಯ್ದೆ–2013ರ ಪ್ರಕಾರ ಪರಿಹಾರ ನೀಡುವಂತೆ ರೈತರು ಬೇಡಿಕೆ ಇಟ್ಟಿರುವುದರಿಂದ ಅಂದಾಜು ವೆಚ್ಚವನ್ನು ₹27,000 ಕೋಟಿಗೆ ಹೆಚ್ಚಿಸಿ ಪರಿಷ್ಕರಿಸಲಾಗಿದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಡಿಎ ತನ್ನ ಹೊಸ ಬಡಾವಣೆಗಳಲ್ಲಿ ರೈತರಿಗೆ ನಗದು ಪರಿಹಾರದ ಬದಲು ಜಮೀನು ನೀಡುವ ಬಗ್ಗೆಯೂ ಯೋಚನೆ ನಡೆಸುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

'ಗ್ಯಾರಂಟಿ'ಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ಬಳಸದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯ (ಟಿಎಸ್‌ಪಿ) ಹಣವನ್ನು 'ಗ್ಯಾರಂಟಿ' ಯೋಜನೆಗಳಿಗೆ ಬಳಸುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ದಲಿತ ಹಕ್ಕುಗಳ ಸಮಿತಿ ಒತ್ತಾಯಿಸಿದೆ.

'10 ವರ್ಷಗಳಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿಗೆ ಎಂದು ಎರಡೂವರೆ ಲಕ್ಷ ಕೋಟಿಗೂ ಹೆಚ್ಚು ಅನುದಾನ ನೀಡಲಾಗಿದೆ. ಆದರೆ ಇಷ್ಟೂ ಹಣ ಅರ್ಹ ದಲಿತರಿಗೆ ತಲುಪದೆ, ಅನ್ಯ ಉದ್ದೇಶಕ್ಕೆ ಬಳಕೆಯಾಗಿದೆ. ಅದನ್ನು ತಡೆಗಟ್ಟಲೆಂದೇ ರಾಜ್ಯದ ಕಾಂಗ್ರೆಸ್ ಸರ್ಕಾರವು ಕಳೆದ ವರ್ಷ ಸಂಬಂಧಿತ ಕಾಯ್ದೆಗೆ ತಿದ್ದುಪಡಿ ತಂದಿತ್ತು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸುವುದನ್ನು ನಿಷೇಧಿಸಿತ್ತು. ಆದರೆ, ತಾವೇ ಜಾರಿಗೆ ತಂದಿದ್ದ ಈ ನೀತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉಲ್ಲಂಘಿಸಿದ್ದಾರೆ' ಎಂದು ದಲಿತ ಹಕ್ಕುಗಳ ಸಮಿತಿಯ ರಾಜ್ಯ ಉಪಾಧ್ಯಕ್ಷ ಬಿ.ರಾಜಶೇಖರಮೂರ್ತಿ ಟೀಕಿಸಿದ್ದಾರೆ.

'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿ ₹39,121 ಕೋಟಿ ವೆಚ್ಚಕ್ಕೆ ಅನುಮೋದನೆ ನೀಡಿದ್ದೇವೆ. ಅದರಲ್ಲಿ ಗ್ಯಾರಂಟಿ ಯೋಜನೆಗಳಿಗೆ ₹14,282 ಕೋಟಿಯನ್ನು ಬಳಸಲಾಗುತ್ತದೆ. ಅದನ್ನು ಪರಿಶಿಷ್ಟರಿಗೇ ನೀಡಲಾಗುತ್ತದೆ ಎಂದು ಈಚೆಗೆ ನಡೆಸಿದ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ. ಇದು ಒಂದು ಕೈಯಲ್ಲಿ ಕೊಟ್ಟು, ಮತ್ತೊಂದು ಕೈಯಲ್ಲಿ ಕಸಿದುಕೊಳ್ಳುವಂತಹ ವಂಚನೆ. ಇದು ದಲಿತ ವಿರೋಧಿ ನೀತಿ' ಎಂದು ಅವರು ಆರೋಪಿಸಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆಯ ಸಚಿವರು, ಮೀಸಲು ಕ್ಷೇತ್ರದಿಂದ ಚುನಾಯಿತರಾದ ಶಾಸಕರು– ಸಚಿವರು ಸರ್ಕಾರದ ಈ ತೀರ್ಮಾನಕ್ಕೆ ಸಂಬಂಧಿಸಿದಂತೆ ಮೌನವಹಿಸಿರುವುದು ವಿಷಾದನೀಯ. ಸರ್ಕಾರವು ಈ ಹಣವನ್ನು ಅನ್ಯ ಉದ್ದೇಶಕ್ಕೆ ಬಳುವುದನ್ನು ತಕ್ಷಣವೇ ತಡೆಹಿಡಿಯಬೇಕು. 10 ವರ್ಷಗಳಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿಗೆ ಎಷ್ಟು ಹಣ ನೀಡಲಾಗಿತ್ತು ಮತ್ತು ಅದರಲ್ಲಿ ಈ ಯೋಜನೆಗಳಿಗೇ ಎಷ್ಟು ಹಣ ಬಳಕೆಯಾಗಿದೆ ಎಂಬುದನ್ನು ಪರಿಶೀಲಿಸಲು ಸಮಿತಿ ರಚಿಸಬೇಕು ಹಾಗೂ ಮೌಲ್ಯಮಾಪನ ನಡೆಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ಪರ ಸಂಘಟನೆಗಳ ಪ್ರಮುಖರ ಜತೆಗೆ ಸಭೆ ನಡೆಸಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಉಪಸ್ಥಿತರಿದ್ದರು

'ಕನ್ನಡಿಗರಿಗೆ ಉದ್ಯೋಗ, ಶಾಲೆಗಳ ಸಬಲೀಕರಣ ಒತ್ತು ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರೀಯ ಉದ್ದಿಮೆಗಳು ಮತ್ತು ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ, ಸರೋಜಿನಿ ಮಹಿಷಿ ವರದಿ ಅನುಷ್ಠಾನ, ಸರ್ಕಾರಿ ಶಾಲೆಗಳ ಸಬಲೀಕರಣ ಹಾಗೂ ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರಥಮ ಭಾಷೆಯಾಗಿ ಕನ್ನಡ ಬೋಧನೆಯಂತಹ ವಿಷಯಗಳನ್ನು ಕೈಗೆತ್ತಿಕೊಳ್ಳಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕನ್ನಡ ಪರ ಸಂಘಟನೆಗಳ ಪ್ರಮುಖರು ಸಲಹೆ ನೀಡಿದ್ದಾರೆ.

ಕನ್ನಡಪರ ಸಂಘಟನೆಗಳೊಂದಿಗೆ ಪ್ರಾಧಿಕಾರ ಇಲ್ಲಿ ಹಮ್ಮಿಕೊಂಡ ಸಮಾಲೋಚನೆ ಸಭೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಅನುಷ್ಠಾನ ಹಾಗೂ ಕನ್ನಡಿಗರಿಗೆ ಇರುವ ಅವಕಾಶಗಳ ಬಗ್ಗೆ ಚರ್ಚಿಸಲಾಯಿತು.

ಈ ವೇಳೆ ಮಾತನಾಡಿದ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಅಂಕಿ ಅಂಶಗಳನ್ನು ಗಮನಿಸಿದರೆ ಶೇ 66 ರಷ್ಟು ವೇಗದಲ್ಲಿ ಹಿಂದಿ ಭಾಷೆ ಬೆಳವಣಿಗೆ ಹೊಂದುತ್ತಿದೆ. ಪಂಜಾಬಿ ಭಾಷೆ ಶೇ 12ರಿಂದ ಶೇ 13 ರಷ್ಟು ವೇಗದಲ್ಲಿ ಬೆಳವಣಿಗೆಯಾಗುತ್ತಿದೆ. ಕರ್ನಾಟಕದ್ದೆ ಭಾಷೆಯಾದ ತುಳು ಶೇ 7 ರಷ್ಟು ವೇಗದಲ್ಲಿ ಬೆಳವಣಿಗೆ ಹೊಂದುತ್ತಿದೆ. ಆದರೆ, ರಾಜ್ಯದ ಅಧಿಕೃತ ಭಾಷೆಯಾದ ಕನ್ನಡ ಭಾಷೆಯ ಬೆಳವಣಿಗೆ ಶೇ 3.7 ರಷ್ಟಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಸರೋಜಿನಿ ಮಹಿಷಿ ವರದಿ ನೀಡಿ ಹಲವು ವರ್ಷಗಳಾಗಿವೆ. ಆಗ ಐಟಿ–ಬಿಟಿ, ಬಹುರಾಷ್ಟ್ರೀಯ ಕಂಪನಿಗಳು ಇರಲಿಲ್ಲ. ಆದ್ದರಿಂದ ಆ ಕ್ಷೇತ್ರದಲ್ಲಿನ ಉದ್ಯೋಗದ ಸಮಸ್ಯೆಗಳ ಬಗ್ಗೆ ಮಹಿಷಿ ವರದಿಯಲ್ಲಿ ಉಲ್ಲೇಖಿಸಿಲ್ಲ. ಹೀಗಾಗಿ, ಪ್ರಾಧಿಕಾರದಿಂದಲೇ ಸರೋಜಿನಿ ಮಹಿಷಿ ವರದಿಯನ್ನು ಪರಿಷ್ಕರಿಸಲಾಗಿದೆ. ಅದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಾಧಿಕಾರ ಕಾರ್ಯನ್ಮೋಖವಾಗಿದೆ' ಎಂದು ಹೇಳಿದರು.

ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಮಾತನಾಡಿ, 'ಪ್ರಾಧಿಕಾರ ಕೇವಲ ಕರ್ನಾಟಕದೊಳಗಿನ ಕನ್ನಡಿಗರ ಬಗ್ಗೆ ಮಾತ್ರವಲ್ಲದೇ ಹೊರನಾಡು, ಗಡಿನಾಡು ಕನ್ನಡಿಗರ ಸಮಸ್ಯೆಗಳ ಬಗ್ಗೆಯೂ ಗಮನ ಹರಿಸಬೇಕಿದೆ' ಎಂದರು.

ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಪ್ರವೀಣ್ ಶೆಟ್ಟಿ ಮಾತನಾಡಿ, 'ಕನ್ನಡ ಪರ ಹೋರಾಟಗಾರರ ಮೇಲಿರುವ ಪ್ರಕರಣಗಳನ್ನು ಹಿಂಪಡೆಯುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಆಗ್ರಹಿಸಿದರು.

ಕಂಕಣ ಬಳಗದ ಕವಿರಾಜ್, 'ಅಪಾರ್ಟ್‌ಮೆಂಟ್ ಮತ್ತು ಮಾಲ್‌ಗಳಲ್ಲಿ ಕನ್ನಡ ಬಳಕೆಗೆ ಆದ್ಯತೆ ನೀಡಬೇಕು' ಎಂದು ಹೇಳಿದರು.

155 ವರ್ಷಗಳು

ಸಿಕೆಸಿ ಗ್ರೂಪ್

ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್

ರವರಿಂದ

ಮುಖ್ಯವಾದ ಮತ್ತು ನಿರಂತರ ಎಚ್ಚರಿಕೆಯ ನೋಟಿಸ್

ನಮ್ಮ ಟ್ರೇಡ್ ಮಾರ್ಕ್ ಹೆಸರು ಅಥವಾ ಚಿಹ್ನೆಗಳನ್ನು ಬಳಸಲು ಯಾವುದೇ ಸಂಸ್ಥೆ ಅಥವಾ ವ್ಯಕ್ತಿಗೆ ಅನುಮತಿ ನೀಡಿಲ್ಲ

ಗ್ರಾಹಕರೇ ಎಚ್ಚರಿಕೆ, ನಮ್ಮವರೇ ಆದ ನಿರ್ದೇಶಕರೊಬ್ಬರು ನಮ್ಮ ಹೆಸರು ಬಳಸಿಕೊಂಡು ಖಾಸಗಿಯಾಗಿ ಅನಧಿಕೃತ ವಹಿವಾಟು ನಡೆಸುತ್ತಿದ್ದಾರೆ. ಅವರಿಗೆ ಈಗಾಗಲೆ ನ್ಯಾಯಾಂಗ ನಿಂದನೆ ನೋಟಿಸ್ ಅನ್ನು ಜಾರಿಗೊಳಿಸಲಾಗಿದೆ. ಅವರು ಅಸ್ತಿತ್ವದಲ್ಲೇ ಇಲ್ಲದ ಸಂಸ್ಥೆಯೊಂದಕ್ಕೆ ಅಕ್ರಮವಾಗಿ ಮರುನಾಮಕರಣ ಮಾಡಿಕೊಂಡಿದ್ದು (ಮೊದಲು ದೀಪಾಲಿ ಕಂಪನಿ ಪ್ರೈವೇಟ್ ಲಿಮಿಟೆಡ್ ಎಂದು ಇದ್ದ ಹೆಸರನ್ನು ಸಿ. ಕೃಷ್ಣಯ್ಯ ಚೆಟ್ಟಿ ಅಂಡ್ ಕೋ., ಎಂದು ಮರುನಾಮಕರಣ ಮಾಡಿಕೊಂಡಿದ್ದಾರೆ) ಅದರ ಮೂಲಕ ತಮ್ಮದೇ ಆದ ಅಧಿಕೃತ ಕಂಪನಿಗೆ ಪೈಪೋಟಿ ನೀಡುವಂಥ ವಹಿವಾಟು ನಡೆಸದಂತೆ ನಿರ್ಬಂಧವಿದೆ. ಅವರ ಸುಳ್ಳು ಮತ್ತು ವಂಚನೆಗಳ ಪಟ್ಟಿ ಇಲ್ಲಿ ಪ್ರಕಟಿಸಲಾಗದಷ್ಟು ದೊಡ್ಡದಿದೆ.

ಈ ಅನಧಿಕೃತ ಕಂಪನಿಯೊಂದಿಗೆ ವ್ಯವಹಾರ ನಡೆಸದಂತೆ ಸಾರ್ವಜನಿಕರು ಮತ್ತು ವಾಣಿಜ್ಯೋದ್ಯಮಿಗಳಿಗೆ ಎಚ್ಚರಿಕೆ ನೀಡಲಾಗಿದೆ. ನೀವು ನಮ್ಮನ್ನು **conflict@ckcsons.com** ಅಥವಾ **+91 96111 01869** ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ.

ಅನಧಿಕೃತ ಕಂಪನಿಯೊಂದಿಗೆ ವಹಿವಾಟು ಮಾಡುವುದರಿಂದ ಸಿ. ಕೃಷ್ಣಯ್ಯ ಚೆಟ್ಟಿ ಗುಣಮಟ್ಟದಲ್ಲದ ಆಭರಣಗಳು/ಉತ್ಪನ್ನಗಳ ಖರೀದಿಸಿದಂತಾಗಬಹುದು ಮತ್ತು ಭವಿಷ್ಯದಲ್ಲಿ ಮರುಮಾರಾಟ ಅಥವಾ ಬದಲಾವಣೆಯ ವೇಳೆ ನಷ್ಟಕ್ಕೆ ಕಾರಣವಾಗಬಹುದು. ಮುತ್ತುರತ್ನಗಳು ಮತ್ತು ಆಭರಣಗಳ ವಹಿವಾಟುದಾರರಿಗೆ ವ್ಯವಹಾರಿಕ ನಷ್ಟ, ಸರಕಿನ ಜಫ್ತಿ ಮತ್ತು ನ್ಯಾಯಾಂಗ ವಿವಾದಗಳಿಗೆ ಕಾರಣವಾಗುತ್ತದೆ.

ನ್ಯಾಯಾಲಯದ ಆದೇಶಗಳನ್ನು ನೋಡಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಮೂಲಕ ನ್ಯಾಯಾಲಯಗಳು ನಿಷೇಧಿಸಿರುವುದರಿಂದ ದಯವಿಟ್ಟು ಅವರ ಸಾಮಾಜಿಕ ಮಾಧ್ಯಮ ಸಂದೇಶಗಳನ್ನು ನಿರ್ಲಕ್ಷಿಸಿ.

ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್

ರವರಿಂದ ಈ ಜಾಹೀರಾತನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ನೀಡಲಾಗಿದೆ.

ಕಾರ್ಪೊರೇಟ್ ಕಚೇರಿ: ದ ಟಚ್‌ಸ್ಟೋನ್, ಎ-ಬ್ಲಾಕ್, 3-3ಎ, ಮೇನ್ ಗಾರ್ಡ್ ಕ್ರಾಸ್ ರಸ್ತೆ, ಕಬ್ಬನ್ ರಸ್ತೆಯ ಪಕ್ಕ, ಬೆಂಗಳೂರು-560 001. ಭಾರತ. ದೂರವಾಣಿ: +91 90 4000 1869 • www.ckcjewellers.com

ಸಿಕೆಸಿ ಸಮೂಹದ ಸಹಯೋಗಿ ಸಂಸ್ಥೆಗಳು: C. KRISHNIAH CHETTY & SONS™ C. KRISHNIAH CHETTY JEWELLERS® C.Krishniah Chetty & Sons THE 1869 GUILD. C. KRISHNIAH CHETTY CHARITABLE TRUST

ಲೋಗೋಗಳು, ಹೆಸರು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ದುರ್ಬಳಕೆಯನ್ನು ನಿಷೇಧಿಸಲಾಗಿದೆ ವರ್ಷನ್ 02

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ವಾರಕ್ಕೆ ಒಂದು ದಿನ - ಪ್ರತಿ ಶುಕ್ರವಾರ

ಈಡಿಸ್ ಲಾರ್ವಾ ನಿರ್ಮೂಲನಾ ದಿನ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ನಮ್ಮೆಲ್ಲರ ಜವಾಬ್ದಾರಿ
ಡೆಂಗಿ ಜ್ವರ ನಿಯಂತ್ರಣ

ಡೆಂಗಿ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ,
ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ
ಉಚಿತ ಪರೀಕ್ಷೆ ಹಾಗು ಚಿಕಿತ್ಸೆ ಪಡೆಯಿರಿ

ಡೆಂಗಿ ಜ್ವರ ಲಕ್ಷಣಗಳು

- ಇದ್ದಕ್ಕಿದ್ದಂತೆ ತೀವ್ರ ಜ್ವರ
- ವಿಪರೀತ ತಲೆನೋವು
- ಕಣ್ಣುಗಳ ಹಿಂಭಾಗ ನೋವು
- ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು
- ವಸಡು ಮತ್ತು ಮೂಗಿನಲ್ಲಿ ರಕ್ತಸ್ರಾವ
- ಚರ್ಮದ ಮೇಲೆ ಗಂಧೆಗಳು

ಚಿಕಿತ್ಸೆ ಮತ್ತು ಅನುಸರಣೆ

- ಡೆಂಗಿ ಜ್ವರದ ಲಕ್ಷಣಗಳು ಕಂಡು ಬಂದಲ್ಲಿ, ನಿರ್ಲಕ್ಷಿಸಬೇಡಿ. ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ, ಅಗತ್ಯ ಚಿಕಿತ್ಸೆಯನ್ನು ಪಡೆಯಿರಿ. ಸ್ವಯಂ ಚಿಕಿತ್ಸೆ ಮಾಡದಿರಿ.
- ಹೆಚ್ಚು ನೀರು ಹಾಗೂ ಇತರ ದ್ರವಾಹಾರಗಳಾದ ಒ.ಆರ್.ಎಸ್, ಎಳನೀರು, ನಿಂಬೆಹಣ್ಣಿನ ಶರಬತ್ತುಗಳನ್ನು ಸೇವಿಸಿ, ನಿರ್ಜಲೀಕರಣವನ್ನು ತಡೆಗಟ್ಟಿ. ಅಗತ್ಯ ವಿಶ್ರಾಂತಿಯನ್ನು ಪಡೆಯಿರಿ.
- ಜ್ವರದಿಂದ ಗುಣಮುಖರಾದ ನಂತರ ವಾಂತಿ, ಹೊಟ್ಟೆನೋವು, ಮೂತ್ರದ ಪ್ರಮಾಣ ಕಡಿಮೆಯಾಗುವುದು, ಅತಿಯಾದ ನಿಶ್ಶಕ್ತಿ, ಮಂಪರು, ಸಿಡಿಮಿಡಿಗೊಳ್ಳುವಿಕೆ, ತಣ್ಣನೆಯ ಹಾಗೂ ಬಿಳಿಚಿದ ಚರ್ಮ ಇಂತಹ ಲಕ್ಷಣಗಳು ಕಂಡುಬಂದಲ್ಲಿ ಶೀಘ್ರವೇ ವೈದ್ಯರನ್ನು ಸಂಪರ್ಕಿಸಿ.
- ಮೃದುವಾದ ಆಹಾರವನ್ನು ಸೇವಿಸಿ ಹಾಗೂ ಹಗಲು ಹೊತ್ತಿನಲ್ಲಿಯೂ ಸೊಳ್ಳೆಪರದೆಯನ್ನು ಬಳಕೆ ಮಾಡುವುದು ಅಗತ್ಯವಾಗಿದೆ.

ಡೆಂಗಿ ನಿಯಂತ್ರಣ ಕ್ರಮಗಳು

ನೀರು ಶೇಖರಿಸುವ ಸಿಮೆಂಟ್ ತೊಟ್ಟಿ, ಡ್ರಮ್, ಬ್ಯಾರೆಲ್, ಬಕೆಟ್‌ಗಳನ್ನು ಮುಚ್ಚಿಡಿ.

ಘನತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ನಿಲ್ಲದಂತೆ ಕ್ರಮವಹಿಸಿ ಹಾಗೂ ವಿಲೇವಾರಿ ಮಾಡಿ.

ಮಾನ್ಯ ಆರೋಗ್ಯ ಸಚಿವರಾದ **ಶ್ರೀ ದಿನೇಶ್ ಗುಂಡೂರಾವ್** ಅವರು ಡೆಂಗಿ ಲಾರ್ವಾ ಸಮೀಕ್ಷೆಯಲ್ಲಿ ಭಾಗವಹಿಸಿರುವುದು

ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸಿ

- ಸೊಳ್ಳೆ ಪರದೆ ಬಳಸಿ
- ಸೊಳ್ಳೆ ನಿರೋಧಕಗಳನ್ನು ಬಳಸಿ
- ದೇಹ ಮುಚ್ಚುವಂತಹ ಬಟ್ಟೆ ಧರಿಸಿ
- ಕಿಟಕಿ/ಬಾಗಿಲುಗಳಿಗೆ ಮೆಶ್ (ಜಾಲರಿ) ಅಳವಡಿಸಿ

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" – ಪ್್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಬದ್ಧತೆ.

ಶಿಕ್ಷಣ

ನಾಮಪತ್ರ ಸಲ್ಲಿಸುತ್ತಿರುವ ವಿದ್ಯಾರ್ಥಿಗಳು

ಮಕ್ಕಳ ಹಕ್ಕುಗಳಿಗೆ ಧ್ವನಿಯಾಗುವ ಶಾಲಾ ಸಂಸತ್

ಆಯ್ಕೆಯಾದ ಮಕ್ಕಳಿಂದ ಪ್ರಮಾಣ ವಚನ ಸ್ವೀಕಾರ

ಆರ್.ಬಿ.ಗುರುಬಸವರಾಜ

ಇಂದಿನ ಮಕ್ಕಳೇ ಇಂದಿನ ನಾಯಕರು ಎಂದು ನಾಯಕತ್ವ ಹಾಗೂ ಜವಾಬ್ದಾರಿ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದರ ಅಗತ್ಯ ಎದ್ದು ಕಾಣುತ್ತಿದೆ. ಮಕ್ಕಳಲ್ಲಿ ಈ ಗುಣಗಳನ್ನು ಬೆಳೆಸುವಲ್ಲಿ ಮಕ್ಕಳ ಸಂಸತ್ತು ಪ್ರಮುಖ ಪಾತ್ರ ವಹಿಸುತ್ತದೆ. ಇದು ಮಕ್ಕಳ ಪ್ರಾತಿನಿಧಿಕ ರಚನೆಯಾಗಿದ್ದು, ಶಾಲಾ ಸಿಬ್ಬಂದಿ ಜೊತೆ ಶಾಲಾ ನಿರ್ವಹಣೆಯಲ್ಲಿ ಮಕ್ಕಳನ್ನೂ ಪಾಲುದಾರರನ್ನಾಗಿ ಮಾಡುವುದು ಇದರ ಪ್ರಮುಖ ಉದ್ದೇಶವಾಗಿದೆ. ಜವಾಬ್ದಾರಿ ನಿರ್ವಹಣೆಯ ಜತೆಗೆ ಶಾಲಾ ಆಡಳಿತದಲ್ಲಿ ಮಕ್ಕಳನ್ನು ತೊಡಗಿಕೊಳ್ಳುವಂತೆ ಪ್ರೇರೇಪಿಸಲು ನೆರವಾಗುತ್ತದೆ.

ಮಕ್ಕಳ ಶಾಲಾ ಸಂಸತ್: ಮಕ್ಕಳು, ಮಕ್ಕಳಿಂದ, ಮಕ್ಕಳಿಗಾಗಿ ಆಯ್ಕೆಯಾದ ಸದಸ್ಯರ ಒಂದು ಸಂಸ್ಥೆ ಅಥವಾ ಸಂಘವೇ ಶಾಲಾ ಮಕ್ಕಳ ಸಂಸತ್ ಆಗಿದೆ. ಮಕ್ಕಳ ಸಂಸತ್‌ನಲ್ಲಿ ಮಕ್ಕಳೇ ಸಂಪೂರ್ಣ ಭಾಗೀದಾರರಾಗಿರುತ್ತಾರೆ. ತಮ್ಮ ಹಕ್ಕುಗಳನ್ನು, ಕರ್ತವ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ಕಲಿಯುವ ವೇದಿಕೆ. ಮಕ್ಕಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಣ ಮೌಲ್ಯವಾಗಿದೆ.

ಮಕ್ಕಳ ಸಂಸತ್‌ನ ಉದ್ದೇಶಗಳು

- ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದು.
- ಜವಾಬ್ದಾರಿಯುತ ನಾಗರಿಕರಾಗಲು ತರಬೇತು ನೀಡುವುದು.
- ಮಕ್ಕಳ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ಪರಿಹಾರ ತೆಗೆದುಕೊಳ್ಳುವುದು.
- ಶಾಲೆ ಹಾಗೂ ಮಕ್ಕಳಿಗೆ ಸಂಬಂಧಿಸಿದ ಚಟುವಟಿಕೆ ಮತ್ತು ಕಾರ್ಯಕ್ರಮಗಳಿಗೆ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವುದು.
- ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರುವುದು.
- ಮಕ್ಕಳ ಸಮಸ್ಯೆಗಳ ಚರ್ಚೆಗೆ ಸೂಕ್ತ ವೇದಿಕೆ ನಿರ್ಮಿಸುವುದು.
- ಶಾಲಾ ಆಡಳಿತದಲ್ಲಿ ಪಾಲ್ಗೊಳ್ಳಲು ಮಕ್ಕಳಿಗೆ ಅವಕಾಶ ನೀಡುವುದು.
- ಚುನಾವಣಾ ಪ್ರಕ್ರಿಯೆಯನ್ನು ಮಕ್ಕಳಿಗೆ ಪ್ರಾಯೋಗಿಕವಾಗಿ ತಿಳಿಸುವುದು.
- ಶಾಲೆ ಮತ್ತು ಸಮುದಾಯದ ನಡುವಿನ ಸೂಕ್ತ ಪ್ರಾತಿನಿಧ್ಯವನ್ನು ಸಕ್ರಿಯಗೊಳಿಸುವುದು.
- ಮಕ್ಕಳಲ್ಲಿ ಪರಸ್ಪರ ಐಕ್ಯತೆ, ಒಗ್ಗಟ್ಟು ಮತ್ತು ಸಹೋದರತ್ವ ಭಾವನೆ ಬೆಳೆಸುವುದು.
- ದೇಶ ಕಟ್ಟುವ ಕಾರ್ಯದಲ್ಲಿ ಜವಾಬ್ದಾರಿ ನಾಯಕತ್ವ ಬೆಳೆಸುವುದು.
- ಸೈದ್ಧಾಂತಿಕ ತತ್ವಗಳನ್ನು ಪ್ರಾಯೋಗಿಕವಾಗಿ ತಿಳಿಯುವುದು.

ಮಕ್ಕಳ ಸಂಸತ್ತಿನ ಪ್ರಯೋಜನಗಳು

- ಸುವ್ಯವಸ್ಥಿತ ಶಾಲೆಯ ನಿರ್ವಹಣೆ.
- ಮಕ್ಕಳ ದಾಖಲಾತಿ ಮತ್ತು ಹಾಜರಾತಿಯಲ್ಲಿ ಸುಧಾರಣೆ.
- ಶಿಸ್ತಿನ ಪರಿಸರ ನಿರ್ಮಾಣವಾಗುತ್ತದೆ.
- ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ.
- ನಿರ್ದಿಷ್ಟ ಅವಧಿಯಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಆಯೋಜನೆ.
- ಕಲಿಕೆಯಲ್ಲಿ ಹಿಂದುಳಿಗೆ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಅನುಕೂಲ.
- ಶಾಲಾ ಕಲಿಕೆಯಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುವಿಕೆ.
- ಮಕ್ಕಳಲ್ಲಿ ಅಭಿವ್ಯಕ್ತಿ ಹಾಗೂ ಸಂವಹನ ಕೌಶಲಗಳ ಅಭಿವೃದ್ಧಿ.
- ಮಾನವೀಯ ಮೌಲ್ಯಗಳ ಜಾಗೃತಿಯಾಗುತ್ತದೆ.
- ಮಕ್ಕಳಲ್ಲಿ ವಿಷಯಾಧಾರಿತ ಕೌಶಲ್ಯಗಳ ಅಭಿವೃದ್ಧಿಯಾಗುತ್ತದೆ.
- ಪ್ರಜಾಪ್ರಭುತ್ವದ ಮೌಲ್ಯಗಳ ಪ್ರಾಯೋಗಿಕ ಪರಿಚಯ.
- ಮಕ್ಕಳಲ್ಲಿ ಆರೋಗ್ಯಕರ ಪೈಪೋಟಿಯ ಬೆಳವಣಿಗೆ

ಮತದಾನ

ಶಾಲೆಯ ಪಾತ್ರ

ಪ್ರಾಥಮಿಕ ಶಾಲೆಗಳಾದರೆ ಹಿರಿಯ ತರಗತಿ ಮಕ್ಕಳನ್ನು, ಪ್ರೌಢಶಾಲೆಗಳಾದರೆ ಎಲ್ಲಾ ತರಗತಿ ಮಕ್ಕಳನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು.

ರಾಷ್ಟ್ರ, ರಾಜ್ಯ ಅಥವಾ ಸ್ಥಳೀಯ ಚುನಾವಣೆಗಳ ಮಾದರಿಯಲ್ಲಿಯೇ, ಸದಸ್ಯರನ್ನು ಆಯ್ಕೆ ಮಾಡಬೇಕು. ಆಯ್ಕೆಯಾದ ಸದಸ್ಯರಿಗೆ ಅವರ ಸಾಮರ್ಥ್ಯ ಮತ್ತು ಅಪೇಕ್ಷೆಗೆ ತಕ್ಕಂತಹ ಖಾತೆಗಳನ್ನು ಹಂಚಿ ಪ್ರತಿಜ್ಞಾ ವಿಧಿ ಬೋಧಿಸಬೇಕು.

ನಿಗದಿತ ಅವಧಿಗೆ ಚುನಾಯಿತ ಸದಸ್ಯರೆಲ್ಲ ಸಭೆ ಸೇರಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಮಕ್ಕಳು ತಮ್ಮ ಸಮಸ್ಯೆಗಳನ್ನು ಶಿಕ್ಷಕರು ಹಾಗೂ ಶಾಲಾ ಮುಖ್ಯಸ್ಥರ ಗಮನಕ್ಕೆ ತರುವುದು ಮತ್ತು ಅವುಗಳನ್ನು ಪರಿಹರಿಸಲು ಒತ್ತಾಯ ಮಾಡುವುದು. ಪ್ರತಿ ಸಭೆಯ ನಡಾವಳಿಗಳನ್ನು ದಾಖಲು ಮಾಡಬೇಕು.

ಅಗತ್ಯವಿದ್ದಾಗ ಸಂಬಂಧಿಸಿದ ಅಧಿಕಾರಿಗಳನ್ನು ಆಹ್ವಾನಿಸಿ ಅವರ ಸಲಹೆ ಪಡೆಯುವುದು.

ಶಾಲೆಯಲ್ಲಿನ ಎಲ್ಲಾ ಕಾರ್ಯಕ್ರಮಗಳನ್ನು ಸಂಸತ್ ಸದಸ್ಯರ ನೇತೃತ್ವದಲ್ಲಿ ನಡೆಸಬೇಕು. ಮಕ್ಕಳು ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯ್ತಿ/ಪಟ್ಟಣ ಪಂಚಾಯ್ತಿ/ಪುರಸಭೆ/ನಗರಸಭೆಗಳ ವಾರ್ಡ್ ಸಭೆಗಳಲ್ಲಿ ಭಾಗವಹಿಸಿ ತಮ್ಮ ಹಕ್ಕುಗಳ ಈಡೇರಿಕೆಗೆ ಒತ್ತಾಯಿಸುವುದು. ಬಾಲ್ಯವಿವಾಹ, ಬಾಲ ಕಾರ್ಮಿಕತನ, ಮುಂತಾದ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯಬೇಕು.

ಪ್ರತಿವರ್ಷ ಪಂಚಾಯ್ತಿ ಹಂತದಲ್ಲಿ ನಡೆಯುವ ಮಕ್ಕಳ ಗ್ರಾಮಸಭೆಗಳಲ್ಲಿ ಭಾಗವಹಿಸಿ ಮಕ್ಕಳ ಹಿತಾಸಕ್ತಿ ಕಾಪಾಡಲು ಮನವಿ ಸಲ್ಲಿಸಬಹುದು. ಒಟ್ಟಾರೆ ಮಕ್ಕಳ ಹಕ್ಕುಗಳ ಸಂರಕ್ಷಣೆ ಮಾಡುವುದು ಶಾಲೆಯಲ್ಲಿ ಸಂಸತ್ ರಚಿಸುವುದು ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ.

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಜೂನಿಯರ್ ವೇತನ

ಕೋಟಕ್ ಮಹೀಂದ್ರಾ ಗ್ರೂಪ್ ಕಂಪನಿಯಿಂದ ಎಸ್ಸೆಸ್ಸೆಲ್ಸಿ 10ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ 2024-25ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹತೆ: ಎಸ್ಸೆಸ್ಸೆಲ್ಸಿಯಲ್ಲಿ ಶೇ 85ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಕಲೆ, ವಾಣಿಜ್ಯ ಅಥವಾ ವಿಜ್ಞಾನ ವಿಭಾಗಗಳಿಗಾಗಿ 11ನೇ ತರಗತಿಗೆ ಪ್ರವೇಶ ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 3,20,000 ಅಥವಾ ಕಡಿಮೆ ಆಗಿರಬೇಕು.

ಆರ್ಥಿಕ ಸಹಾಯ: ಮಾರ್ಗದರ್ಶನ ಬೆಂಬಲ, ಶೈಕ್ಷಣಿಕ ನೆರವು, ವೃತ್ತಿ ಮಾರ್ಗದರ್ಶನ ಮತ್ತು ಹೊರಾಂಗಣ ಭೇಟಿಗಳ ಜತೆಗೆ ತಿಂಗಳಿಗೆ ₹ 3,500 ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 15-07-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/KJSP2

ಸ್ವಾಮಿ ವಿವೇಕಾನಂದ ಸ್ಕಾಲರ್‌ಷಿಪ್

ಸ್ವಾಮಿ ವಿವೇಕಾನಂದ್ ಸ್ಕಾಲರ್‌ಷಿಪ್ ಫಾರ್ ಅಕಾಡಮಿಕ್ ಎಕ್ಸಲೆನ್ಸ್ ಸ್ಕೀಮ್ ಪದವಿಪೂರ್ವ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಮತ್ತು ವಿದೇಶದಲ್ಲಿ ಪೋಸ್ಟ್ ಡಾಕ್ಟರಲ್ ಸಂಶೋಧನಾ ಕೋರ್ಸ್‌ಗಳನ್ನು ಮುಂದುವರಿಸಲು ಯೋಜಿಸುತ್ತಿರುವ ವಿದ್ಯಾರ್ಥಿಗಳಿಗೆ ನೀಡುವ ವೇತನವಾಗಿದೆ.

ಅರ್ಹತೆ: ಯುಜಿ, ಪಿಜಿ, ಪಿಎಚ್‌.ಡಿ ಅಥವಾ ಪೋಸ್ಟ್ ಡಾಕ್ಟರಲ್ ಕೋರ್ಸ್‌ಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಈ ಆರ್ಥಿಕ ವರ್ಷದ ಜುಲೈ 1ಕ್ಕೆ ಅನ್ವಯವಾಗುವಂತೆ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಅರ್ಜಿದಾರರು ವಿದ್ಯಾರ್ಥಿವೇತನಕ್ಕೆ ಅರ್ಹರಾಗಲು ನಿರ್ದಿಷ್ಟ ಆದಾಯದ ಮಾನದಂಡಗಳನ್ನು ಪೂರೈಸಬೇಕು.

ಆರ್ಥಿಕ ಸಹಾಯ: ₹1,00,000ದ ವರೆಗಿನ ಮಾಸಿಕ ಜೀವನ ವೆಚ್ಚಗಳು ಮತ್ತು ಇತರ ಪ್ರಯೋಜನಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 15-01-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/RGAE1

ಟೋಫೆಲ್ ಇಂಡಿಯಾ

ಇದು ಇಟಿಎಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಉಪಕ್ರಮವಾಗಿದೆ. ವಿದೇಶದಲ್ಲಿ ಅಧ್ಯಯನ ಮಾಡಬೇಕೆಂದು ಕನಸು ಹೊತ್ತಿರುವ ಪದವಿಪೂರ್ವ ವಿದ್ಯಾರ್ಥಿಗಳಿಗೆ ಮತ್ತು ಕೆಲಸ ಮಾಡುವ ವೃತ್ತಿಪರರಿಗೆ ನೀಡುವ ಸಹಾಯವಾಗಿದೆ.

ಅರ್ಹತೆ: ಪ್ರಸ್ತುತ ಪದವಿಪೂರ್ವ ಅಧ್ಯಯನದ 3ನೇ ಅಥವಾ 4 ನೇ ವರ್ಷಕ್ಕೆ ದಾಖಲಾಗಿರಬೇಕು. ಭಾರತದಲ್ಲಿ ತಮ್ಮ ಪದವಿಪೂರ್ವ ಅಥವಾ ಪದವಿ ಅಧ್ಯಯನವನ್ನು ಪೂರ್ಣಗೊಳಿಸಿ ಮತ್ತು ವಿದೇಶದಲ್ಲಿ ಉನ್ನತ ಶಿಕ್ಷಣವನ್ನು ಬಯಸುತ್ತಿರುವವರಾಗಿರಬೇಕು. ಎರಡು ವರ್ಷಗಳವರೆಗೆ ನುರಿತ ವೃತ್ತಿಪರ ಕೆಲಸದ ಅನುಭವ ಹೊಂದಿರಬೇಕು.

ಆರ್ಥಿಕ ಸಹಾಯ: ಒಟ್ಟು ₹15 ಲಕ್ಷ

ಅರ್ಜಿ ಸಲ್ಲಿಸಲು ಕೊನೆ ದಿನ: 31-07-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/TOIC1

ಬ್ರ್ಯಾಂಚ್ ಆಯ್ಕೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

ನಾನು ಪಿಯುಸಿ ಮುಗಿಸಿದ್ದು ಈಗ ಬಿ.ಟೆಕ್ ಮಾಡಲು ಇಚ್ಛಿಸಿದ್ದೇನೆ. ಆದರೆ, ಬ್ರ್ಯಾಂಚ್ ಆಯ್ಕೆಯಲ್ಲಿ ಗೊಂದಲವಿದೆ. ಬಿ.ಟೆಕ್ (ಬ್ರ್ಯಾಂಚ್) ಆಯ್ಕೆ ಹೇಗೆ? ದಯವಿಟ್ಟು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಎಂಜಿನಿಯರಿಂಗ್ ಕೋರ್ಸಿನಲ್ಲಿ 55ಕ್ಕೂ ಹೆಚ್ಚು ಸ್ಪೆಷಲೈಜೇಷನ್‌ಗಳಿವೆ ಎನ್ನಲಾಗುತ್ತದೆ. ಯಾವುದೇ ಸ್ಪೆಷಲೈಜೇಷನ್ ಮಾಡಿದರೂ ಕೋರ್ಸ್ ಫಲಿತಾಂಶ ಉತ್ಕೃಷ್ಟವಾಗಿದ್ದರೆ ಬೇಡಿಕೆ ಇದೆ. ಎಂಜಿನಿಯರಿಂಗ್ ಕೋರ್ಸ್ ಮಾಡಲು ತಾರ್ಕಿಕ ಪ್ರತಿಪಾದನಾ ಕೌಶಲ, ಸಮಸ್ಯೆಗಳಿಗೆ ಪರಿಹಾರವನ್ನೊದಗಿಸುವ ಕೌಶಲ ಮತ್ತು ವಿಶ್ಲೇಷಣಾ ಕೌಶಲಗಳ ಜೊತೆಗೆ ಆಯಾ ಸ್ಪೆಷಲೈಜೇಷನ್ ಸಂಬಂಧಿತ ವಿಷಯಗಳಲ್ಲಿ ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆ ಇರಬೇಕು. ಈ ಸಲಹೆಗಳನ್ನು ಗಮನಿಸಿ:

- ನಿಮ್ಮ ಅಭಿರುಚಿ, ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆ ಯಾವ ಕ್ಷೇತ್ರದಲ್ಲಿದೆ ಎಂದು ಗಮನಿಸಿ.
- ಅದರಂತೆ ವೃತ್ತಿ ಯೋಜನೆಯನ್ನು ಮಾಡಿ, ಎಲ್ಲಿಯವರೆಗೆ ಓದಬೇಕು ಎಂದು ನಿರ್ಧರಿಸಿ. ಸ್ನಾತಕೋತ್ತರ ಪದವಿಯ ಯೋಜನೆಯಿದ್ದರೆ, ಬಿ.ಟೆಕ್‌ನಲ್ಲಿ ಕೋರ್ ಬ್ರ್ಯಾಂಚ್ (ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಕಂಪ್ಯೂಟರ್ ಸೈನ್ಸ್) ಆಯ್ಕೆ ಮಾಡಿ, ಎಂ.ಟೆಕ್‌ನಲ್ಲಿ ಸ್ಪೆಷಲೈಜೇಷನ್ ಮಾಡುವುದು ಉತ್ತಮ.
- ನಿಮಗೆ ಆಸಕ್ತಿಯಿರುವ ಬಿ.ಟೆಕ್ ಕೋರ್ಸಿನ ಪಠ್ಯಕ್ರಮ, ಕೋರ್ಸ್ ಕಲಿಕೆಯ ಉದ್ದೇಶ ಮತ್ತು ಗುರಿ, ಕೋರ್ಸ್ ಯೋಜನೆ ಇತ್ಯಾದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನಿಮ್ಮ ಅಗತ್ಯಕ್ಕೆ ಸರಿಹೊಂದುತ್ತದೆಯೇ ಎಂದು ಮೌಲ್ಯಮಾಪನ ಮಾಡಿ, ಕೋರ್ ಬ್ರಾಂಚ್/ಸ್ಪೆಷಲೈಜೇಷನ್ ಆಯ್ಕೆ ಮಾಡಿ. ಇದಾದ ನಂತರವೂ ಗೊಂದಲವಿದ್ದರೆ, ವೃತ್ತಿ ಸಲಹೆಗಾರರನ್ನು ಸಂಪರ್ಕಿಸಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ https://youtu.be/Ly86IyOTYns

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜ ವಿಜ್ಞಾನ

ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

5) ಎರಡನೇ ಆಂಗ್ಲೋ–ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು. ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು. 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು. ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು

1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು. ಆದರೆ ಅವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಿದನು. ಇದರಿಂದ ಆ ಪ್ರದೇಶದಲ್ಲಿ ತಾತ್ಕಾಲಿಕ ಶಾಂತಿ ನೆಲೆಸಿತು.

6) ಮೂರನೇ ಆಂಗ್ಲೋ–ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು. ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದನು. 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು. ನಾಗಪುರದ ಅಪ್ಪಾ ಸಾಹೇಬ ಮತ್ತು ಮಲ್ಹಾರ ರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು. ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು. ಬದಲಿಗೆ ಶಿವಾಜಿಯ ವಂಶಸ್ಥ ಪ್ರತಾಪ ಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿ, ಮರಾಠರ ಸಾಂಪ್ರದಾಯಕ ಮುಖಂಡನಾಗಿಸುವ ಮೂಲಕ ಮರಾಠರ ಪ್ರತಿರೋಧವನ್ನು ನಿಗ್ರಹಿಸಿದರು.

7) ಆಂಗ್ಲೋ–ಸಿಖ್ ಯುದ್ಧಗಳ ಕುರಿತು

ಉತ್ತರ: 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. 1809ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು. 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು. ವಿದೇಶಿಯರಿಂದ ಇರಬಹುದಾದ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಬ್ರಿಟಿಷರನ್ನು ಮಣಿಸಲು ಒಂದಾದರು. ಅಂತಿಮವಾಗಿ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು. ಅವಮಾನಕರ ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು. ಅಂದಿನಿಂದ ಬ್ರಿಟಿಷ್ ರೆಸಿಡೆಂಟನು ಪಂಜಾಬಿನ ನಿಜವಾದ ಆಡಳಿತಗಾರನಾದನು ಹೀಗೆ ಪಂಜಾಬ್ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು. 1848ರಲ್ಲಿ ಪಂಜಾಬಿನ ಮೇಲೆ ನೇರ ಬ್ರಿಟಿಷ್ ಆಳ್ವಿಕೆಯನ್ನು ಹೇರಲು ಹೊರಟಾಗ ಸಿಖ್ಖರು ಪ್ರತಿಭಟಿಸಿದರು. ಈ ಪ್ರತಿಭಟನೆಗಳ ನೇತೃತ್ವವನ್ನು 'ಚಟ್ಟಾರ್ ಸಿಂಗ್ ಅಟ್ಟಾರಿವಾಲ' ಮತ್ತು 'ಮೂಲರಾಜ್' ಅವರು ಕ್ರಮವಾಗಿ ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ವಹಿಸಿದ್ದರು. ಮತ್ತೆ ಸಿಖ್ಖರಿಗೆ ಸೋಲಾಯಿತು. ಅಂತಿಮವಾಗಿ ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

8) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕುರಿತು ಬರೆಯಿರಿ

ಉತ್ತರ:– 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಅಂತಿಮ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು.

ಈ ನೀತಿಯ ಪ್ರಕಾರ: 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ನಾಗಪುರ ಮೊದಲಾದಗಳು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗವರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು. ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಸಾಮಾನ್ಯ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ಮಲೆತು ನಿಂತಿತು.

ಬಹು ಆಯ್ಕೆ ಪ್ರಶ್ನೆಗಳು

1) 1839ರಲ್ಲಿ ಯಾರು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು?

ಎ) ರಣಜಿತ್ ಸಿಂಗನು ಬಿ) ಮೂಲರಾಜ

ಸಿ) ಅನ್ವರುದ್ದೀನ ಡಿ) ಮೇಲಿನ ಯಾರೂ ಅಲ್ಲ

ಉತ್ತರ:–ಎ

2) ....ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.

ಎ) 1800 ಬಿ) 1809

ಸಿ) 1706 ಡಿ) 1850

ಉತ್ತರ:–ಬಿ

3) ಪೇಶ್ವೆ ....ನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ

ಎ) ಎರಡನೇ ಬಾಜಿರಾಯ ಬಿ) ಮೂರನೇ ಬಾಜಿರಾಯ

ಸಿ) ಶಂಭಾಜಿ ಡಿ) ಯಾರೂ ಅಲ್ಲ

ಉತ್ತರ:– ಎ

4) ಸಹಾಯಕ ಸೈನ್ಯ ಪದ್ಧತಿ ಕುರಿತ ಯಾವ ಹೇಳಿಕೆ ತಪ್ಪಾಗಿದೆ?

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ

ಉತ್ತರ ಸಂಕೇತ

ಎ) 1, 2. 3 ಮಾತ್ರ ಬಿ) 2, 3, 4 ಮಾತ್ರ

ಸಿ) 1 ಮತ್ತು 2 ಮಾತ್ರ ಡಿ) ಯಾವುದೂ ತಪ್ಪಾಗಿಲ್ಲ

ಉತ್ತರ:– ಡಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

DIFFERENTIABILITY

Multiple Choice questions:-

3. Prove that $\frac{d}{dx}\tan^{-1}x=\frac{1}{1+x^2}$ by definition.

Proof: *(...Contd)*

$$=\frac{1}{\underset{h\to 0}{Lt}\left\{\frac{\sin(y+h)-y}{h\cos(y+h)\cos y}\right\}}$$

$$=\frac{1}{\underset{h\to 0}{Lt}\left(\frac{\sin h}{h}\right)\cdot\left\{\frac{1}{\cos(y+h)\cos y}\right\}}$$

$$=\frac{1}{1)\left\{\frac{1}{\cos y\cos y}\right\}}$$

$$=\cos^2 y\,\frac{1}{\sec^2 y}$$

$$=\frac{1}{1+\tan^2 y}=\frac{1}{1+x^2}$$

Inverse trigonometric functions

Basics

1. Define inverse sine function.

Ans:- Inverse sine function is defined as –

If $\sin\theta=x,\ -\frac{\pi}{2}\le x\le\frac{\pi}{2}$,

then $\sin^{-1}x=\theta,\ -1\le x\le 1$,

is called inverse sine function.

i.e., $\sin^{-1}x=\theta$

$$\Leftrightarrow \sin\theta=x;\ \begin{cases}-\frac{\pi}{2}\le\theta\le\frac{\pi}{2}\\ -1\le x\le 1\end{cases}$$

2. Define inverse cosine function.

Ans:- Inverse cosine function is defined as –

If $\cos\theta=x,\ 0\le\theta\le\pi$, then,

$\cos^{-1}x=\theta,\ -1\le x\le 1$, is called inverse cosine function.

i.e., $\cos^{-1}x=\theta$

$$\Leftrightarrow \cos\theta=x;\ \begin{cases}0\le\theta\le\pi\\ -1\le x\le 1\end{cases}$$

3. Define inverse tangent function.

Ans:- Inverse tangent function is defined as –

If $\tan\theta=x,\ -\frac{\pi}{2}<\theta<\frac{\pi}{2}$, then,

$\tan^{-1}x=\theta,\ -\infty<x<\infty$, is called inverse tangent function.

i.e., $\tan^{-1}x=\theta$

$$\Leftrightarrow \tan\theta=x;\ \begin{cases}-\frac{\pi}{2}<\theta<\frac{\pi}{2}\\ -\infty<x<\infty\end{cases}$$

4. Define inverse cosecant function.

Ans:- Inverse cosecant function is defined as –

If $\operatorname{cosec}\theta=x,\ -\frac{\pi}{2}\le\theta\le\frac{\pi}{2},\ \theta\ne 0$,

then $\operatorname{cosec}^{-1}x=\theta,\ x\le -1$ or $x\ge 1$,

is called inverse cosecant function.

ie., $\operatorname{cosec}^{-1}x=\theta$

$$\Leftrightarrow \operatorname{cosec}\theta=x;\ \begin{cases}-\frac{\pi}{2}\le\theta\le\frac{\pi}{2},\ \theta\ne 0\\ x\le -1\ (or)\ x\ge 1\end{cases}$$

5. Define inverse secant function.

Ans:- **Inverse secant function is defined as –**

If $\sec\theta=x,\ 0\le\theta\le\pi,\ \theta\ne\frac{\pi}{2}$;

then, $\sec^{-1}x=\theta,\ x\le -1\ (or)\ x\ge 1$,

is called inverse secant function.

i.e., $\sec^{-1}x=\theta$

$$\Leftrightarrow \sec\theta=x;\ \begin{cases}0\le\theta\le\pi,\ \theta\ne\frac{\pi}{2}\\ x\le -1\ (or)\ x\ge 1\end{cases}$$

6. Define inverse tangent function.

Ans:- Inverse tangent function is defined as –

If $\cot\theta=x,\ 0<\theta<\pi$, then,

$\cot^{-1}x=\theta,\ -\infty<x<\infty$, is called inverse cotangent function.

i.e., $\cot^{-1}x=\theta$

$$\Leftrightarrow \cot\theta=x;\ \begin{cases}0<\theta<\pi\\ -\infty<x<\infty\end{cases}$$

7. Prove that

$\sin^{-1}(-x)=-\sin^{-1}x,\ -1\le x\le 1$

Soln:- Let $\sin^{-1}(-x)=\theta$

$\therefore \sin\theta=-x$; i.e., $-\sin\theta=x$

$\Rightarrow \sin(-\theta)=x$

Hence, $\sin^{-1}x=-\theta$

(or) $\theta=-\sin^{-1}x$

$\therefore \sin^{-1}(-x)=-\sin^{-1}(-x)$

8. Prove that

$\tan^{-1}(-x)=-\tan^{-1}x,\ -\infty<x<\infty$

Soln :– Let $\tan^{-1}(-x)=\theta$;

so that $\tan\theta=-x$

$\therefore -\tan\theta=x$

$\Rightarrow \tan(-\theta)=x$

(or) $-\theta=\tan^{-1}x$

$\therefore \theta=-\sin^{-1}x$;

Hence, $\tan^{-1}(-x)=-\tan^{-1}x$

9. Prove that

$\cos^{-1}(-x)=\pi-\cos^{-1}x,\ -1\le x\le 1$

Soln :– Let $\cos^{-1}(-x)=\theta$;

$\therefore \cos\theta=-x$

i.e., $-\cos\theta=x$

$\Rightarrow \cos(\pi-\theta)=x$

Hence, $\pi-\theta=\cos^{-1}x$

(or) $\theta=\pi-\cos^{-1}x$

$\therefore \cos^{-1}(-x)=\pi-\cos^{-1}x$

(Contd.......)

ಝೀಕಾ: ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೊಳ್ಳೆ ಉತ್ಪತ್ತಿ ತಾಣಗಳ ನಾಶಪಡಿಸುವಿಕೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ಝೀಕಾ ವೈರಾಣು ಬರದಂತೆ ತಡೆಯಬೇಕು. ಈ ರೋಗಕ್ಕೆ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಪರೀಕ್ಷೆ ಹಾಗೂ ಚಿಕಿತ್ಸೆ ಸಂಪೂರ್ಣ ಉಚಿತವಾಗಿರುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಡೆಂಗಿ, ಚಿಕೂನ್‌ಗುನ್ಯ ರೋಗ ಹರಡುವ ಈಡಿಸ್ ಜಾತಿಯ ಸೊಳ್ಳೆಗಳೇ ಝೀಕಾ ಸೋಂಕು ಸಹ ಹರಡುತ್ತವೆ. ಈ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ. ನಿಂತ ಸ್ವಚ್ಛ ನೀರು ಸೊಳ್ಳೆಗಳ ಉತ್ಪತ್ತಿ ತಾಣಗಳಾಗಿವೆ. ಬಹುತೇಕ ಝೀಕಾ ಸೋಂಕಿತರಿಗೆ ರೋಗ ಲಕ್ಷಣಗಳು ಕಂಡುಬರುವುದಿಲ್ಲ. ಜ್ವರ, ತಲೆನೋವು ಸೇರಿ ವಿವಿಧ ಸೌಮ್ಯ ಲಕ್ಷಣಗಳು ಎರಡರಿಂದ ಏಳು ದಿನಗಳವರೆಗೆ ಇರುತ್ತದೆ. ಗರ್ಭಿಣಿಯರು ಈ ಜ್ವರಕ್ಕೆ ಒಳಗಾದಲ್ಲಿ ಜನಿಸಿದ ಶಿಶುವಿನ ತಲೆಯ ಬೆಳವಣಿಗೆ ಕುಂಠಿತವಾಗುವ ಸಾಧ್ಯತೆ ಇರುತ್ತದೆ ಎಂದು ಇಲಾಖೆ ಹೇಳಿದೆ.

ರೋಗ ಲಕ್ಷಣಗಳು ಕಂಡು ಬಂದವರ ರಕ್ತದ ಮಾದರಿ ಹಾಗೂ ಮೂತ್ರದ ಮಾದರಿ ಸಂಗ್ರಹಿಸಿ, ಪರೀಕ್ಷೆ ಮಾಡುವ ಮೂಲಕ ವೈರಾಣು ಪತ್ತೆ ಮಾಡಲಾಗುತ್ತದೆ. ಇದರ ಬಗ್ಗೆ ಭಯಪಡುವ ಬದಲು, ಮುನ್ನೆಚ್ಚರಿಕೆ ವಹಿಸಬೇಕು ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಝೀಕಾ ವೈರಾಣು ಸೋಂಕಿನ ಲಕ್ಷಣಗಳು
ಜ್ವರ, ತಲೆನೋವು, ಕಣ್ಣು ಕೆಂಪಾಗುವಿಕೆ, ದದ್ದುಗಳು, ಕೀಲು ಮತ್ತು ಸ್ನಾಯುಗಳಲ್ಲಿ ನೋವು

ರೋಗ ದೃಢಪಟ್ಟಲ್ಲಿ ಏನು ಮಾಡಬೇಕು?

- ಝೀಕಾ ವೈರಾಣು ಸೋಂಕಿಗೆ ನಿರ್ದಿಷ್ಟ ಚಿಕಿತ್ಸೆ ಹಾಗೂ ಲಸಿಕೆ ಲಭ್ಯವಿರುವುದಿಲ್ಲ
- ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುವುದು
- ಮನೆಯಲ್ಲಿಯೇ ಚಿಕಿತ್ಸೆ ಪಡೆಯಬಹುದು. ವಿಶ್ರಾಂತಿ ಅಗತ್ಯ
- ನಿರ್ಜಲೀಕರಣ ತಪ್ಪಿಸಲು ಹೆಚ್ಚು ನೀರಿನ ಅಂಶವುಳ್ಳ ಆಹಾರ ಪದಾರ್ಥಗಳನ್ನು ಬಳಸಬೇಕು
- ರೋಗ ಲಕ್ಷಣಗಳಿಗೆ ಅನುಗುಣವಾಗಿ ವೈದ್ಯರ ಸಲಹೆಯಂತೆ ನೀಡುವ ಔಷಧಗಳನ್ನು ಸೇವಿಸಬೇಕು
- ರೋಗ ಲಕ್ಷಣಗಳು ಹೆಚ್ಚಾದರೆ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು
- ಝೀಕಾ ವೈರಾಣು ಸೋಂಕು ಬೇರೆಯವರಿಗೆ ಹರಡುವುದನ್ನು ತಡೆಯಲು ಸೊಳ್ಳೆ ಪರದೆಯನ್ನು ಬಳಸಬೇಕು

ಮುಂಜಾಗ್ರತಾ ಕ್ರಮಗಳು ಏನು?

- ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಪಡಿಸುವುದು
- ಮನೆಯ ಒಳಾಂಗಣ ಹಾಗೂ ಹೊರಾಂಗಣವನ್ನು ಸ್ವಚ್ಛವಾಗಿಡುವುದು
- ನೀರು ಸಂಗ್ರಹಣಾ ಪರಿಕರಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸುವುದು ಹಾಗೂ ಮುಚ್ಚಳದಿಂದ ಮುಚ್ಚುವುದು
- ಸುತ್ತ-ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಹಾಗೂ ನೀರು ನಿಲ್ಲದಂತೆ ಎಚ್ಚರವಹಿಸುವುದು
- ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸುವುದು. ಸೊಳ್ಳೆ ಪರದೆ, ಸೊಳ್ಳೆ ನಿರೋಧಕಗಳನ್ನು ಉಪಯೋಗಿಸುವುದು

ಮಹದಾಯಿ ಜಲಾನಯನ ಪ್ರದೇಶಕ್ಕೆ ಒಂಬತ್ತು ಜನರನ್ನೊಳಗೊಂಡ ತಂಡದಿಂದ ಭೇಟಿ

‘ಪ್ರವಾಹ’ ಸದಸ್ಯರಿಂದ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಮಹದಾಯಿ ನದಿ ನೀರಿನ ಹಂಚಿಕೆ ಸಂಬಂಧ ಕೇಂದ್ರ ಸರ್ಕಾರ ರಚಿಸಿದ ‘ಪ್ರವಾಹ’ (Progressive River Authority For Water and Harmony) ತಂಡವು ಮಹದಾಯಿ ಜಲಾನಯನ ಪ್ರದೇಶಕ್ಕೆ ಭಾನುವಾರ ಭೇಟಿ ನೀಡಿ ಮಾಹಿತಿ ಕಲೆಹಾಕಿತು.

ಮುಖ್ಯಸ್ಥ ಪಿ.ಎಂ.ಸ್ಕಾಟ್, ಸದಸ್ಯರಾದ ವೀರೇಂದ್ರ ಶರ್ಮಾ, ಮನೋಜ್ ತಿವಾರಿ, ನೀರಜ್ ಮಂಗಲಿಕ, ಗೌರವ ಗುಪ್ತಾ, ಸುಭಾಷಚಂದ್ರ, ಮಿಲಿಂದ್ ನಾಯ್ಕ, ಪ್ರಮೋದ ಬಾದಾಮಿ, ಅಶೋಕಕುಮಾರ್ ವಿ. ಅವರನ್ನು ಒಳಗೊಂಡ 9 ಜನರ ತಂಡ ಬೆಳಿಗ್ಗೆ ಗೋವಾದ ಪಣಜಿಯಿಂದ ಹೊರಟಿತು.

ರಸ್ತೆ ಮಾರ್ಗವಾಗಿ ಬಂದ ಸದಸ್ಯರನ್ನು ಕರ್ನಾಟಕ–ಗೋವಾ ಗಡಿಯ ಚೋರ್ಲಾ ಬಳಿ ರಾಜ್ಯದ ನೀರಾವರಿ ನಿಗಮದ ಅಧಿಕಾರಿಗಳು ಮತ್ತು ಪೊಲೀಸರು ಸ್ವಾಗತಿಸಿದರು. ಅಲ್ಲಿಂದ ಕಣಕುಂಬಿ ಅರಣ್ಯದ ಹಳತಾರಾ ನಾಲೆ, ಸುರ್ಲಾ ನಾಲೆ, ಕಳಸಾ ನಾಲೆಗೆ ತಂಡ ಭೇಟಿ ನೀಡಿ ಪರಿಶೀಲಿಸಿತು. ನಂತರ ಕಣಕುಂಬಿ ಪ್ರವಾಸಿ ಮಂದಿರಕ್ಕೆ ತೆರಳಿ ಸಭೆ ನಡೆಸಿತು.

ಕರ್ನಾಟಕ ನೀರಾವರಿ ನಿಗಮದ ಹಿರಿಯ ಅಧಿಕಾರಿಗಳು, ಯೋಜನೆ ಅನುಷ್ಠಾನದ ಬಗ್ಗೆ ಸಮಗ್ರವಾಗಿ ಮಾಹಿತಿ ನೀಡಿದರು. ಯೋಜನೆ ನಕ್ಷೆಯೊಂದಿಗೆ ವಿವರಿಸಿದ ಅವರು, ‘ಗೋವಾ ಆರೋಪಿಸುತ್ತಿರುವ ಪ್ರಕಾರ, ಯೋಜನೆ ಪ್ರದೇಶದಲ್ಲಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ’ ಎಂದು ಮನವರಿಕೆ ಮಾಡಿಕೊಟ್ಟರು. ನಂತರ ಬಂಡೂರಿ ನಾಲೆ ಪ್ರದೇಶ, ನೇರಸೆ ಗ್ರಾಮಕ್ಕೆ ತಂಡದವರು ಭೇಟಿ ನೀಡಿ, ಬೆಳಗಾವಿ ತಲುಪಿದರು.

ಕಾಡಿದ ಜಿಗಣೆಗಳು: ನಿರಂತರವಾಗಿ ಸುರಿಯುತ್ತಿರುವ ಮಳೆಯಲ್ಲೇ ಛತ್ರಿ ಹಿಡಿದು, ರೇನ್‌ಕೋಟ್ ಹಾಕಿಕೊಂಡು ಓಡಾಡಿದ ತಂಡದ ಸದಸ್ಯರನ್ನು ಜಿಗಣೆಗಳು ಬಿಟ್ಟುಬಿಡದಂತೆ ಕಾಡಿದವು.

ಸೋಮವಾರ ಬೆಂಗಳೂರಿನತ್ತ ಪ್ರಯಾಣ ಬೆಳೆಸಲಿರುವ ಅವರು, ಅಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಲಿದ್ದಾರೆ.

ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ ತಮ್ಮ ‘ಎಕ್ಸ್’ ಖಾತೆಯಲ್ಲಿ, ‘ಪ್ರವಾಹ ತಂಡದ ಸದಸ್ಯರು ಕಳಸಾ-ಬಂಡೂರಿ ತಿರುವು ಯೋಜನೆ ಪ್ರದೇಶ ಪರಿಶೀಲಿಸಲಿದ್ದಾರೆ. ಕರ್ನಾಟಕ ಸರ್ಕಾರಕ್ಕೆ ಸತ್ಯಾಸತ್ಯತೆ ಗೊತ್ತಾಗಲಿದೆ. ಈ ಪರಿಶೀಲನೆ ಗೋವಾದ ಪಾಲಿಗೆ ನಿರ್ಣಾಯಕ. ಗೋವಾ ಸರ್ಕಾರದ ನಿರಂತರ ಪ್ರಯತ್ನದ ಫಲ’ ಎಂದು ಬರೆದುಕೊಂಡಿದ್ದರು.

‘ಪ್ರವಾಹ ತಂಡದ ಸದಸ್ಯರು ತಮ್ಮ ಭೇಟಿಯ ಉದ್ದೇಶದ ಬಗ್ಗೆ ಮಾಧ್ಯಮಗಳಿಗೆ ಯಾವುದೇ ರೀತಿಯ ಹೇಳಿಕೆ ನೀಡದೆ ನುಣುಚಿಕೊಂಡಿದ್ದು ಸರಿಯಲ್ಲ. ಇದರಿಂದಾಗಿ ಅವರ ಭೇಟಿಯೂ ಗೊಂದಲದ ಗೂಡಾಗಿಯೇ ಉಳಿದಿದೆ’ ಎಂದು ಮಹದಾಯಿ ಹೋರಾಟಗಾರರು ಆಕ್ಷೇಪಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಮಹದಾಯಿ ಜಲಾನಯನ ಪ್ರದೇಶಕ್ಕೆ ‘ಪ್ರವಾಹ’ ತಂಡದ ಸದಸ್ಯರು ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು

‘ಇದು ಸಾಮಾನ್ಯ ಭೇಟಿ ಮಾತ್ರ’

‘ಕಳಸಾ- ಬಂಡೂರಿ ತಿರುವು ಯೋಜನೆ ಪ್ರದೇಶಕ್ಕೆ ಒಂಬತ್ತು ಜನರ ತಂಡ ಭೇಟಿ ನೀಡಿದೆ. ಇಲ್ಲಿ ಏನೇನು ಕಾಮಗಾರಿ ನಡೆಯುತ್ತಿವೆ ಎಂದು ಪರಿಶೀಲಿಸಿದೆ. ಗೋವಾಕ್ಕೆ ಎರಡು ದಿನ, ಮಹಾರಾಷ್ಟ್ರಕ್ಕೆ ಎರಡು ದಿನ ಭೇಟಿ ಕೊಟ್ಟ ನಂತರ, ಕರ್ನಾಟಕಕ್ಕೆ ಬಂದಿದೆ. ಇದೊಂದು ಸಾಮಾನ್ಯ ಭೇಟಿ ಮಾತ್ರ’ ಎಂದ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ ಅಮ್ಮಿನಭಾವಿ ಸುದ್ದಿಗಾರರಿಗೆ ತಿಳಿಸಿದರು.

ಗೋವಾ ಸಿ.ಎಂ ತಮ್ಮ ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿರುವ ಕುರಿತ ಪ್ರಶ್ನೆಗೆ, ‘ಆ ಬಗ್ಗೆ ನನಗೆ ಗೊತ್ತಿಲ್ಲ. ಇದು ಕಾಮಗಾರಿಗಳ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವ ತಂಡ ಅಲ್ಲ’ ಎಂದರು.

‘ಈ ತಂಡದ ಭೇಟಿಯಿಂದ ನಮ್ಮ ರಾಜ್ಯಕ್ಕೆ ಅನುಕೂಲವಾಗಲಿದೆಯೇ’ ಎನ್ನುವ ಪ್ರಶ್ನೆಗೆ ಉತ್ತರಿಸದೆ ಸ್ಥಳದಿಂದ ಹೋದರು.

ಮಹತ್ವಾಕಾಂಕ್ಷಿ ಯೋಜನೆ ಅನುಷ್ಠಾನವಾಗಬಾರದೆಂದು ಗೋವಾ ಕ್ಯಾತೆ ತೆಗೆದಿದೆ. ಯೋಜನೆಗೆ ಹಿನ್ನಡೆ ಉಂಟು ಮಾಡುವುದು ಅವರ ರಾಜಕೀಯ ತಂತ್ರ
ಸಿದಗೌಡ ಮೋದಗಿ, ಭಾರತೀಯ ಕೃಷಿಕ ಸಮಾಜ(ಸಂಯುಕ್ತ) ರೈತ ಸಂಘಟನೆ

‘ಪ್ರವಾಹ’ ತಂಡ ಯಾವುದೇ ವರದಿ ಸಲ್ಲಿಸುವುದಿಲ್ಲ. ನೀರು ಹಂಚಿಕೆ ಕುರಿತು ಸುಪ್ರೀಂಕೋರ್ಟ್ ಈಗಾಗಲೇ ಆದೇಶ ನೀಡಿದೆ. ರಾಜ್ಯದ ರೈತರು ಆತಂಕಪಡುವ ಅಗತ್ಯವಿಲ್ಲ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಅನುಮತಿ ಇಲ್ಲದೆ ಕರ್ನಾಟಕ ಕಾಮಗಾರಿ ಕೈಗೊಳ್ಳುತ್ತಿದೆ ಎಂದು ಸಾಬೀತುಪಡಿಸುವಲ್ಲಿ ಗೋವಾ ಸರ್ಕಾರ ವಿಫಲವಾಗಿದೆ. ಸಿ.ಎಂ ಪ್ರಮೋದ ಸಾವಂತ್ ಅವರಿಗೆ ಮುಖಭಂಗವಾಗಿದೆ
ಅಶೋಕ ಚಂದರಗಿ, ಸದಸ್ಯ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಹಾವೇರಿ: ಬಾಲಕನಿಗೆ ಇಲಿ ಜ್ವರ

ಪ್ರಜಾವಾಣಿ ವಾರ್ತೆ

ಹಾವೇರಿ: ತಾಲ್ಲೂಕಿನ ದೇವಿಹೊಸೂರು ಬಳಿಯ ಬೆಂಚಿಹಳ್ಳಿ ಗ್ರಾಮದ 12 ವರ್ಷದ ಬಾಲಕ ಇಲಿ ಜ್ವರದಿಂದ ಬಳಲುತ್ತಿದ್ದು, ಇಲ್ಲಿಯ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

‘ಬಾಲಕ 15 ದಿನಗಳಿಂದ ತೀವ್ರ ಜ್ವರದಿಂದ ಬಳಲುತ್ತಿದ್ದ. ಕಾಮಾಲೆ ಇರಬಹುದೆಂದು ರಕ್ತದ ಮಾದರಿ ತಪಾಸಣೆ ಮಾಡಲಾಗಿತ್ತು. ಇಲಿ ಜ್ವರವೆಂದು ವರದಿ ಬಂದಿದೆ. ಬಾಲಕನನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಚಿಕಿತ್ಸೆ ಮುಂದುವರಿಸಲಾಗಿದ್ದು, ಆತನ ಆರೋಗ್ಯ ಸ್ಥಿರವಾಗಿದೆ’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಪಿ.ಆರ್.ಹಾವನೂರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಲಿಯ ಮಲ ಹಾಗೂ ಮೂತ್ರದಲ್ಲಿರುವ ಬ್ಯಾಕ್ಟೀರಿಯಾ, ಮನುಷ್ಯನ ದೇಹ ಪ್ರವೇಶಿಸಿದಾಗ ಇಲಿ ಜ್ವರ ಬರುತ್ತದೆ. ಈ ಜ್ವರಕ್ಕೆ ಚಿಕಿತ್ಸೆ ಲಭ್ಯವಿದೆ. ಬಾಲಕನ ಆರೋಗ್ಯವೂ ಸುಧಾರಿಸುತ್ತಿದೆ. ಆತಂಕಪಡುವ ಅಗತ್ಯವಿಲ್ಲ’ ಎಂದರು.

‘ಇಲಿ ಜ್ವರ ಪ್ರಕರಣಗಳು ಪದೇ ಪದೇ ಕಂಡುಬರುತ್ತವೆ. ಈ ಇಲಿ ಜ್ವರ ಪ್ರಕರಣ, ಈ ಮಳೆಗಾಲದ ಮೊದಲ ಪ್ರಕರಣವಾಗಿದೆ. ಬಾಲಕ ವಾಸವಿದ್ದ ಗ್ರಾಮದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ’ ಎಂದು ಹೇಳಿದರು.

ಬಾಲಕನ ತಾಯಿ, ‘15 ದಿನಗಳ ಹಿಂದೆ ಮಗನಿಗೆ ತೀವ್ರ ಜ್ವರವಿತ್ತು. ಸ್ಥಳೀಯ ವೈದ್ಯರ ಸಲಹೆಯಂತೆ ಜಿಲ್ಲಾಸ್ಪತ್ರೆಗೆ ಕರೆತಂದಿದ್ದೆ. ಚಿಕಿತ್ಸೆ ಪಡೆದು ಎರಡು ದಿನಗಳ ನಂತರ ಮಗ ಹುಷಾರಾಗಿದ್ದ. ಹೀಗಾಗಿ, ವಾಪಸ್ ಊರಿಗೆ ಹೋಗಿದ್ದೆವು. ಶನಿವಾರ (ಜುಲೈ 6) ಕರೆ ಮಾಡಿದ್ದ ವೈದ್ಯರು, ಮಗನಿಗೆ ಇಲಿ ಜ್ವರ ಇರುವುದಾಗಿ ಹೇಳಿದರು. ಹೀಗಾಗಿ, ಮಗನನ್ನು ಚಿಕಿತ್ಸೆಗಾಗಿ ಪುನಃ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೇವೆ’ ಎಂದರು.

ಚಿಕಿತ್ಸೆ ನೀಡುತ್ತಿರುವ ವೈದ್ಯೆ ಡಾ.ಭಾಗ್ಯ, ‘ಸಾಮಾನ್ಯ ಜ್ವರದ ರೀತಿಯಲ್ಲಿ ಇಲಿ ಜ್ವರ ಆರಂಭವಾಗುತ್ತದೆ. ಸುಸ್ತು, ಮೈ ಕೈ ನೋವು ಹಾಗೂ ಇತರೆ ಲಕ್ಷಣ ಇರುತ್ತದೆ. ಇದಕ್ಕೆ ಸೂಕ್ತ ಚಿಕಿತ್ಸೆಯೂ ಇದೆ. ಸದ್ಯ ಬಾಲಕ ಚೇತರಿಸಿಕೊಳ್ಳುತ್ತಿದ್ದಾನೆ’ ಎಂದರು.

7ನೇ ವೇತನ ಆಯೋಗ, ಹಳೆ ಪಿಂಚಣಿ ಯೋಜನೆ ಮರುಜಾರಿಗೆ ಆಗ್ರಹ

ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನೌಕರರ ನಿರ್ಣಯ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ವರದಿಯ ಶಿಫಾರಸು ಜಾರಿಗೊಳಿಸುವುದು, ಹಳೆ ಪಿಂಚಣಿ ಯೋಜನೆ ಮರು ಜಾರಿ ಹಾಗೂ ‘ಆರೋಗ್ಯ ಸಂಜೀವಿನಿ’ ಯೋಜನೆ ಜಾರಿಗೆ ಒತ್ತಾಯಿಸಿ ಕರ್ತವ್ಯಕ್ಕೆ ಗೈರಾಗುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವ ಕುರಿತು ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆ ಭಾನುವಾರ ನಿರ್ಣಯ ಕೈಗೊಂಡಿದೆ.

ನಗರದ ಸೀತಾ ದಯಾನಂದ ಪೈ ಕಲ್ಯಾಣ ಮಂಟಪದಲ್ಲಿ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಷಡಾಕ್ಷರಿ ನೇತೃತ್ವದಲ್ಲಿ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಈ ಪ್ರಸ್ತಾಪವನ್ನು ಒಕ್ಕೊರಲಿನಿಂದ ಅನುಮೋದಿಸಲಾಗಿದೆ.

ಹೋರಾಟದ ಮೊದಲ ಹಂತವಾಗಿ ಇದೇ 8ರಿಂದ 14ರವರೆಗೆ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಮನವಿ ಸಲ್ಲಿಸುವುದು. ನಂತರ ಬೆಂಗಳೂರಿನಲ್ಲಿ ಮತ್ತೊಮ್ಮೆ ರಾಜ್ಯ ಕಾರ್ಯಕಾರಿಣಿ ಸಭೆ ನಡೆಸಿ ಬೇಡಿಕೆಗಳ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸುವುದು. ಸ್ಪಂದಿಸದಿದ್ದಲ್ಲಿ ಈ ತಿಂಗಳ ಕೊನೆಯಲ್ಲಿ ಅಥವಾ ಆಗಸ್ಟ್ ಮೊದಲವಾರದಲ್ಲಿ ಕರ್ತವ್ಯಕ್ಕೆ ಗೈರು ಹಾಜರಾಗಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಸಭೆ ತೀರ್ಮಾನಿಸಿದೆ.

ಸಭೆಯಲ್ಲಿ ವಿವಿಧ ಇಲಾಖೆ ನೌಕರರ ಸಂಘಗಳ ಪ್ರಮುಖರು ಮಾತನಾಡಿ, ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟ ಅನಿವಾರ್ಯವಾಗಿದೆ. ರಾಜ್ಯದ ಆರು ಲಕ್ಷ ಸರ್ಕಾರಿ ನೌಕರರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಷಡಾಕ್ಷರಿ ಪ್ರಾಸ್ತಾವಿಕವಾಗಿ ಮಾತನಾಡಿ, 7ನೇ ವೇತನ ಆಯೋಗ ವರದಿ ನೀಡಿ 19 ತಿಂಗಳಾದರೂ ಜಾರಿಗೊಳಿಸಲು ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. ನೌಕರರಿಗೆ ಹಳೆ ಪಿಂಚಣಿ ಯೋಜನೆಯನ್ನೇ ಮುಂದುವರಿಸಬೇಕು, ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸುವುದು ಸೇರಿದಂತೆ ಯಾವುದೇ ಬೇಡಿಕೆಗಳಿಗೂ ರಾಜ್ಯ ಸರ್ಕಾರ ಎರಡು ವರ್ಷಗಳಿಂದ ಸ್ಪಂದಿಸಿಲ್ಲ ಎಂದು ಆರೋಪಿಸಿದರು.

ಸರ್ಕಾರಿ ನೌಕರರ ಸಂಘದ ರಾಜ್ಯ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಏಳನೇ ವೇತನ ಆಯೋಗದ ವರದಿಯ ಶಿಫಾರಸನ್ನು ಶೀಘ್ರ ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದರು. ಬಳಿಕ ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಜಾರಿ ಮಾಡುವುದಾಗಿ ಹೇಳಿದ್ದರು. ಆದರೆ ಆ ಭರವಸೆ ಈಡೇರದೆ ನಮ್ಮ ನಿರೀಕ್ಷೆ ಹುಸಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸಂಘದ ಪದಾಧಿಕಾರಿಗಳು ಹಲವು ಬಾರಿ ಮುಖ್ಯಮಂತ್ರಿ ಭೇಟಿಯಾಗಿ ಮನವಿ ಸಲ್ಲಿಸಿದ್ದರೂ ಉಪಯೋಗವಾಗಿಲ್ಲ. ರಾಜ್ಯ ಸರ್ಕಾರಕ್ಕೆ ನಮ್ಮ ಬೇಡಿಕೆಗಳನ್ನು ಈಡೇರಿಸಲು ಮನಸ್ಸಿಲ್ಲ ಎಂದು ದೂರಿದರು.

ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್ ಕಾರ್ಯಕ್ರಮ ಉದ್ಘಾಟಿಸಿ, ‘ಸರ್ಕಾರಿ ನೌಕರರಿಗೂ ಹೆಂಡತಿ, ಮಕ್ಕಳು, ಸಂಸಾರ ಇರುವುದನ್ನು ಸರ್ಕಾರ ಮನಗಾಣಬೇಕು. ನಾಡಿನ ಮತ್ತು ಜನರ ಏಳಿಗೆಗೆ ದುಡಿಯುತ್ತಿರುವ ನೌಕರರ ಬೇಡಿಕೆಗಳನ್ನು ಈಡೇರಿಸಬೇಕು’ ಎಂದರು.

ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಗೌರವಾಧ್ಯಕ್ಷ ವೆಂಕಟೇಶಯ್ಯ, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ್, ಹಿರಿಯ ಉಪಾಧ್ಯಕ್ಷ ಎಂ.ವಿ. ರುದ್ರಪ್ಪ, ಎಸ್. ಬಸವರಾಜ್, ಖಜಾಂಚಿ ಡಾ. ಸಿದ್ದರಾಮಣ್ಣ, ಚಿಕ್ಕಮಗಳೂರು ಜಿಲ್ಲಾ ಘಟಕದ ಅಧ್ಯಕ್ಷ ದೇವೇಂದ್ರ, ರಾಜ್ಯದ ವಿವಿಧ ಜಿಲ್ಲೆಗಳ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟ ಅನಿವಾರ್ಯ. ರಾಜ್ಯದ ಎಲ್ಲ ಸರ್ಕಾರಿ ನೌಕರರೂ ಮುಷ್ಕರವನ್ನು ಬೆಂಬಲಿಸಬೇಕು.
ಷಡಾಕ್ಷರಿ, ಸರ್ಕಾರಿ ನೌಕರರ ಸಂಘ ರಾಜ್ಯ ಘಟಕದ ಅಧ್ಯಕ್ಷ

ಪ್ರವೇಶ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವೀಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಶೈಕ್ಷಣಿಕ ಕೋರ್ಸ್ ಪ್ರವೇಶಕ್ಕಾಗಿ ಮತ್ತು ಸರ್ಕಾರಿ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ‘ಪರೀಕ್ಷಾ ವೀಕ್ಷಕ’ರನ್ನು ನೇಮಕ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕ್ರಮ ತೆಗೆದುಕೊಂಡಿದೆ.

ಪರೀಕ್ಷಾ ವೀಕ್ಷಕರಾಗಿ ನೇಮಕ ಮಾಡಲು ಅಗತ್ಯವಿರುವ ಸಿಬ್ಬಂದಿಯನ್ನು ಒದಗಿಸುವಂತೆ ಇದೇ ಜೂನ್ 22ರಂದು ಪ್ರಾಧಿಕಾರವು ಕಾಲೇಜು ಶಿಕ್ಷಣ ಇಲಾಖೆಗೆ ಪತ್ರ ಬರೆದಿತ್ತು. ಪರೀಕ್ಷಾ ವೀಕ್ಷಕರಾಗಿ ನೇಮಕ ಮಾಡಲು ಆಯ್ಕೆ ಮಾಡಲಾದ ಸಿಬ್ಬಂದಿಯ ಪಟ್ಟಿಯನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ.

‘ಜುಲೈ ತಿಂಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ನೇಮಕ ಮಾಡಲು, ಪದವಿ ಕಾಲೇಜುಗಳ 60 ಹಿರಿಯ ಉಪನ್ಯಾಸಕರ ಅಗತ್ಯವಿದೆ’ ಎಂದು ಪ್ರಾಧಿಕಾರವು ಕೋರಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು, ಕಲ್ಲಿದ್ದಲ ಕಾವಾಗಬೇಕು.

–ಕುವೆಂಪು

ಭಾರತೀಯ ನ್ಯಾಯ ಸಂಹಿತೆ ಕಾಲದ ಅಗತ್ಯ ಗುರುತಿಸದ ಕಾನೂನು

ಜುಲೈ 1ರಿಂದ ಜಾರಿಗೆ ಬಂದಿರುವ ಭಾರತೀಯ ನ್ಯಾಯ ಸಂಹಿತೆಯು (ಬಿಎನ್‌ಎಸ್) ಹೊಸ ಕಾನೂನು ಜಾರಿಯ ದೃಷ್ಟಿಯಿಂದ ಸ್ವಾತಂತ್ರ್ಯಾನಂತರ ದೇಶ ಕಂಡಿರುವ ಅತ್ಯಂತ ಮಹತ್ವದ ಘಟ್ಟಗಳಲ್ಲಿ ಒಂದು. ಆದರೆ, ಈ ಕಾನೂನಿನ ಜಾರಿಯ ಜೊತೆ ವಿವಾದಗಳೂ ಬೆಸೆದುಕೊಂಡಿವೆ. ಭಾರತೀಯ ದಂಡಸಂಹಿತೆಯಲ್ಲಿ (ಐಪಿಸಿ) ದೇಶದ್ರೋಹಕ್ಕೆ ಸಂಬಂಧಿಸಿದಂತೆ ಇದ್ದ ಸೆಕ್ಷನ್ ಅನ್ನು ಬಿಎನ್‌ಎಸ್‌ನಲ್ಲಿ ಕೈಬಿಡಲಾಗಿದೆ. ಆದರೆ, ಅದಕ್ಕಿಂತ ಹೆಚ್ಚು ಕಠಿಣವಾಗಿರುವ, ಕರಾಳವಾಗಿರುವ ಅಂಶಗಳನ್ನು ಬಿಎನ್‌ಎಸ್‌ನಲ್ಲಿ ಸೇರಿಸಲಾಗಿದೆ ಎಂದು ಕೆಲವು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹೊಸ ಕಾನೂನಿನ ಪ್ರಕಾರ, ಸರ್ಕಾರದ ವಿರುದ್ಧ ಸಾಮಾಜಿಕ ಜಾಲತಾಣಗಳ ಮೂಲಕ ಒಂದು ಅಭಿಪ್ರಾಯ ದಾಖಲಿಸುವುದನ್ನು ಕೂಡ ರಾಷ್ಟ್ರವಿರೋಧಿ ಎಂದು ಅರ್ಥೈಸಲು ಅವಕಾಶ ಇದೆ. ಇದರ ಪರಿಣಾಮವಾಗಿ ವ್ಯಕ್ತಿಯ ಬಂಧನವೂ ಆಗಬಹುದು. ಪ್ರಭುತ್ವ ವಿರೋಧಿ ಚಟುವಟಿಕೆಗಳ ಬಗ್ಗೆ ಬಹಳ ಬಿಡುಬೀಸಾದ ಹಾಗೂ ಅಸ್ಪಷ್ಟವಾದ ವ್ಯಾಖ್ಯಾನವನ್ನು ಕಾನೂನಿನಲ್ಲಿ ಅಳವಡಿಸಿಕೊಂಡಿರುವುದು ಮುಕ್ತ ಅಭಿವ್ಯಕ್ತಿಗೆ ಹಾಗೂ ನಾಗರಿಕ ಹಕ್ಕುಗಳಿಗೆ ಗಂಭೀರ ಬೆದರಿಕೆಯನ್ನು ಒಡ್ಡಿದೆ. ಏಕೆಂದರೆ, ಈ ಬಗೆಯ ವ್ಯಾಖ್ಯಾನವು ಭಿನ್ನಮತ ಹಾಗೂ ಟೀಕೆಗಳ ವಿರುದ್ಧ ಬಹಳ ಸುಲಭವಾಗಿ ಕ್ರಮ ಜರುಗಿಸಲು ಪ್ರಭುತ್ವಕ್ಕೆ ಅವಕಾಶ ಕಲ್ಪಿಸುತ್ತದೆ.

ಕಾನೂನುಗಳು ಆಧುನಿಕ ಸಮಾಜದ ರೀತಿ ರಿವಾಜುಗಳಿಗೆ ಸ್ಪಂದಿಸುವಂತೆಯೂ ಇರಬೇಕು

ಪುರುಷ ಹಾಗೂ ಮಹಿಳೆಯ ನಡುವಿನ ಸಂಬಂಧದ ವಿಚಾರದಲ್ಲಿಯೂ ಸಮಸ್ಯೆಗಳನ್ನು ಸೃಷ್ಟಿಸಬಹುದಾದ ಅಂಶಗಳು ಬಿಎನ್‌ಎಸ್‌ನಲ್ಲಿ ಇವೆ. ಮದುವೆ ಆಗುವುದಾಗಿ ಭರವಸೆ ನೀಡಿ ಮಹಿಳೆಯ ಜೊತೆ ಲೈಂಗಿಕ ಸಂಪರ್ಕ ಬೆಳೆಸುವ ಪುರುಷನೊಬ್ಬ, ಮುಂದೆ ಸಂಬಂಧವನ್ನು ಕಡಿದುಕೊಂಡರೆ ಆತನಿಗೆ ದಂಡ ಹಾಗೂ 10 ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಬಿಎನ್‌ಎಸ್‌ನ ಸೆಕ್ಷನ್ 69ರ ಅಡಿಯಲ್ಲಿ ಅವಕಾಶ ಇದೆ. ಆಧುನಿಕ ಕಾಲಘಟ್ಟದ ಸಂಬಂಧಗಳಿಗೆ ಇರುವ ಸಂಕೀರ್ಣ ಆಯಾಮಗಳನ್ನು ಈ ಸೆಕ್ಷನ್ ಪರಿಗಣನೆಗೆ ತೆಗೆದುಕೊಂಡೇ ಇಲ್ಲ. ಬದಲಿಗೆ, ಇಬ್ಬರು ವಯಸ್ಕರು ಸಹಮತದ ಸಂಬಂಧ ಹೊಂದುವುದನ್ನೂ ಬಹಳ ಹಳೆಯ ಕಾಲದ ದೃಷ್ಟಿಕೋನದ ಮೂಲಕ ಕಂಡು, ಅದಕ್ಕೆ ಶಿಕ್ಷೆಯನ್ನು ವಿಧಿಸುತ್ತದೆ. ಸಂಬಂಧವನ್ನು ಬೆಳೆಸುವ ಮೊದಲು ಪುರುಷನು ತನ್ನ ನಿಜ ಗುರುತನ್ನು ಮುಚ್ಚಿಟ್ಟಿದ್ದರೆ ಅಥವಾ ತನ್ನ ವೈವಾಹಿಕ ಸಂಬಂಧದ ಬಗ್ಗೆ ಸುಳ್ಳು ಹೇಳಿದ್ದಿದ್ದರೆ ಆತನಿಗೆ ಶಿಕ್ಷೆ ವಿಧಿಸಲು, ಈಗ ಮಾನ್ಯತೆ ಕಳೆದುಕೊಂಡಿರುವ ಐಪಿಸಿ ಅಡಿ ಅವಕಾಶ ಇತ್ತು. ಆದರೆ, ಈ ವಿಚಾರದಲ್ಲಿ ಒಂದು ಹೆಜ್ಜೆ ಮುಂದಕ್ಕೆ ಹೋಗಿರುವ ಬಿಎನ್‌ಎಸ್, ಸಂಬಂಧವೊಂದರಲ್ಲಿ ಮದುವೆಯಾಗುವ ಭರವಸೆ ನೀಡಿ, ಮುಂದೆ ಆ ಸಂಬಂಧವನ್ನು ಮುರಿದುಕೊಂಡರೆ, ಹಾಗೆ ಸಂಬಂಧ ಮುರಿದುಕೊಳ್ಳುವುದು ಕ್ರಿಮಿನಲ್ ಅಪರಾಧ ಎಂಬಂತೆ ಕಾಣುತ್ತದೆ. ಆದರೆ ಇಂದಿನ ಸಮಾಜದಲ್ಲಿ ಲಿವ್–ಇನ್ ಸಂಬಂಧಗಳು ಹಾಗೂ ಸಹಮತದ ಸಂಬಂಧಗಳು ಹೆಚ್ಚೆಚ್ಚು ಒಪ್ಪಿತವಾಗಿವೆ. ಅಂತಹ ಸಂಬಂಧಗಳನ್ನು ಗುರುತಿಸುವ ಕೆಲಸಗಳು ಕೂಡ ಆಗಿವೆ. ಹೀಗಿರುವಾಗಿ ಬಿಎನ್‌ಎಸ್‌ನಲ್ಲಿ ಇರುವ ಇಂತಹ ಅಂಶಗಳು ಪ್ರತಿಗಾಮಿ ಆಗುತ್ತವೆ. ಎಲ್ಲ ಸಂಬಂಧಗಳೂ ಮದುವೆಯ ಹಂತವನ್ನು ಪ್ರವೇಶಿಸಬೇಕು ಎಂದೇನೂ ಇಲ್ಲ, ಒಬ್ಬರಿಗೊಬ್ಬರು ಆಗಿಬರುತ್ತಿಲ್ಲ ಎಂದಾದರೆ ಸಂಬಂಧವನ್ನು ಕೊನೆಗೊಳಿಸುವ ಸ್ವಾತಂತ್ರ್ಯವು ಇಬ್ಬರಿಗೂ ಇರಬೇಕು ಎಂಬ ವಾಸ್ತವವನ್ನು ಈ ಕಾನೂನು ಮಾನ್ಯ ಮಾಡುವುದಿಲ್ಲ.

ಪುರುಷರ ಪಾಲಿಗೆ, ಮನಸ್ಸಿಗೆ ಒಪ್ಪಿಗೆ ಆಗದಿದ್ದರೂ ಮದುವೆ ಆಗಲೇಬೇಕಾದ ಅನಿವಾರ್ಯವನ್ನು ತಂದಿರಿಸುತ್ತದೆ. ಅಥವಾ ಸಂಬಂಧವನ್ನು ಕೊನೆಗೊಳಿಸುವುದನ್ನೇ ಆಯ್ಕೆ ಮಾಡಿಕೊಂಡರೆ ಅದಕ್ಕೆ ಕಠಿಣ ಶಿಕ್ಷೆಯನ್ನು ಅನುಭವಿಸಬೇಕಾದ ಪರಿಸ್ಥಿತಿಯನ್ನು ಬಿಎನ್‌ಎಸ್ ಸೃಷ್ಟಿಸುತ್ತದೆ. ಸಂಬಂಧಗಳು ರೂಪುಗೊಳ್ಳಬೇಕಿರುವುದು ಪರಸ್ಪರ ಸಹಮತದ ಮೂಲಕ, ಪರಸ್ಪರರಲ್ಲಿ ಮೂಡುವ ಹೊಂದಾಣಿಕೆಗಳ ಮೂಲಕವೇ ವಿನಾ ಕಾನೂನುಗಳು ಸೃಷ್ಟಿಸುವ ಅನಿವಾರ್ಯದ ಮೂಲಕ ಅಲ್ಲ. ಪುರುಷ ಹಾಗೂ ಮಹಿಳೆಯ ನಡುವಿನ ಸಂಬಂಧಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರುತಿಸದೇ ಇರುವುದು ಈ ಕಾನೂನಿನ ವೈಫಲ್ಯ. ಮದುವೆಗೆ ಮುನ್ನ ಸಂಬಂಧ ಹಳಸಿದರೆ, ಪುರುಷನು ತನ್ನನ್ನು ವಂಚಿಸಿದ್ದಾನೆ ಎಂದು ಆರೋಪಿಸಿ ಆತನನ್ನು ಜೈಲಿಗೆ ಅಟ್ಟಲು ಈ ಕಾನೂನು ಅವಕಾಶ ಕಲ್ಪಿಸುತ್ತದೆ. ಈ ಅಂಶವು ದುರ್ಬಳಕೆ ಆಗಬಹುದು, ಶಿಕ್ಷೆಯು ನ್ಯಾಯಬದ್ಧವಾಗಿ ಆಗದೇ ಇರಬಹುದು. ತಮ್ಮಿಬ್ಬರಿಗೂ ಅನುಕೂಲ ಅಲ್ಲದಿದ್ದರೆ, ಕಾನೂನಿನ ಅಥವಾ ಶಿಕ್ಷೆಯ ಭೀತಿಗೆ ಒಳಗಾಗದೆ, ಸಂಬಂಧದಿಂದ ಹೊರನಡೆಯುವ ಅವಕಾಶವು ಮಹಿಳೆಗೂ ಪುರುಷನಿಗೂ ಇರಬೇಕು. ಹೊಸ ಕಾನೂನು ನಾಗರಿಕ ಹಕ್ಕುಗಳನ್ನು ರಕ್ಷಿಸುವಂತೆ ಇರಬೇಕು, ಆಧುನಿಕ ಸಮಾಜದ ರೀತಿ ರಿವಾಜುಗಳಿಗೆ ಸ್ಪಂದಿಸುವಂತೆಯೂ ಇರಬೇಕು. ನ್ಯಾಯ ಹಾಗೂ ಸಮಾನತೆಯ ತತ್ವಗಳನ್ನು ಕಾನೂನು ಎತ್ತಿಹಿಡಿಯುವ ಕೆಲಸ ಮಾಡಬೇಕು. ಕಾನೂನಿಗೆ ಆ ರೀತಿಯಲ್ಲಿ ಬದಲಾವಣೆ ತರಬೇಕು. ಆಗಮಾತ್ರ, ಪ್ರಜೆಗಳಿಗೆ ನ್ಯಾಯಸಮ್ಮತವಾದ ಬಗೆಯಲ್ಲಿ ಕಾನೂನು ನೆರವಿಗೆ ಬರಬಹುದು.

ದಿನದ ಟ್ವೀಟ್

ಪ್ರದರ್ಶನ ಏಕೆ?

ಅಂಬಾನಿ ಅವರದ್ದು ಭಾರತದ ಅತ್ಯಂತ ಶ್ರೀಮಂತ ಕುಟುಂಬ. ಇದು ನಮಗೆಲ್ಲರಿಗೂ ಗೊತ್ತಿದೆ. ಅವರು ತಮ್ಮ ಸಂಪತ್ತನ್ನು ಮತ್ತೆ ಮತ್ತೆ ಏಕೆ ಪ್ರದರ್ಶಿಸುತ್ತ ಇರಬೇಕು?

(ಅನಂತ್ ಅಂಬಾನಿ, ರಾಧಿಕಾ ಮರ್ಚೆಂಟ್ ವಿವಾಹದ ಕುರಿತು)

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ

ರಾಜಭವನದ ಹೆಸರು ಕೆಡಿಸಿದ್ದಕ್ಕೆ ಕೋಲ್ಕತ್ತದ ಹಿರಿಯ ಪೊಲೀಸ್ ಅಧಿಕಾರಿಗಳ (ಸಿಪಿ ಮತ್ತು ಡಿಸಿಪಿ) ವಿರುದ್ಧ ಶಿಸ್ತುಕ್ರಮಕ್ಕೆ ಕೇಂದ್ರ ಗೃಹ ಸಚಿವಾಲಯ ಮುಂದಾಗಿರುವುದು ಹಾಸ್ಯಾಸ್ಪದ. ರಾಜಭವನದ ಆವರಣದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವ ಮೂಲಕ ಬಂಗಾಳದ ರಾಜ್ಯಪಾಲರೇ ತಮ್ಮ ಕಚೇರಿಯ ಹೆಸರು ಕೆಡಿಸಿಕೊಂಡಿದ್ದಾರೆ. ನಿಮ್ಮ ರಾಜ್ಯಪಾಲರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಿ. ಏಕೆಂದರೆ ಅವರಿಗೆ ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಲು ಆಗುವಂತೆ ಕಾಣುತ್ತಿಲ್ಲ!

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಗುರುವಾರ, 8-7-1999

- **ಪಾಕಿಸ್ತಾನದ ಜತೆ ರಾಜಿ ಪ್ರಶ್ನೆಯೇ ಇಲ್ಲ: ಪ್ರಧಾನಿ**

ನವದೆಹಲಿ, ಜುಲೈ 7 (ಪಿಟಿಐ)– ಕಾರ್ಗಿಲ್‌ನಲ್ಲಿ ಅತಿಕ್ರಮಣಕಾರರ ವಿರುದ್ಧ ನಡೆಸುತ್ತಿರುವ ಸೇನಾ ಕಾರ್ಯಾಚರಣೆ ವಿಷಯದಲ್ಲಿ ಪಾಕಿಸ್ತಾನದ ಜತೆ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ವಾಸ್ತವ ನಿಯಂತ್ರಣ ರೇಖೆಯನ್ನು ಗೌರವಿಸಿ ಅತಿಕ್ರಮಣಕಾರರನ್ನು ವಾಪಸು ಪಡೆಯುವುದಾಗಿ ಪಾಕಿಸ್ತಾನ ನೀಡಿರುವ ವಾಗ್ದಾನದ ಫಲಿತಾಂಶವನ್ನು ಭಾರತ ಎದುರು ನೋಡುತ್ತಿದೆ. ಆದಾಗ್ಯೂ ಅತಿಕ್ರಮಣಕಾರರ ವಿರುದ್ಧದ ಕಾರ್ಯಾಚರಣೆ ಸ್ಥಗಿತಗೊಳಿಸುವುದಿಲ್ಲ ಎಂದು ಅವರು ಮುಖ್ಯಮಂತ್ರಿಗಳ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

- **ಪ್ರಾಥಮಿಕ ಶಾಲಾ ಶಿಕ್ಷಕರ ಮುಷ್ಕರ ಅಂತ್ಯ**

ಬೆಂಗಳೂರು, ಜುಲೈ 7– ವೇತನ ತಾರತಮ್ಯ ನಿವಾರಣೆ ಹಾಗೂ ಐದನೇ ವೇತನದ ಆಯೋಗದ ಶಿಫಾರಸುಗಳ ಜಾರಿಗೆ ಆಗ್ರಹಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರು ಕಳೆದ 10 ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 8-7-1974

- **ಜನಜಾಗೃತಿಗಾಗಿ ಸತ್ಯಾಗ್ರಹಿಗಳ ತಂಡ ರಚಿಸಲು ಪಿ.ಸಿ. ಸೇನ್ ಕರೆ**

ಬೆಂಗಳೂರು, ಜುಲೈ 7– ಭ್ರಷ್ಟಾಚಾರ ಹಾಗೂ ಅಕ್ರಮ ಸರ್ಕಾರಗಳ ವಿರುದ್ಧ ಜನತೆಯನ್ನು ಜಾಗೃತಗೊಳಿಸಿ ಸಾಮೂಹಿಕ ಹೋರಾಟ ನಡೆಸಲು ಸತ್ಯಾಗ್ರಹಿಗಳ ತಂಡಗಳನ್ನು ತಯಾರು ಮಾಡಬೇಕೆಂದು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಶ್ರೀ ಪಿ.ಸಿ. ಸೇನ್ ಅವರು ಇಂದು ಇಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಕಾರ್ಯಕರ್ತರಿಗೆ ಕರೆ ನೀಡಿದರು.

ಇಂದು ದೇಶದಲ್ಲಿ ಎಲ್ಲಿ ನೋಡಿದರೂ ಅಶಾಂತಿ, ಅನ್ಯಾಯ, ಭ್ರಷ್ಟಾಚಾರ, ಆರ್ಥಿಕ ಬಿಕ್ಕಟ್ಟು, ಆಹಾರ ಧಾನ್ಯ ಅಭಾವವೇ ತಾಂಡವ ವಾಡುತ್ತಿದೆ ಎಂದೂ, ಆ ಪರಿಸ್ಥಿತಿಯಿಂದ ದೇಶವನ್ನು ರಕ್ಷಿಸಲು ಗಾಂಧಿ ತತ್ವಗಳಲ್ಲಿ ನಂಬಿಕೆ, ಶ್ರದ್ಧೆ ಹೊಂದಿರುವ ಜನರ ಅಗತ್ಯ ಬಹಳವಾಗಿದೆ ಎಂದೂ ಅವರು ನುಡಿದರು.

- **ಮುಷ್ಕರಗಳ ಸರಣಿ: ಫರ್ನಾಂಡಿಸ್ ಬೆದರಿಕೆ**

ನವದೆಹಲಿ, ಜುಲೈ 7– ಹೆಚ್ಚುವರಿ ವೇತನ ಮತ್ತು ತುಟ್ಟಿಭತ್ಯೆಯನ್ನು ಕಡ್ಡಾಯವಾಗಿ ಠೇವಣಿಯಲ್ಲಿಡಬೇಕೆಂಬ ಸರ್ಕಾರದ ಸುಗ್ರೀವಾಜ್ಞೆ ವಿರುದ್ಧ ಹೋರಾಡಲು ಮುಷ್ಕರಗಳ ಸರಣಿ ಪ್ರಾರಂಭವಾಗುವುದೆಂದು ಅಖಿಲ ಭಾರತ ರೈಲ್ವೆ ನೌಕರರ ಫೆಡರೇಷನ್ ಅಧ್ಯಕ್ಷ ಜಾರ್ಜ್ ಫರ್ನಾಂಡಿಸ್ ಅವರು ಇಂದು ಇಲ್ಲಿ ತಿಳಿಸಿದರು.

ರೈಲ್ವೆ ನೌಕರರ ಸಮಸ್ಯೆಗಳನ್ನು ಚರ್ಚಿಸಲು ಈ ತಿಂಗಳ 20 ಮತ್ತು 21ರಂದು ಇಲ್ಲಿ ನಡೆಯಲಿರುವ ಕಾರ್ಮಿಕ ಸಂಘಟನೆಗಳ ಸಭೆ ಸುಗ್ರೀವಾಜ್ಞೆ ವಿರೋಧಿಸಲು ಮಾರ್ಗಗಳನ್ನೂ ಪರಿಶೀಲಿಸುವುದೆಂದು ಹೇಳಿದರು.

ಮನೆ, ಕಚೇರಿ, ಕಾರ್ಖಾನೆಗಳ ಒಳಗಿನ ಮಾಲಿನ್ಯದ ನಿವಾರಣೆಗೆ ಗಮನಹರಿಸಬೇಕಿದೆ

ಒಳಾಂಗಣ ಮಾಲಿನ್ಯ ತಡೆಯುವುದೆಂತು?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮೂರು ವರ್ಷಗಳ ಹಿಂದಿನ ಮಾತು. ಕೋವಿಡ್ ಪಿಡುಗು ಅಟ್ಟಹಾಸ ಮೆರೆದಿದ್ದ ದಿನಗಳು ಅವು. ಜನರ ಜೀವ ಕಾಪಾಡಲು, ಒಬ್ಬರಿಂದ ಒಬ್ಬರಿಗೆ ಸೋಂಕು ಹರಡದಂತೆ ನೋಡಿಕೊಳ್ಳಲು ಲಾಕ್‌ಡೌನ್ ಘೋಷಿಸಿ ಜನರನ್ನು ಮನೆಯೊಳಗೆ ಇರುವಂತೆ ಮಾಡಲಾಗಿತ್ತು. ರಸ್ತೆಗಿಳಿಯುವ ವಾಹನಗಳ ಸಂಖ್ಯೆ ಕುಸಿದಿತ್ತು. ಮೂರು ಪಾಳಿಗಳಲ್ಲಿ ಕೆಲಸ ನಡೆಸುತ್ತಿದ್ದ ಕಾರ್ಖಾನೆಗಳಲ್ಲಿ ಮೌನ ಮನೆ ಮಾಡಿತ್ತು. ಜನ, ಜಾನುವಾರು ಮತ್ತು ವಾಹನಗಳು ರಸ್ತೆಗೆ ಇಳಿಯದೆ ವಾತಾವರಣದ ಮಾಲಿನ್ಯ ಕಡಿಮೆಯಾಗಿದೆ ಎಂಬ ವರದಿಗಳಿದ್ದವು. ಆದರೆ ಅಮೆರಿಕದ ಸರ್ಕಾರೇತರ ಸಂಸ್ಥೆ ಹೆಲ್ತ್ ಎಫೆಕ್ಟ್ಸ್ ಇನ್‌ಸ್ಟಿಟ್ಯೂಟ್‌ನ ಅಧ್ಯಯನದ ಪ್ರಕಾರ 2021ರಲ್ಲಿ ವಿಶ್ವದಾದ್ಯಂತ ವಾಯುಮಾಲಿನ್ಯದಿಂದ 81 ಲಕ್ಷ ಜನ ಜೀವ ಕಳೆದುಕೊಂಡಿದ್ದಾರೆ!

ಮಲಿನಗೊಂಡ ಗಾಳಿಯ ಸೇವನೆಯಿಂದ ಚೀನಾದಲ್ಲಿ ಆ ವರ್ಷ ಒಟ್ಟು 23 ಲಕ್ಷ ಜನ ಜೀವ ಕಳೆದುಕೊಂಡಿದ್ದರೆ, ನಮ್ಮಲ್ಲಿ ಆ ಸಂಖ್ಯೆ 21 ಲಕ್ಷ. ಸುಮಾರು 5 ಲಕ್ಷ ಎಳೆಯರ ಪ್ರಾಣಹಾನಿ ಮನೆಯೊಳಗಿನ ಗಾಳಿಯ ಮಾಲಿನ್ಯದಿಂದಲೇ ಆಗಿರುವುದು ಆತಂಕಕಾರಿ ವಿಷಯ. ಅದರಲ್ಲೂ ದಕ್ಷಿಣ ಏಷ್ಯಾ ಮತ್ತು ಆಫ್ರಿಕಾದಲ್ಲಿ ಮನೆಯ ಹೊರಗಿನ ಮತ್ತು ಒಳಗಿನ ವಾಯುಮಾಲಿನ್ಯದಿಂದ ದೊಡ್ಡ ಸಂಖ್ಯೆಯ ಸಾವುಗಳು ಸಂಭವಿಸಿವೆ ಎಂಬ ಮಾಹಿತಿ ಇದೆ. ನೈಜೀರಿಯಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ ನಮ್ಮ ನಂತರದ ಸ್ಥಾನಗಳಲ್ಲಿವೆ.

ನಾವೆಲ್ಲ ಮನೆಯ ಹೊರಗಿನ, ಸಾರ್ವಜನಿಕ ಸ್ಥಳಗಳ ಮಾಲಿನ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತೇವೆ. ಆದರೆ ವಾಸಿಸುವ ಮನೆ, ಕೆಲಸ ಮಾಡುವ ಕಚೇರಿ, ದುಡಿಯುವ ಕಾರ್ಖಾನೆಗಳಲ್ಲಿನ ಮಾಲಿನ್ಯದ ಬಗ್ಗೆ ಗಮನ ಕೊಡುವುದು ಕಡಿಮೆ. ಮನೆಗಳಲ್ಲಿ ಅಡುಗೆ ಮಾಡಲು ಬಳಸುವ ಮಾಲಿನ್ಯಕಾರಕ ಇಂಧನಗಳು, ತಂಬಾಕು ಸೇವನೆ, ಕೀಟನಾಶಕ ಬಳಕೆ, ಸ್ಪ್ರೇ ಡಬ್ಬಿಗಳಿಂದ ಹೊಮ್ಮುವ ದ್ರವ್ಯಗಳು, ಕಟ್ಟಡ ನಿರ್ಮಾಣ ಸಾಮಗ್ರಿಗಳು, ಪೇಂಟ್, ಪೀಠೋಪಕರಣಗಳ ಪಾಲಿಶಿಂಗ್‌ಗೆ ಬಳಸುವ ತೈಲ, ನೆಲ ಒರೆಸಲು ಮತ್ತು ಶೌಚಾಲಯ ತೊಳೆಯಲು ಬಳಸುವ ಆ್ಯಸಿಡ್ ಮತ್ತು ಸ್ವಚ್ಛತಾ ಸಾಮಗ್ರಿಗಳು, ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆಯಿಂದ ಹೊಮ್ಮುವ ಹಾನಿಕಾರಕ ಶಾಖವರ್ಧಕ ಅನಿಲಗಳು, ನಾವು ಬಳಸುವ ಸುಗಂಧದ್ರವ್ಯ, ಕ್ರೀಮು, ಪೌಡರ್, ದೈಹಿಕ ನೋವಿನ ಉಪಶಮನಕ್ಕೆ ಬಳಸುವ ಸ್ಪ್ರೇಗಳು, ಸಾಕುಪ್ರಾಣಿಗಳಾದ ಬೆಕ್ಕು, ನಾಯಿ, ಗಿಳಿ ಮತ್ತು ಪಾರಿವಾಳಗಳ ದೇಹದಿಂದ ಉದುರುವ ಸೂಕ್ಷ್ಮ ಕೂದಲು, ಹೊಟ್ಟು ಮತ್ತು ಕೀಟಗಳು ಒಳಾಂಗಣ ಮಾಲಿನ್ಯಕ್ಕೆ ಕಾರಣ ಎಂಬುದು ಅಧ್ಯಯನದಿಂದ ದೃಢಪಟ್ಟಿದೆ.

ಮನೆಗಳಲ್ಲಿ ಊದುಬತ್ತಿ ಉರಿಸುವುದರಿಂದ ಅದರಲ್ಲಿ ಬಳಸಲಾದ ಸಾವಯವ ರೆಸಿನ್‌ಗಳು ಉರಿದು ಬೆಂಜೀನ್, ಟಾಲೀನ್, ಫಾರ್ಮಾಲ್ಡಿಹೈಡ್, ಇಂಗಾಲದ ಡೈಆಕ್ಸೈಡ್, ಸಲ್ಫರ್ ಡೈಆಕ್ಸೈಡ್ ಬಿಡುಗಡೆಯಾಗುತ್ತವೆ. ಊದಿನಕಡ್ಡಿಯ ಹೊಗೆಯ ತೀವ್ರತೆಯು ಸಿಗರೇಟಿನ ಹೊಗೆಗಿಂತ ಐದು ಪಟ್ಟು ಹೆಚ್ಚಾಗಿರುತ್ತದೆ. ಅಡುಗೆ ಬೇಯಿಸಲು ಬಳಸುವ ಕಟ್ಟಿಗೆ, ಇದ್ದಿಲು, ಬೆಳೆ ತ್ಯಾಜ್ಯ, ಸೀಮೆಎಣ್ಣೆ, ದನಗಳ ಸಗಣಿಯಿಂದ ಮಾಡಿದ ಕುರುಳು, ಹಸಿ ಸೌದೆಗಳು ಉರಿಯುವಾಗ ಎಬ್ಬಿಸುವ ಹೊಗೆಯೊಂದಿಗೆ ಬಿಡುಗಡೆಯಾಗುವ ವಿಷಕಾರಿ ತೇಲುಕಣಗಳು, ಕಾರ್ಬನ್ ಮಾನಾಕ್ಸೈಡ್ ಅನಿಲಗಳು ಮನೆಯೊಳಗಿನ ಮಾಲಿನ್ಯವನ್ನು ಹೆಚ್ಚಿಸುತ್ತವೆ. ಅಡುಗೆ ಅನಿಲ ಉರಿದಾಗ ಬಿಡುಗಡೆಯಾಗುವ ಕಾರ್ಬನ್ ಮಾನಾಕ್ಸೈಡ್ ಮತ್ತು ಫಾರ್ಮಾಲ್ಡಿಹೈಡ್ ರಾಸಾಯನಿಕಗಳು ಮನುಷ್ಯನ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಅಡ್ಡ ಪರಿಣಾಮಗಳನ್ನು ಉಂಟುಮಾಡುತ್ತವೆ. ಅಡುಗೆಎಣ್ಣೆ ಮತ್ತು ಕೊಬ್ಬಿನ ಪದಾರ್ಥಗಳನ್ನು ಅಧಿಕ ಉಷ್ಣಾಂಶದಲ್ಲಿ ಕುದಿಸಿದಾಗ ಮಾಲಿನ್ಯಕಾರಕ ಅನಿಲಗಳು ಬಿಡುಗಡೆಯಾಗುತ್ತವೆ. ಸ್ವಯಂ ಶುದ್ಧೀಕರಣ ತಂತ್ರಜ್ಞಾನದ ಅವೆನ್‌ಗಳು ಆಹಾರವನ್ನು ಸುಡುವುದರಿಂದ ಮತ್ತಷ್ಟು ವಿಷಕಾರಿ ಅನಿಲಗಳು ಒಳಾಂಗಣ ಗಾಳಿಯಲ್ಲಿ ಸೇರಿಕೊಳ್ಳುತ್ತವೆ. ಎಳೆಯ ಮಕ್ಕಳು ಮತ್ತು ಅಸ್ತಮಾ ಕಾಯಿಲೆಯಿಂದ ಬಳಲುವವರಿಗೆ ಹೆಚ್ಚಿನ ತೊಂದರೆಯಾಗುತ್ತದೆ.

ಸಂಭವಿಸಿರುವ ಒಟ್ಟು ಶಿಶುಮರಣಗಳಲ್ಲಿ ನಮ್ಮ ದೇಶದ 2.37 ಲಕ್ಷ ಶಿಶುಗಳು ಓಜೋನ್ ಮಾಲಿನ್ಯ ಸಂಬಂಧಿತ ಕ್ರಾನಿಕ್ ಅಬ್‌ಸ್ಟ್ರಕ್ಟಿವ್ ಪಲ್ಮನರಿ ಡಿಸಾರ್ಡರ್‌ನಿಂದ (ದೀರ್ಘಾವಧಿಯ ಶ್ವಾಸನಾಳಗಳ ಸಮಸ್ಯೆ) ಅಸುನೀಗಿರುವುದು ಪತ್ತೆಯಾಗಿದೆ. ತಂಬಾಕಿನ ಹೊಗೆಯು ಅಪಾರ ರಾಸಾಯನಿಕ ವಸ್ತುಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಕೆಲವು ರಾಸಾಯನಿಕಗಳು ಕ್ಯಾನ್ಸರ್ ರೋಗ ಜನಕಗಳಾಗಿವೆ. ನೇರವಾಗಿ ತಂಬಾಕು ಸೇವಿಸುವವರಷ್ಟೇ ಅಲ್ಲ, ಒಬ್ಬರು ಬಿಡುವ ಹೊಗೆಯನ್ನು ಉಸಿರಾಡುವ ಇತರರಿಗೂ ಶ್ವಾಸಕೋಶದ ಕ್ಯಾನ್ಸರ್ ತಗುಲಿರುವ ಸಾವಿರಾರು ಪ್ರಕರಣಗಳು ವರದಿಯಾಗಿವೆ. ಡೀಸೆಲ್ ಕಾರಿನ ಹೊಗೆಗಿಂತ ಹತ್ತು ಪಟ್ಟು ಹೆಚ್ಚಿನ ಮಾಲಿನ್ಯ ತಂಬಾಕಿನ ಹೊಗೆಯಿಂದ ಆಗುತ್ತದೆ. ನಾವು ತೊಡುವ ಹತ್ತಿ ಹಾಗೂ ಜೀನ್ಸ್ ಉಡುಪುಗಳು ಸುಕ್ಕುಗಟ್ಟುವುದನ್ನು ಮತ್ತು ಕಲೆಗಳಾಗದಂತೆ ತಡೆಯಲು ಬಳಕೆಯಾಗುವ ಫಾರ್ಮಾಲ್ಡಿಹೈಡ್ ರಾಸಾಯನಿಕವು ಆವಿಯಾಗುವ ಸಂಯುಕ್ತವಾಗಿದ್ದು ಗಾಳಿಯಲ್ಲಿ ಇದರ ಪ್ರಮಾಣವು 50 ಪಿಎಂ ದಾಟಿದರೆ ಮನುಷ್ಯನಿಗೆ ಪ್ರಾಣಾಪಾಯ ಎದುರಾಗುತ್ತದೆ.

ವಿಶ್ವದ 200 ಕೋಟಿ ಜನರಿಗೆ ಅಡುಗೆ ಮಾಡಲು ಶುದ್ಧ ಇಂಧನ ಮೂಲದ ಸೌಕರ್ಯ ಈಗಲೂ ಇಲ್ಲ. ಪರಿಸ್ಥಿತಿ ಸುಧಾರಿಸಲು ವಿಶ್ವದಲ್ಲಿ ಬಲವಾದ ನೀತಿ ಇಲ್ಲದಿರುವುದರಿಂದ 2030ರವರೆಗೆ ಇದೇ ಸ್ಥಿತಿ ಮುಂದುವರಿಯಲಿದೆ. 140 ಕೋಟಿಗೂ ಅಧಿಕ ಜನಸಂಖ್ಯೆಯುಳ್ಳ ಭಾರತ ಮತ್ತು ಚೀನಾದಲ್ಲಿ ವರ್ಷದಿಂದ ವರ್ಷಕ್ಕೆ ವಾಯುಮಾಲಿನ್ಯದಿಂದಾಗಿ ಸಾವನ್ನಪ್ಪುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಗಾಳಿಯಲ್ಲಿರುವ ತೇಲುಕಣಗಳಿಂದ ಮತ್ತು ನೆಲಮಟ್ಟದ ಓಜೋನ್‌ನಿಂದಾಗಿ ಸರಿಸುಮಾರು ಒಂದು ಕೋಟಿ ಜನ ಪ್ರಾಣ ಕಳೆದುಕೊಂಡಿದ್ದಾರೆ.

2.5 ಮೈಕ್ರೊಮೀಟರ್‌ಗಿಂತ ಕಡಿಮೆ ವ್ಯಾಸದ ತೇಲುಕಣಗಳನ್ನು ಪಿಎಂ 2.5 (ಪಾರ್ಟ್ಸ್ ಪರ್ ಮಿಲಿಯನ್ ಅಂದರೆ 10 ಲಕ್ಷದಲ್ಲಿ 2.5) ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಇವು ನಮ್ಮ ಉಸಿರಾಟದ ಮೂಲಕ ಶ್ವಾಸಕೋಶವನ್ನು ಸೇರಿಕೊಂಡು ನಂತರ ರಕ್ತಕ್ಕೂ ಪ್ರವೇಶ ಪಡೆದು ಆರೋಗ್ಯವನ್ನು ಕೆಡಿಸುತ್ತವೆ. ಹೃದಯದ ತೊಂದರೆ, ಪಾರ್ಶ್ವವಾಯು, ಸಕ್ಕರೆ ಕಾಯಿಲೆ, ಶ್ವಾಸಕೋಶದ ಕ್ಯಾನ್ಸರ್ ಮತ್ತು ಕ್ರಾನಿಕ್ ಅಬ್‌ಸ್ಟ್ರಕ್ಟಿವ್ ಪಲ್ಮನರಿ ಡಿಸಾರ್ಡರ್ ಕಾಯಿಲೆಯನ್ನು ಉಂಟುಮಾಡುತ್ತವೆ. ಉಸಿರಾಡುವ ಗಾಳಿಯಲ್ಲಿ 2.5 ಪಿಎಂ ಕಣಗಳ ಸಾಂದ್ರತೆ ಎಷ್ಟಿದೆ ಎಂಬುದರ ಆಧಾರದ ಮೇಲೆ ಅಲ್ಲಿನ ಜನರ ಆರೋಗ್ಯ ಹೇಗಿರುತ್ತದೆ ಎಂಬುದನ್ನು ನಿರ್ಧರಿಸಬಹುದಾಗಿದೆ.

ಒಳಾಂಗಣ ಮಾಲಿನ್ಯ ನಿಯಂತ್ರಿಸಲು ಸರಿಯಾದ ವಾತಾನುಕೂಲ ವ್ಯವಸ್ಥೆ ಇರಬೇಕು. ಹೊರಗಿನ ಗಾಳಿಯು ಒಳಗೆ ಬರಲು ವಿಶಾಲ ಕಿಟಕಿಗಳು ಇರಬೇಕು. ಮಾಲಿನ್ಯಕಾರಕ ತೇಲುಕಣಗಳನ್ನು ಹಿಡಿದಿಡಲು ಹೆಚ್ಚಿನ ಸಾಮರ್ಥ್ಯದ ವಾಯು ಶುದ್ಧೀಕರಣ ಯಂತ್ರಗಳನ್ನು (HEPA) ಬಳಸಬೇಕು. ನೆಲ ಒರೆಸಲು, ಬಚ್ಚಲು ತೊಳೆಯಲು, ಕಮೋಡ್‌ಗಳನ್ನು ಶುದ್ಧ ಮಾಡಲು ಬಿಳಿ ವಿನೆಗರ್, ಬೇಕಿಂಗ್ ಸೋಡಾ, ಕಿತ್ತಲೆ, ನಿಂಬೆರಸ, ಬೋರಾಕ್ಸ್ ಸಂಯುಕ್ತಗಳನ್ನು ಬಳಸಿದರೆ ಒಳಾಂಗಣ ಮಾಲಿನ್ಯ ತನ್ನಿಂತಾನೆ ಕಡಿಮೆಯಾಗುತ್ತದೆ. ಒಳಾಂಗಣದ ಅಲಂಕಾರಿಕ ಗಿಡಗಳಾದ ಇಂಗ್ಲಿಷ್ ಐವಿ, ಬಿದಿರು ಪಾಮ್, ಪೋಥೋಸ್ (ಮನಿ ಪ್ಲಾಂಟ್) ಒಳಾಂಗಣ ಮಾಲಿನ್ಯವನ್ನು ತಕ್ಕಮಟ್ಟಿಗೆ ತಡೆಯುತ್ತವೆ.

ಕೋವಿಡ್ ಪಿಡುಗಿನ ಕಾಲದಲ್ಲಿ ಮನೆಯ ಹೊರಗಿನ ಗಾಳಿಯ ಗುಣಮಟ್ಟ ಸರಿಯಾಗಿತ್ತು. ಹಾಗಾದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸಾವು ಸಂಭವಿಸಿದ್ದಾದರೂ ಹೇಗೆ ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಯುನಿಸೆಫ್ ಜೊತೆ ಕೈಜೋಡಿಸಿ ಸಂಶೋಧನೆ ನಡೆಸುತ್ತಿರುವ ಹೆಲ್ತ್ ಎಫೆಕ್ಟ್ಸ್ ಇನ್‌ಸ್ಟಿಟ್ಯೂಟ್ ನೀಡಿರುವ ಅಂಕಿ ಅಂಶಗಳು ನಮ್ಮ ದೇಶದಲ್ಲಿ ಐದು ವರ್ಷದೊಳಗಿನ ಲಕ್ಷಗಟ್ಟಲೆ ಮಕ್ಕಳು ಒಳಾಂಗಣ ವಾಯುಮಾಲಿನ್ಯಕ್ಕೆ ಬಲಿಯಾಗಿರುವುದನ್ನು ದೃಢಪಡಿಸಿದ್ದು, ವಾತಾವರಣದ ಗಾಳಿಯ ಗುಣಮಟ್ಟವನ್ನು ವೃದ್ಧಿಸದಿದ್ದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ ಎಂಬ ಎಚ್ಚರಿಕೆಯನ್ನು ನೀಡಿದೆ. ವರದಿಯ ಅಂಶಗಳನ್ನು ಪರಿಗಣಿಸಿಯಾದರೂ ಸರ್ಕಾರಗಳು ಸೂಕ್ತಕ್ರಮ ಕೈಗೊಂಡಲ್ಲಿ ವಾಯುಗುಣಮಟ್ಟವನ್ನು ವೃದ್ಧಿಸಬಹುದು. ವಾಯುಮಾಲಿನ್ಯದಿಂದಾಗಿ ವರ್ಷವೊಂದರಲ್ಲಿ ಅತಿ ಹೆಚ್ಚು ಶಿಶುಮರಣ ಕಂಡಿರುವ ನಾವು ಇನ್ನಾದರೂ ಪಾಠ ಕಲಿಯಬೇಕಿದೆ.

ಚುರುಮುರಿ

ಕಪ್ ನಮ್ದೂ ಹೌದು!

• ಸುಮಂಗಲಾ

ಬೆಕ್ಕಣ್ಣ ಸುದ್ದಿ ಓದುತ್ತ ಲೊಚ್ ಲೊಚ್ ಎನ್ನುತ್ತಿತ್ತು.

‘ಛೆ… ಪಾಪ… ನಮ್ ಮೂರ್ತಿ ಅಜ್ಜಾರ ಅಳಿಯ ರಿಷಿ ಅಂಕಲ್ಲು ಈ ಸಲ ಬ್ರಿಟನ್ ಪ್ರಧಾನಿ ಆಗೂದು ತಪ್ಪಿಹೋತು’ ಎಂದು ಮತ್ತೆ ಲೊಚ್ ಅಂದಿತು.

‘ಹೋಗ್ಲಿಬಿಡು… ಅಬ್ ಕಿ ಬಾರ್ ಚಾರ್ ಸೌ ಪಾರ್ ಅನ್ನೋ ಘೋಷಣೆ ಬ್ರಿಟನ್ನಿನಲ್ಲಿ ನಿಜ ಆಗ್ಯೈತಿ. ಲೇಬರ್ ಪಾರ್ಟಿಗೆ ನಾನೂರಕ್ಕಿಂತ ಹೆಚ್ಚು ಸೀಟು ಸಿಕ್ಕಾವಂತ’ ಎಂದೆ.

‘ಇಲ್ಲಿಂದ ಬೇಕಿದ್ರೆ ಆಪರೇಷನ್ ತಜ್ಞರನ್ನ ಕಳಿಸತಿದ್ದೆವು. ರಿಷಿ ಅಂಕಲ್ಲು ನಮ್ ಯೆಡ್ಯೂರಜ್ಜಾರು, ಕುಮಾರಣ್ಣನ ಕನ್ಸಲ್ಟನ್ಸಿ ಸರ್ವಿಸ್ ತಗೋಬೇಕಿತ್ತು. ಇವ್ರು ಆಪರೇಷನ್, ಮೈತ್ರಿ, ಹಿಂಗೆ ಏನರೆ ಮಾಡಿ ಅಂವನೇ ಪ್ರಧಾನಿ ಆಗೂ ಹಂಗ ಮಾಡತಿದ್ದರು’ ಬೆಕ್ಕಣ್ಣ ಕೈಕೈ ಹಿಸುಕಿಕೊಂಡಿತು.

‘ಇಲ್ಲಿ ಮಾಡಿದಂಗೆ ಅಲ್ಲಿ ಯರ್ರಾಬಿರ್ರಿ ಆಪರೇಷನ್ ಎಲ್ಲ ಮಾಡೂ ಹಂಗಿಲ್ಲ. ಎಲ್ಲದಕ್ಕೂ ಭಯಂಕರ ಪ್ರೊಸೀಜರು ಇರತಾವು’ ಎಂದೆ.

‘ಬಿಡು, ಏನಿದ್ದರೇನು… ನಮ್ಮವರು ರಂಗೋಲಿ ಕೆಳಗೆ ನುಸುಳೋ ಚಾಣಾಕ್ಷರು!’

‘ಅಲ್ಲಲೇ… ಇಲ್ಲಿ ಮಾತುಮಾತಿಗೆ ರಾಹುಲಂಕಲ್ಲಿಗೆ ಇಟಲಿಗೆ ವಾಪಸು ಹೋಗಪ್ಪ ಅಂತಾರಲ್ಲ… ಅಲ್ಲಿ ರಿಷಿದು ಐತಿಹಾಸಿಕ ಸೋಲಾದ್ರೂ ಇಂಡಿಯಾಕ್ಕೆ ವಾಪಸು ಹೋಗು ಅಂತ ಚುಚ್ಚಂಗಿಲ್ಲ… ಅವನ ಪಕ್ಷ ಸೋತ್ರೂ ಅಂವಾ ನಮ್ಮವನೇ ಅಂತ ಒಪ್ಪಿಕೊಂಡಾರೆ’.

‘ಒಂದು ತಿಳಕೋ… ನಮ್ಮವರು ಬ್ಯಾರೆ ದೇಶಕ್ಕೆ ಹೋಗಿ ನೆಲೆಸಿದ್ರೆ, ಇಲ್ಲಿಯವರು, ಅಲ್ಲಿಯವರು ಎರಡೂ ಆಗತಾರೆ. ಆದರೆ ಇಟಲಿ ಮೂಲದವರು ಮಾತ್ರ ಯಾವತ್ತಿಗೂ ಹೊರಗಿನವರೇ’.

‘ವಿತಂಡವಾದ ಮಾಡೂದನ್ನು ನಿನ್ನ ಹತ್ರ ಕಲೀಬೇಕು ನೋಡಲೇ’ ಎಂದು ನಾನು ತಲೆ ಚಚ್ಚಿಕೊಂಡೆ.

‘ಸೂರ್ಯ ಮುಳುಗದ ಸಾಮ್ರಾಜ್ಯ ನಮ್ಮದು ಅಂತಿದ್ದರಂತೆ ಬ್ರಿಟಿಷರು. ರಿಷಿ ಅಂಕಲ್ಲು ಪ್ರಧಾನಿ ಆಗದಿದ್ದರೇನಂತೆ… ಈ ಸಲ ಒಟ್ಟು 26 ಮಂದಿ ಭಾರತೀಯ ಮೂಲದವರು ಬ್ರಿಟನ್ ಸಂಸದರು ಆಗ್ಯಾರೆ. ಹಿಂಗಾಗಿ ಕಪ್ ನಮ್ದೂ ಹೌದು!’ ಎಂದು ಬೆಕ್ಕಣ್ಣ ಹಲ್ಲು ಕಿರಿಯಿತು.

ಸಂಗತ

ದುಬಾರಿ ಆಯಿತು ಗಳಿಕೆಯ ಆಸೆ

ಯಶಸ್ಸು ಕಂಡ ನಿದರ್ಶನಗಳನ್ನೇ ಮುನ್ನೆಲೆಗೆ ತಂದು ಹಣ ಹೂಡಿಕೆಗೆ ಪ್ರೇರೇಪಿಸುವ ಕಸರತ್ತು ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ಜಾರಿಯಲ್ಲಿದೆ

• ಎಚ್.ಕೆ. ಶರತ್

ತರಗತಿಗಳಿಗೆ ನಿಯಮಿತವಾಗಿ ಹಾಜರಾಗದೆ ಇದ್ದ ವಿದ್ಯಾರ್ಥಿಯೊಬ್ಬ ಒಂದು ದಿನ ತರಗತಿ ಮುಗಿದ ನಂತರ ನನ್ನ ಬಳಿ ಬಂದು, ‘ನಿಮಗೆ ಒಂದು ವಿಷಯ ಹೇಳಬಹುದಾ ಸರ್’ ಅಂತ ಕೇಳಿದ. ‘ಹೇಳು ಪರ್ವಾಗಿಲ್ಲ’ ಅಂದೆ. ‘ನಂಗೆ ಬೆಳಗ್ಗೆ ಎಂಟೂವರೆಗೆ ಇರೋ ಕ್ಲಾಸ್ ಅಟೆಂಡ್ ಮಾಡೋಕೆ ಆಗ್ತಿಲ್ಲ ಸರ್’ ಎಂದು ತಿಳಿಸಿದ. ‘ಯಾಕೆ? ಏನು ಸಮಸ್ಯೆ?’ ಅಂತ ನಾನು ವಿಚಾರಿಸಿದೆ. ‘ನಾನು ಕೆಲಸಕ್ಕೆ ಹೋಗ್ತಿದ್ದೀನಿ ಸರ್. ಸಂಜೆ ಆರು ಗಂಟೆಗೆ ಕೆಲಸ ಶುರುವಾದ್ರೆ ಮುಗಿಯೋದು ಬೆಳಗ್ಗೆ ಆರಕ್ಕೆ. ರಾತ್ರಿ ಪೂರಾ ನಿದ್ರೆ ಮಾಡಿರಲ್ಲ. ಹೀಗಾಗಿ ಎಂಟೂವರೆಯ ಕ್ಲಾಸಿಗೆ ಬಂದು ಕೂರೋದು ಕಷ್ಟ’ ಎಂದು ಆತ ಹೇಳಿದ.

‘ಮನೆಯಲ್ಲಿನ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಅಂದ್ರೆ ಯಾವುದಾದ್ರೂ ಪಾರ್ಟ್ ಟೈಮ್ ಕೆಲಸಕ್ಕೆ ಹೋಗೋ ಬದಲು ಹನ್ನೆರಡು ಗಂಟೆ ದುಡಿಯಬೇಕಿರೋ ಫ್ಯಾಕ್ಟರಿ ಕೆಲಸಕ್ಕೆ ಯಾಕೆ ಸೇರಿಕೊಂಡೆ’ ಅಂತ ನಾನು ಪ್ರಶ್ನಿಸಿದೆ. ‘ನನಗಿರೋ ಸಾಲ ಮತ್ತು ಖರ್ಚಿಗೆ ಈ ಕೆಲಸ ಮಾಡೋದು ಅನಿವಾರ್ಯ ಸರ್. ತಪ್ಪೆಲ್ಲ ನಂದೇ. ಷೇರ್ ಮಾರ್ಕೆಟ್, ಬೆಟ್ಟಿಂಗ್ ಅಂತ ಬಹಳಷ್ಟು ಹಣ ಕಳೆದೆ. ಸಿಕ್ಕ ಸಿಕ್ಕ ಕಡೆಯಿಂದೆಲ್ಲ ಸಾಲ ಪಡೆದು ಕೊನೆಗೆ ಊರು ಬಿಡೋ ಪರಿಸ್ಥಿತಿ ಬಂತು. ಓದೋದು ಬಿಟ್ಟು ಬೇರೆ ರಾಜ್ಯಕ್ಕೆ ಹೋಗಿ ಅಲ್ಲೇ ಸಣ್ಣ ಪುಟ್ಟ ಕೆಲಸ ಮಾಡ್ಕೊಂಡಿದ್ದೆ. ವಿಷಯ ಗೊತ್ತಾಗಿ ಅಪ್ಪ ನಾನು ಮಾಡಿದ್ದ ಎರಡು ಲಕ್ಷ ರೂಪಾಯಿ ಸಾಲದಲ್ಲಿ ಒಂದೂವರೆ ಲಕ್ಷ ತೀರಿಸಿ, ಇಷ್ಟೇ ನನ್ನಿಂದ ಆಗೋದು, ಇನ್ಮೇಲೆ ನೀನುಂಟು ನಿನ್ನ ಜೀವನ ಉಂಟು. ಏನಾದರೂ ಮಾಡ್ಕೋ ಅಂತ ದೂರ ತಳ್ಳಿದ್ರು. ಇಷ್ಟೆಲ್ಲಾ ಆದ್ಮೇಲೆ ನಂಗೆ ನನ್ನ ತಪ್ಪಿನ ಅರಿವಾಯ್ತು. ಈಗ ಉಳಿದಿರೋ ಸಾಲ ತೀರಿಸೋಕಲ್ದೆ ನನ್ನ ಖರ್ಚಿಗೆ ಬೇಕಿರೋ ಹಣನೂ ನಾನೇ ಹೊಂದಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ಕೆಲಸ ಮಾಡ್ಕೊಂಡೇ ಓದು ಮುಂದುವರೆಸಬೇಕಾದ ಅನಿವಾರ್ಯ ಇದೆ’ ಎಂದು ಅಳಲು ತೋಡಿಕೊಂಡ.

ವಿದ್ಯಾರ್ಥಿಯ ಮಾತು ಕೇಳಿ ಕಸಿವಿಸಿ ಉಂಟಾಯಿತು. ‘ಕಡಿಮೆ ಕೆಲಸದ ಅವಧಿ ಇರುವ ಬೇರೆ ಕೆಲಸ ಮಾಡೋದು ಸೂಕ್ತ ಅನ್ಸುತ್ತೆ. ಯೋಚ್ನೆ ಮಾಡು’ ಅಂತ ಸಲಹೆ ನೀಡಿದೆ. ಐಪಿಎಲ್ ಬೆಟ್ಟಿಂಗ್ ಮತ್ತು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಮೂಲಕ ಕಡಿಮೆ ಅವಧಿಯಲ್ಲಿ ಹಣ ಗಳಿಸಬಹುದು ಎಂದು ಭಾವಿಸಿ, ಕೊನೆಗೆ ಸಾಲದ ಸುಳಿಯಲ್ಲಿ ಸಿಲುಕಿ ಕೆಲವು ವಿದ್ಯಾರ್ಥಿಗಳು ತಮ್ಮ ಬದುಕನ್ನೇ ಅಸಹನೀಯ ಮಾಡಿಕೊಂಡಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವಂತೆ ಪ್ರೇರೇಪಿಸುವ ಜಾಹೀರಾತುಗಳು, ಸಲಹೆ–ಸೂಚನೆ ನೀಡುವ ಮಾರುಕಟ್ಟೆ ತಜ್ಞರ ವಿಡಿಯೊಗಳು ಬೆರಳ ತುದಿಯಲ್ಲಿ ಲಭ್ಯವಿರುವುದರಿಂದ ‘ನಾವೇಕೆ ಒಮ್ಮೆ ಪ್ರಯತ್ನಿಸಿ ನೋಡಬಾರದು’ ಎಂದು ಶುರುವಾಗುವ ಹೂಡಿಕೆ ಹಂತಹಂತವಾಗಿ ಗೀಳಾಗಿ ಪರಿಣಮಿಸುತ್ತದೆ. ಅವರು ಬಹಳಷ್ಟು ಹಣ ಕಳೆದುಕೊಳ್ಳುವುದೂ ಇದೆ.

ಅದರಲ್ಲೂ ತಮ್ಮೊಂದಿಗೆ ಓದುತ್ತಿರುವ ಇತರ ವಿದ್ಯಾರ್ಥಿಗಳ ಪೈಕಿ ಯಾರಾದರೂ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಲಾಭ ಗಳಿಸಿದ ನಿದರ್ಶನ ಕಂಡರೆ, ಅವರಿಂದ ಪ್ರೇರೇಪಿತರಾಗಿ ಇತರರು ಕೂಡ ಹಣ ಹೂಡಲು ಉತ್ಸಾಹ ತೋರುತ್ತಾರೆ. ಷೇರು ಮಾರುಕಟ್ಟೆಯಲ್ಲಿ ಹಣ ಹೂಡುವುದರ ಸಾಧಕ-ಬಾಧಕಗಳ ಕುರಿತು ವಾಸ್ತವಿಕ ನೆಲಗಟ್ಟಿನಲ್ಲಿ ತಿಳಿವಳಿಕೆ ಮೂಡಿಸುವ ಬದಲು, ಯಶಸ್ಸು ಕಂಡ ಕೆಲವು ನಿದರ್ಶನಗಳನ್ನೇ ಮುನ್ನೆಲೆಗೆ ತಂದು ಹಣ ಹೂಡಿಕೆಗೆ ಪ್ರೇರೇಪಿಸುವ ಕಸರತ್ತು ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಇತರ ಕೆಲವೆಡೆಗಳಲ್ಲಿ ಜಾರಿಯಲ್ಲಿದೆ.

ಐಪಿಎಲ್ ಕ್ರಿಕೆಟ್ ಟೂರ್ನಿ ಭಾರಿ ಜನಪ್ರಿಯತೆ ಗಳಿಸಿರುವುದರಿಂದ ಪ್ರತಿ ಋತುವಿನಲ್ಲೂ ಆಟಗಾರರ ಹರಾಜಿನಿಂದ ಹಿಡಿದು, ಯಾರು ಕಪ್ ಗೆಲ್ಲಬಹುದು, ಪ್ರತಿ ತಂಡದ ಸೋಲು-ಗೆಲುವಿಗೆ ಕಾರಣಗಳೇನು ಎನ್ನುವುದರವರೆಗೆ ಎಲ್ಲದರ ಕುರಿತೂ ಚರ್ಚೆ ನಡೆಯುತ್ತದೆ.

ಆದರೆ, ಇಲ್ಲಿ ಚರ್ಚೆಯಾಗದೆ ಇರುವ ಮತ್ತೊಂದು ಪ್ರಮುಖ ಅಂಶ: ‘ಈ ಸೀಸನ್‌ನಲ್ಲಿ ಬೆಟ್ಟಿಂಗ್ ಆಡಿ ಎಷ್ಟು ಜನ ತಮ್ಮ ಬದುಕು ಹಾಳು ಮಾಡಿಕೊಂಡರು’ ಎಂಬುದು. ಬೆಟ್ಟಿಂಗ್ ಚಟಕ್ಕೆ ಸಿಲುಕಿ ಭಾರಿ ಪ್ರಮಾಣದಲ್ಲಿ ಹಣ ಕಳೆದುಕೊಂಡು ಪೇಚಿಗೆ ಸಿಲುಕುವ ವಿದ್ಯಾರ್ಥಿಗಳು ಹಾಗೂ ಯುವ ಜನರನ್ನು ಹತ್ತಿರದಿಂದ ಗಮನಿಸುತ್ತಿರುವ ಯಾರಿಗೇ ಆದರೂ, ಐಪಿಎಲ್ ಟೂರ್ನಿಯನ್ನು ಮನರಂಜಿಸುವ, ಕ್ರೀಡಾ ಸ್ಫೂರ್ತಿ ಬಿತ್ತುವ ಪಂದ್ಯಾವಳಿಯಾಗಿ ಮಾತ್ರ ನೋಡಲು ಸಾಧ್ಯವಿಲ್ಲ.



ಕಡಿಮೆ ಅವಧಿಯಲ್ಲಿ ಸುಲಭವಾಗಿ ಹಣ ಸಂಪಾದಿಸುವ ಉಮೇದಿನೊಂದಿಗೆ ಷೇರು ಮಾರುಕಟ್ಟೆ ವಹಿವಾಟು ಮತ್ತು ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಹಣ ತೊಡಗಿಸುತ್ತಿರುವ ವಿದ್ಯಾರ್ಥಿ ಸಮೂಹವನ್ನು ಎಚ್ಚರಿಸುವ, ಅರಿಯದೆ ಹಣ ತೊಡಗಿಸುವುದರಿಂದ ಹಾಗೂ ಬೆಟ್ಟಿಂಗ್ ಮಾಡುವುದರಿಂದ ಎದುರಾಗಬಹುದಾದ ಅಪಾಯಗಳ ಕುರಿತು ತಿಳಿವಳಿಕೆ ಮೂಡಿಸುವ ದಿಸೆಯಲ್ಲಿ ಸಮಾಜ ಮತ್ತು ಶೈಕ್ಷಣಿಕ ವಲಯ ಚಿಂತಿಸಬೇಕಾದ ಜರೂರತ್ತು ಈಗ ಬಹಳ ಇದೆ. ಹಣ ಕಳೆದುಕೊಂಡು ಹತಾಶೆಗೆ ಜಾರುವವರನ್ನು ತಿರಸ್ಕರಿಸಿ, ದೂರ ತಳ್ಳುವ ಬದಲಿಗೆ ಅವರಲ್ಲಿ ಆತ್ಮವಿಶ್ವಾಸ ಮೂಡಿಸಿ, ಬದುಕನ್ನು ಸರಿಯಾದ ರೀತಿಯಲ್ಲಿ ಮರುರೂಪಿಸಿಕೊಳ್ಳಲು ಅವಕಾಶ ಕಲ್ಪಿಸುವುದು ಆದ್ಯತೆಯಾಗಬೇಕಿದೆ.

ವಾಚಕರ ವಾಣಿ

ಕೆಲಸ ಮಾಡಿರುವುದು ಮುಖ್ಯ

ಬ್ರಿಟನ್ ಚುನಾವಣೆಯ ಫಲಿತಾಂಶಕ್ಕೆ ಭಾರತದಲ್ಲಿ ವಿವಿಧ ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಮಾಧ್ಯಮಗಳು ರಿಷಿ ಸುನಕ್ ಸೋತ ಬಗೆಗೆ ಹಾಗೂ ಅವರು ಭಾರತದ ಜೊತೆ ಹೊಂದಿರುವ ಸಂಬಂಧದ ಕುರಿತು ಹೆಚ್ಚು ಗಮನ ನೀಡಿವೆ. ಆದರೆ ಕನ್ಸರ್ವೇಟಿವ್ ಪಾರ್ಟಿಯ ದೀರ್ಘ ಆಡಳಿತವನ್ನು ಅಲ್ಲಿನ ಮತದಾರರು ಅಂತ್ಯಗೊಳಿಸಿದ್ದು ಮುಖ್ಯ. ಲೇಬರ್ ಪಾರ್ಟಿ ಭಾರತದ ಬಗ್ಗೆ ಮೊದಲಿಗಿಂತ ಉತ್ತಮ ನಿಲುವು ತಾಳುತ್ತದೆಯೋ ಎಂದು ನೋಡಬೇಕಾಗಿದೆ. ಮುಕ್ತ ವ್ಯಾಪಾರ ಒಪ್ಪಂದವೇನೋ (ಎಫ್‌ಟಿಎ) ಏರ್ಪಡಬಹುದು. ಆದರೆ ಅದಕ್ಕಿಂತಲೂ ವಲಸಿಗರ ವಿಚಾರವಾಗಿ ನೂತನ ಪ್ರಧಾನಿ ಅನುಸರಿಸಲಿರುವ ನೀತಿಯಿಂದ ಭಾರತ ಮೂಲದ ವಿದ್ಯಾರ್ಥಿಗಳು, ಕಾರ್ಮಿಕರ ಮೇಲೆ ಏನು ಪರಿಣಾಮ ಆದೀತು ಎಂಬ ಕುತೂಹಲ ಹೆಚ್ಚು ಇದೆ. ಒಟ್ಟಿನಲ್ಲಿ ಅಲ್ಲಿನ ಪ್ರಧಾನಿಯ ವೈಯಕ್ತಿಕ ಹಿನ್ನೆಲೆ, ಆಸ್ತಿ ವಿವರ ಇವುಗಳಿಗಿಂತ ಇಲ್ಲಿಯವರೆಗೆ ಅವರು ಸಾರ್ವಜನಿಕ ವಲಯದಲ್ಲಿ ಏನು ಕೆಲಸ ಮಾಡಿದ್ದಾರೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ನಮ್ಮಲ್ಲೂ ಚುರುಕಿನ ಚುನಾವಣೆ ಆಗಲಿ

ಬ್ರಿಟನ್ನಿನ ಜನಸಂಖ್ಯೆ 6.7 ಕೋಟಿ. ಅಲ್ಲಿನ ಸಂಸತ್ತಿಗೆ 650 ಮಂದಿ ಆಯ್ಕೆಯಾಗಿದ್ದಾರೆ. 412 ಸ್ಥಾನ ಗಳಿಸಿದ ಲೇಬರ್ ಪಾರ್ಟಿಯ ಕೀರ್ ಸ್ಟಾರ್ಮರ್ ಅವರು ಚುನಾವಣಾ ಫಲಿತಾಂಶ ಬಂದ ಕೆಲವೇ ಹೊತ್ತಿನಲ್ಲಿ ನೂತನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ ಕೂಡ. ಆದರೆ 140 ಕೋಟಿ ಜನಸಂಖ್ಯೆ ಹಾಗೂ 96 ಕೋಟಿ ಮತದಾರರನ್ನು ಹೊಂದಿರುವ ಭಾರತದಲ್ಲಿ 543 ಸ್ಥಾನಗಳಿಗೆ ಚುನಾವಣೆ ನಡೆಸಲು ಚುನಾವಣಾ ಆಯೋಗವು ಸುದೀರ್ಘ ಅವಧಿಯನ್ನು ತೆಗೆದುಕೊಂಡಿತು. ಇನ್ನು ಮುಂದಾದರೂ ಚುನಾವಣೆಯನ್ನು ಸಾಧ್ಯವಾದಷ್ಟು ಕಡಿಮೆ ಅವಧಿಯಲ್ಲಿ ನಡೆಸುವಂತಾಗಲಿ. ಆಡಳಿತ ಪಕ್ಷಕ್ಕೆ ಪ್ರಚಾರ ನಡೆಸಲು ಅನುಕೂಲವಾಗಲಿ ಎಂದು ಆರೇಳು ಹಂತಗಳಲ್ಲಿ ಚುನಾವಣೆ ನಡೆಸುವುದನ್ನು ಬಿಟ್ಟು, ಒಂದು ಅಥವಾ ಎರಡು ಹಂತಗಳಲ್ಲಿ ಚುನಾವಣೆ ನಡೆಸುವಂತೆ ಆಗಲಿ.

ಕರ್ನಾಟಕದಲ್ಲಿ ಇರುವಷ್ಟು ಜನಸಂಖ್ಯೆ ಹಾಗೂ ಈ ರಾಜ್ಯದಷ್ಟು ವಿಸ್ತೀರ್ಣವುಳ್ಳ ಬ್ರಿಟನ್ 650 ಸಂಸದರನ್ನು ಹೊಂದಿದೆ. ನಾವು ಮಾತ್ರ 543 ಲೋಕಸಭಾ ಸದಸ್ಯರನ್ನು ಹೊಂದಿದ್ದೇವೆ. ನಮ್ಮ ಕೆಲವು ಲೋಕಸಭಾ ಕ್ಷೇತ್ರಗಳು, ಅಭ್ಯರ್ಥಿಗಳಿಗೆ ಎಲ್ಲ ಮತದಾರರನ್ನು ಭೇಟಿ ಮಾಡಲಾಗದಷ್ಟು ದೊಡ್ಡದಿವೆ. ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದ ಕೊಡಗಿನ ಜನ ತುರ್ತಾಗಿ ಸಂಸದರನ್ನು ಭೇಟಿಯಾಗಬೇಕೆಂದರೆ 150 ಕಿ.ಮೀ. ಪ್ರಯಾಣಿಸಿ ಮೈಸೂರಿಗೇ ಬರಬೇಕು. ಇದೊಂದು ಉದಾಹರಣೆಯಷ್ಟೇ. ಕಳೆದ ಬಾರಿ ನಡೆದ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯ ಅವ್ಯವಸ್ಥೆ ಇದು.

ಜಿಲ್ಲೆಗೊಬ್ಬ ಸಂಸದರ ಅವಶ್ಯಕತೆ ಇದೆ. ಆದ್ದರಿಂದ ಮುಂದಿನ ಪುನರ್ ವಿಂಗಡಣೆ ಸಮಯದಲ್ಲಿ (2028ರಲ್ಲಿ) ಈ ಬಗ್ಗೆ ಗಮನ ಹರಿಸಬೇಕು. ಆಗ ಮಾತ್ರ ಜಿಲ್ಲೆಗಳ ಜನರಿಗೆ ಅನುಕೂಲ ಆಗುತ್ತದೆ.

ಮುಳ್ಳೂರು ಪ್ರಕಾಶ್, ಮೈಸೂರು

ಮಾತನ್ನು ಹಿಂತೆಗೆದುಕೊಳ್ಳುವರೇ?

ಕಳೆದ ವರ್ಷ ಮಳೆ ಕಡಿಮೆಯಾಗಿ ರಾಜ್ಯದಲ್ಲಿ ಬರಗಾಲದ ಛಾಯೆ ಕಂಡು ಬಂದಾಗ ಕೆಲವು ರಾಜಕಾರಣಿಗಳು ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ರಾಜ್ಯದಲ್ಲಿ ಬರಗಾಲ ಎದುರಾಗುತ್ತದೆ ಎಂದು ಲೇವಡಿ ಮಾಡಿದ್ದರು. ಈಗಲೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿ ಇದೆ. ಆದರೆ ರಾಜ್ಯದ ಹಲವೆಡೆ ಕುಂಭದ್ರೋಣ ಮಳೆ ಬೀಳುತ್ತಿದೆ. ಕರಾವಳಿ ಮತ್ತು ಮಲೆನಾಡಿನಲ್ಲಂತೂ ಜನರು ದಶಕಗಳ ಹಿಂದಿನ ಮಳೆಗಾಲದ ದಿನಗಳಂತೆಯೇ ಮಳೆ ಸುರಿಯುವುದನ್ನು ನೋಡುತ್ತಿದ್ದಾರೆ. ಕೆರೆ ಕಾಲುವೆಗಳು ಉಕ್ಕುತ್ತಿವೆ. ಹಿಂದಿನ ವರ್ಷ ಕುಡಿಯುವ ನೀರಿನ ಕೊರತೆಯನ್ನು ಅನುಭವಿಸಿದ ಕೆಲವು ಪ್ರದೇಶಗಳು ಈಗ ನೆಮ್ಮದಿಯ ನಿಟ್ಟುಸಿರು ಬಿಡುತ್ತಿರಬಹುದು. ಬರಗಾಲಕ್ಕೂ ಕಾಂಗ್ರೆಸ್ ಪಕ್ಷಕ್ಕೂ ನಂಟು ಹಾಕಿದವರು ತಮ್ಮ ಮಾತನ್ನು ಹಿಂತೆಗೆದುಕೊಳ್ಳುವರೇ?

ರಮಾನಂದ ಶರ್ಮಾ, ಬೆಂಗಳೂರು

ಶ್ರದ್ಧಾಂಜಲಿ ಸಲ್ಲಿಸಿದ್ದು ವಿಷಾದಕರ

ವಿ. ಸೋಮಣ್ಣ ಮತ್ತು ಡಾ.ಸಿ.ಎನ್. ಮಂಜುನಾಥ್ ಅವರು ಬಿಜೆಪಿಯ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಸುದ್ದಿ (ಪ್ರ.ವಾ., ಜುಲೈ 7) ಓದಿ ಆಶ್ಚರ್ಯ ಮತ್ತು ಆಘಾತ ಎರಡೂ ಆದವು. ನಮ್ಮೊಡನೆಯೇ ಇರುವ ಅಡ್ವಾಣಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದವರಲ್ಲಿ ಒಬ್ಬರು ಉನ್ನತ ಸ್ಥಾನದಲ್ಲಿರುವ ಸಚಿವರು, ಮತ್ತೊಬ್ಬರು ಜನಪ್ರಿಯ ವ್ಯಕ್ತಿ ಹಾಗೂ ಸಂಸದರು.

‘ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯ’ ಮತ್ತು ತೀರಾ ಏಕಪಕ್ಷೀಯವಾದ ಕೆಲವು ಯೂಟ್ಯೂಬ್ ವಾಹಿನಿಗಳಲ್ಲಿ ಬಿತ್ತರವಾಗುವ ಅನೇಕ ಸುದ್ದಿಗಳು ‘ಬುರುಡೆ’ ಎಂಬುದು ಎಲ್ಲರಿಗೂ ತಿಳಿದಿದೆ. ಈ ಹಿಂದೆಯೂ ಮಹನೀಯರ ಸಾವಿನ ಸುಳ್ಳು ಸುದ್ದಿಯನ್ನು ಕೆಲವರು ಹರಡಿದ, ಶ್ರದ್ಧಾಂಜಲಿ ಅರ್ಪಿಸಿದ ನಿದರ್ಶನಗಳಿವೆ. ವಿಶೇಷವಾಗಿ ಒಬ್ಬ ಗಣ್ಯವ್ಯಕ್ತಿಯ ಸಾವಿನ ಸುದ್ದಿಯನ್ನು ಖಚಿತಪಡಿಸಿಕೊಂಡೇ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕು. ಸೋಮಣ್ಣ ಮತ್ತು ಮಂಜುನಾಥ್ ಅವರು ತಮ್ಮಿಂದಾದ ಅಚಾತುರ್ಯಕ್ಕೆ ಕ್ಷಮೆ ಕೋರಿದ್ದಾರೆ ಎಂಬುದು ನಿಜ. ಆದರೂ, ಅವರಿಗೆ ಮತ್ತು ಪಕ್ಷಕ್ಕೆ ಆದ ಮುಜುಗರ ವಿಷಾದಕರ.

ಎಚ್.ವಿ. ಶ್ರೀಧರ್, ಬೆಂಗಳೂರು

ಐದು ದಶಕಗಳ ಹಿಂದಿನ ಬೆರಗು

‘50 ವರ್ಷಗಳ ಹಿಂದೆ’ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾದ ಸುದ್ದಿಯೊಂದು (ಪ್ರ.ವಾ., ಜುಲೈ 5) ಗಮನ ಸೆಳೆಯಿತು. ಅಮೆರಿಕದ ವಿಜ್ಞಾನಿಗಳು ಆಗಲೇ ‘ಮನೆಯಿಂದಲೇ ಕಚೇರಿ ಕೆಲಸ’ದ ಕಾಲವೊಂದು ಬಹಳ ಬೇಗನೆ ಬರಬಹುದು ಎಂದು ಅಂದಾಜಿಸಿ ಆ ವ್ಯವಸ್ಥೆಗಾಗಿ ಸಂಶೋಧನೆ ಕೈಗೊಂಡಿದ್ದುದು ಸೋಜಿಗವೆನಿಸಿತು. ಈಗ ಅದು ನಮಗೆ ಹೊಸ ವಿಷಯವೇ ಅಲ್ಲ. ಆದರೆ ಐವತ್ತು ವರ್ಷಗಳ ಹಿಂದೆ ಅದೊಂದು ಬಹಳ ಬೆರಗಿನ ಸಂಗತಿಯಾಗಿ ಜನರಿಗೆ ಕಂಡಿತ್ತೇನೋ…

ವೀರೇಶ ಬಂಗಾರಶೆಟ್ಟರ, ಕುಷ್ಟಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಹಾರ ಸರಣಿ ಸೇತುವೆ ಕುಸಿತ ನಿರ್ಲಕ್ಷ್ಯವೇ ಕಾರಣ?

ಬಿಹಾರದಲ್ಲಿ ಜೂನ್ 18ರಿಂದ ಜುಲೈ 4ರ ನಡುವೆ 10 ಸೇತುವೆಗಳು ಕುಸಿದಿರುವುದು ರಾಷ್ಟ್ರಮಟ್ಟದ ಸುದ್ದಿಯಾಗಿದೆ. ಅದೃಷ್ಟವಶಾತ್ ಪ್ರಾಣ ಹಾನಿ ಸಂಭವಿಸಿಲ್ಲ. ಈ ವಿಚಾರ ರಾಜ್ಯದಲ್ಲಿ ರಾಜಕೀಯ ಕಿತ್ತಾಟಕ್ಕೂ ಕಾರಣವಾಗಿದೆ. ಭ್ರಷ್ಟಾಚಾರ, ಕಳಪೆ ಕಾಮಗಾರಿ, ಅಧಿಕಾರಿಗಳು, ಎಂಜಿನಿಯರ್‌ಗಳ ನಿರ್ಲಕ್ಷ್ಯ, ನೇಪಾಳದ ಕಡೆಯಿಂದ ಭಾರಿ ಪ್ರಮಾಣದ ನೀರು ಹರಿದು ಬರುತ್ತಿರುವುದು ಹೀಗೆ... ಸೇತುವೆ ಕುಸಿತಕ್ಕೆ ಹಲವು ಕಾರಣಗಳನ್ನು ನೀಡಲಾಗುತ್ತಿದೆ. ಘಟನೆಯಿಂದ ತೀವ್ರ ಮುಜುಗರಕ್ಕೀಡಾಗಿರುವ ಬಿಹಾರ ಸರ್ಕಾರ ಉನ್ನತ ಮಟ್ಟದ ತನಿಖೆಗೂ ಆದೇಶಿಸಿದೆ. ಪ್ರಾಥಮಿಕ ವರದಿಯ ಆಧಾರದಲ್ಲಿ 15 ಎಂಜಿನಿಯರ್‌ಗಳನ್ನು ಅಮಾನತು ಮಾಡಿದೆ. ಸೇತುವೆ ಕುಸಿತ ಪ್ರಕರಣಗಳ ಸುತ್ತಲಿನ ನೋಟವನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ...

ಬಿಹಾರದ ಸಿವಾನ್ ಜಿಲ್ಲೆಯಲ್ಲಿ ಜೂನ್ 30ರಂದು ಸೇತುವೆ ಕುಸಿದು ಬಿದ್ದಿರುವುದು – ಪಿಟಿಐ ಚಿತ್ರ

ಸೇತುವೆ ಕುಸಿದಿದ್ದು ಎಲ್ಲಿ? ಯಾವಾಗ?

ಜೂನ್ 18: ಅರರಿಯಾ ಜಿಲ್ಲೆಯ ಪರಾರಿಯಾ ಗ್ರಾಮದಲ್ಲಿ ಉದ್ಘಾಟನೆಗೆ ಕಾದಿದ್ದ ಸೇತುವೆ
ಜೂನ್ 22: ಸಿವಾನ್ ಜಿಲ್ಲೆ
ಜೂನ್ 23: ಪೂರ್ವ ಚಂಪಾರಣ್ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆ
ಜೂನ್ 25: ಮಧುಬನಿ ಜಿಲ್ಲೆಯಲ್ಲಿ ನೀರಿನ ಸೆಳೆತಕ್ಕೆ ಪಿಲ್ಲರ್‌ಗಳು ಕೊಚ್ಚಿಹೋಗಿ ಸೇತುವೆ ನೀರುಪಾಲು
ಜೂನ್ 27: ಕೃಷ್ಣಗಂಜ್ ಜಿಲ್ಲೆಯಲ್ಲಿ
ಜೂನ್ 30: ಕೃಷ್ಣಗಂಜ್ ಜಿಲ್ಲೆಯಲ್ಲೇ ಮತ್ತೊಂದು ಸೇತುವೆ
ಜುಲೈ 3: ಸಾರಣ್ ಮತ್ತು ಸಿವಾನ್ ಜಿಲ್ಲೆಗಳಲ್ಲಿ ಮೂರು ಸೇತುವೆಗಳು
ಜುಲೈ 4: ಸಾರಣ್ ಜಿಲ್ಲೆಯ ಗಂಡಕಿ ನದಿಗೆ ಕಟ್ಟಿದ್ದ ಸೇತುವೆ

ಪ್ರಜಾವಾಣಿ ವಾರ್ತೆ

ಜೂನ್ 18. ಬಿಹಾರದ ಅರರಿಯಾ ಜಿಲ್ಲೆಯ ಪರಾರಿಯಾ ಗ್ರಾಮದಲ್ಲಿ ಬಕರಾ ನದಿಗೆ ₹12 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದ, ಇನ್ನಷ್ಟೇ ಉದ್ಘಾಟನೆಯಾಗಬೇಕಿದ್ದ ಸೇತುವೆ ಕುಸಿದು ಬಿತ್ತು. ಅದಾದ ಬಳಿಕ 15 ದಿನಗಳಲ್ಲಿ ಸುತ್ತಮುತ್ತಲ ಜಿಲ್ಲೆಗಳಲ್ಲಿ ಒಂಬತ್ತು ಸೇತುವೆಗಳು ನೀರು ಪಾಲಾದವು.

ಕೆಲವು ಸೇತುವೆಗಳು ನಿರ್ಮಾಣವಾಗಿ 10–15 ವರ್ಷಗಳಾಗಿತ್ತಷ್ಟೇ. ಒಂದು ಸೇತುವೆ ನಿರ್ಮಾಣ ಹಂತದಲ್ಲಿತ್ತು. ಇನ್ನೂ ಕೆಲವು ಸೇತುವೆಗಳು 25, 30, 50, 80 ವರ್ಷಗಳ ಹಿಂದೆ ನಿರ್ಮಾಣವಾಗಿದ್ದವು. ಬಿಹಾರದಲ್ಲಿ ಸೇತುವೆಗಳು ಕುಸಿಯುವುದು ಹೊಸತಲ್ಲ. ಕೋಸಿ ನದಿಗೆ ನಿರ್ಮಿಸಲಾಗುತ್ತಿದ್ದ ಸೇತುವೆಯು ಈ ವರ್ಷದ ಮಾರ್ಚ್ 22ರಂದು ಕುಸಿದು ಒಬ್ಬರು ಮೃತಪಟ್ಟು, ಹಲವರು ಸಿಲುಕಿಕೊಂಡಿದ್ದರು. ಆದರೆ, ಸಮೂಹಸನ್ನಿಯ ಮಾದರಿಯಲ್ಲಿ ಸರಣಿ ರೂಪದಲ್ಲಿ ಸೇತುವೆಗಳು ಕುಸಿದಿರುವುದು ಇದೇ ಮೊದಲು. ಸಿವಾನ್, ಸಾರಣ್, ಮಧುಬನಿ, ಅರರಿಯಾ, ಪೂರ್ವ ಚಂಪಾರಣ್, ಕೃಷ್ಣಗಂಜ್ ಜಿಲ್ಲೆಗಳಲ್ಲಿ ಸೇತುವೆಗಳು ಕುಸಿದಿವೆ.

ಕಾರಣಗಳೇನು?: ಸೇತುವೆಗಳ ಕುಸಿತ ನಿತೀಶ್ ಕುಮಾರ್ ಸರ್ಕಾರಕ್ಕೆ ಮುಜುಗರ ತಂದಿದೆ. ವಿಪಕ್ಷಗಳು ಇದೇ ವಿಚಾರವನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಕುಟುಕಿವೆ. ‘ರಾಜ್ಯದ ಸೇತುವೆಗಳಲ್ಲಿ ಸಂಚರಿಸಲು ಭಯವಾಗುತ್ತಿದೆ’ ಎಂದು ಸರ್ಕಾರದ ಪಾಲುದಾರ ಬಿಜೆಪಿಯ ರಾಷ್ಟ್ರೀಯ ಒಬಿಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ನಿಖಿಲ್ ಆನಂದ್ ಎಂದು ಹೇಳಿರುವುದು ಪರಿಸ್ಥಿತಿಯ ತೀವ್ರತೆಯನ್ನು ಬಿಂಬಿಸುತ್ತದೆ.

ರಾಜ್ಯದಲ್ಲೀಗ ಮುಂಗಾರು ಆರಂಭವಾಗಿದೆ. ರಾಜ್ಯದ ನದಿಗಳು, ಉಪನದಿಗಳು, ಕಾಲುವೆ, ನಾಲೆಗಳು ತುಂಬಿ ಹರಿಯುತ್ತಿವೆ. ಮಳೆಗಾಲದಲ್ಲಿ ಇಲ್ಲಿ ನೆರೆಹಾವಳಿ ಸಾಮಾನ್ಯ. ಈ ಸಂದರ್ಭದಲ್ಲೇ ಸೇತುವೆಗಳು ಕುಸಿದಿರುವುದು ಜನರ ಆತಂಕ ಹೆಚ್ಚಿಸಿದೆ. ಇದಕ್ಕೆ ವಿವಿಧ ಕಾರಣಗಳನ್ನು ಪಟ್ಟಿ ಮಾಡಲಾಗುತ್ತದೆ.

ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಕಳಪೆ ಕಾಮಗಾರಿ, ಅಧಿಕಾರಿಗಳು, ಎಂಜಿನಿಯರ್‌ಗಳ ನಿರ್ಲಕ್ಷ್ಯ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ರಾಜ್ಯದ ಅಧಿಕಾರಿಗಳು, ನದಿ–ಹಳ್ಳಗಳಲ್ಲಿ ಭಾರಿ ಪ್ರಮಾಣದಲ್ಲಿ ನೀರು ಹರಿಯುತ್ತಿರುವುದನ್ನು ಕಾರಣ ಕೊಡುತ್ತಿದ್ದಾರೆ. ನೀರಿನ ಮಟ್ಟ ಹೆಚ್ಚಾಗಿರುವರಿಂದ ಸೇತುವೆಗಳು ಕುಸಿಯುತ್ತಿವೆ ಎಂದು ಹಳೆಯ ಸೇತುವೆಗಳು ಬಿದ್ದ ಪ್ರದೇಶದ ಗ್ರಾಮಸ್ಥರು ಕೂಡ ಹೇಳುತ್ತಿದ್ದಾರೆ. ಮಳೆಗಾಲಕ್ಕೂ ಮುನ್ನ ಸರ್ಕಾರವು ಕೆಲವು ಕಾಲುವೆಗಳು, ನಾಲೆಗಳಲ್ಲಿ ಹೂಳು ತೆಗೆಯುವ ಕೆಲಸ ಮಾಡಿತ್ತು. ಇದರ ಗುತ್ತಿಗೆ ವಹಿಸಿಕೊಂಡವರು ಅವೈಜ್ಞಾನಿಕವಾಗಿ ಸೇತುವೆಗಳ ಪಿಲ್ಲರ್‌ಗಳ ಸುತ್ತಮುತ್ತಲಿನಿಂದಲೂ ಮರಳು, ಹೂಳು, ಕಲ್ಲುಗಳನ್ನು ತೆರವುಗೊಳಿಸಿರುವುದರಿಂದ ಸೇತುವೆಗಳು ದುರ್ಬಲವಾಗಿದ್ದವು ಎಂಬ ವಾದವೂ ಇದೆ.

15 ಎಂಜಿನಿಯರ್‌ಗಳ ಅಮಾನತು

ಸೇತುವೆ ಕುಸಿತ ಪ್ರಕರಣದ ತನಿಖೆಗೆ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿತ್ತು. ಸಮಿತಿಯು ರಾಜ್ಯ ಜಲಸಂಪನ್ಮೂಲ ಇಲಾಖೆಗೆ ಪ್ರಾಥಮಿಕ ವರದಿಯನ್ನು ನೀಡಿದ್ದು, ‘ಕಾಮಗಾರಿಯ ಸಂದರ್ಭದಲ್ಲಿ ಮೇಲ್ವಿಚಾರಣೆ ಸರಿಯಾಗಿ ಮಾಡದೆ ಎಂಜಿನಿಯರ್‌ಗಳ ನಿರ್ಲಕ್ಷ್ಯ ವಹಿಸಿದ್ದು ಘಟನೆಗಳಿಗೆ ಕಾರಣ’ ಎಂದು ವರದಿಯಲ್ಲಿ ಉಲ್ಲೇಖಿಸಿದೆ. ಇದರ ಆಧಾರದಲ್ಲಿ ನಾಲ್ವರು ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಸೇರಿದಂತೆ 15 ಎಂಜಿನಿಯರ್‌ಗಳನ್ನು ಸರ್ಕಾರ ಅಮಾನತು ಮಾಡಿ ಶುಕ್ರವಾರ ಆದೇಶ ಹೊರಡಿಸಿದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕುಸಿದ ಸೇತುವೆಗಳೆಷ್ಟು?

2020	2021	2022	2023
2	11	11	8

7 ನಾಲ್ಕು ವರ್ಷಗಳಲ್ಲಿ ಮೃತಪಟ್ಟವರ ಸಂಖ್ಯೆ

* 2023ರ ಡಿಸೆಂಬರ್‌ನಲ್ಲಿ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿಯವರು ರಾಜ್ಯಸಭೆಗೆ ಕೊಟ್ಟ ಮಾಹಿತಿ

ಬಿಹಾರದ ಅರರಿಯಾ ಜಿಲ್ಲೆಯಲ್ಲಿ ಬಕರಾ ನದಿಗೆ ನಿರ್ಮಿಸಲಾಗಿದ್ದ ಹೊಸ ಸೇತುವೆ ಜೂನ್ 18ರಂದು ಕುಸಿದಿರುವುದು –ಪಿಟಿಐ ಚಿತ್ರ

ರಕ್ಷಣೆ ಯಾರ ಹೊಣೆ?

ಭಾರತದ ಸೇತುವೆಗಳ ಗುಣಮಟ್ಟದ ಬಗ್ಗೆ ಹಿಂದಿನಿಂದಲೂ ಪ್ರಶ್ನೆಗಳು ಕೇಳಿಬರುತ್ತಿವೆ. ದೇಶದ ಹಲವು ಸೇತುವೆಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ. ದುರಸ್ತಿಯ ಕೊರತೆಯಿಂದಲೂ ಸೇತುವೆಗಳು ಕುಸಿದುಬಿದ್ದದ್ದು ವರದಿಯಾಗಿವೆ. ಸೇತುವೆ ನಿರ್ವಹಣೆ ಯಾರ ಜವಾಬ್ದಾರಿ ಎನ್ನುವುದಕ್ಕೆ ಉತ್ತರ ಸರಳ ಅಲ್ಲ. ವಿವಿಧ ಇಲಾಖೆಗಳ ನಡುವೆ ಸಾಮರಸ್ಯ ಇಲ್ಲದಿರುವುದು ಕೂಡ ಸೇತುವೆಗಳ ಕಳಪೆ ಸ್ಥಿತಿಗೆ ಕಾರಣ ಎನ್ನಲಾಗುತ್ತಿದೆ. ಭಾರತದ ಬಹುತೇಕ ಸೇತುವೆಗಳು ಕುಸಿದು ಬೀಳಲು ಕಾರಣವಾಗುತ್ತಿರುವುದು ಅವುಗಳ ನಿರ್ವಹಣೆಯ ಕೊರತೆ. ಹೆದ್ದಾರಿಗಳಲ್ಲಿನ ಸೇತುವೆಗಳು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತವೆ. ಗಡಿ ರಸ್ತೆಗಳ ಸಂಸ್ಥೆಯು ಗಡಿಯಲ್ಲಿರುವ ಸೇತುವೆಗಳ ನಿರ್ವಹಣೆ ನೋಡಿಕೊಳ್ಳುತ್ತದೆ. ರೈಲ್ವೆ ಇಲಾಖೆಯು ಹಳಿಗಳ ಮೇಲಿನ ಸೇತುವೆಗಳ ಜವಾಬ್ದಾರಿ ಹೊತ್ತರೆ, ಉಳಿದ ಸೇತುವೆಗಳ ನಿರ್ವಹಣೆ ಆಯಾ ರಾಜ್ಯದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ದೇಶದಲ್ಲಿ ನಡೆದ ಪ್ರಮುಖ ಘಟನೆಗಳು

- **ದಿಯು ದಮನ್:** 2003ರ ಆಗಸ್ಟ್‌ನಲ್ಲಿ, ದಮನ್‌ನ ಶತಮಾನದಷ್ಟು ಹಳೆಯ ಸೇತುವೆ ಕುಸಿದು ಬಿದ್ದು, 25 ಮಂದಿ ಸಾವಿಗೀಡಾಗಿದ್ದರು. ಅವರಲ್ಲಿ ಹೆಚ್ಚಿನವರು ಮಕ್ಕಳು. ದಮನ್‌ಗಂಗಾ ನದಿಗೆ ಕಟ್ಟಲಾಗಿದ್ದ ಸೇತುವೆ ಅದಾಗಿತ್ತು
- **ಬಿಹಾರ:** 2006ರಲ್ಲಿ ಬಿಹಾರದಲ್ಲಿ ಸೇತುವೆಯೊಂದು ಕುಸಿದು 34 ಮಂದಿ ಮೃತರಾಗಿದ್ದರು. 150 ವರ್ಷ ಹಳೆಯದಾಗಿದ್ದ ಸೇತುವೆಯು ರೈಲು ನಿಲ್ದಾಣದಲ್ಲಿದ್ದ ಪ್ಯಾಸೆಂಜರ್ ರೈಲಿನ ಮೇಲೆ ಬಿದ್ದಿತ್ತು
- **ಪಶ್ಚಿಮ ಬಂಗಾಳ:** 2016ರ ಆಸುಪಾಸಿನಲ್ಲಿ ಪಶ್ಚಿಮ ಬಂಗಾಳದಲ್ಲಿ ಹಲವು ಸೇತುವೆಗಳು ಕುಸಿದಿದ್ದವು. ಅವುಗಳ ಪೈಕಿ ನಿರ್ಮಾಣ ಹಂತದಲ್ಲಿದ್ದ ಕೋಲ್ಕತ್ತದ ವಿವೇಕಾನಂದ ಸೇತುವೆ ಪ್ರಮುಖವಾದುದು. ಅವಘಡದಲ್ಲಿ 26 ಮಂದಿ ಮೃತರಾಗಿದ್ದರು
- **ಪಶ್ಚಿಮ ಬಂಗಾಳ:** 2018ರ ಸೆಪ್ಟೆಂಬರ್ 4ರಂದು ಕೋಲ್ಕತ್ತದ ಅಲಿಪೋರ ನೆರೆಯ ಮಜರ್‌ಹಟ್ ಸೇತುವೆ ಕುಸಿದಿತ್ತು. ಘಟನೆಯಲ್ಲಿ ಮೂವರು ಸತ್ತು, 25 ಮಂದಿ ಗಾಯಗೊಂಡಿದ್ದರು.
- **ಮಹಾರಾಷ್ಟ್ರ:** 2019ರ ಮಾರ್ಚ್ 14ರಂದು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್ ರೈಲು ನಿಲ್ದಾಣ ಮತ್ತು ಬದ್ರುದ್ದೀನ್ ತಯಾಬ್ಜಿ ಪಥವನ್ನು ಸಂಪರ್ಕಿಸುವ ಪಾದಚಾರಿ ಮೇಲ್ಸೇತುವೆ ಕುಸಿದು, ಆರು ಮಂದಿ ಮೃತರಾಗಿದ್ದಲ್ಲದೇ, 30 ಮಂದಿ ಗಾಯಗೊಂಡಿದ್ದರು
- **ಗುಜರಾತ್:** ಪಶ್ಚಿಮ ಗುಜರಾತ್‌ನ ಮೊರ್ಬಿಯಲ್ಲಿ ಮಚ್ಚು ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಶತಮಾನದಷ್ಟು ಹಳೆಯ ತೂಗುಸೇತುವೆ 2022ರ ಅಕ್ಟೋಬರ್ 30ರಂದು ಮುರಿದು ಬಿದ್ದು 135 ಮಂದಿ ಮೃತಪಟ್ಟಿದ್ದರು.

ನಿರ್ವಹಣಾ ವ್ಯವಸ್ಥೆಗೆ ಗ್ರಹಣ

2016ರಲ್ಲಿ ಕೇಂದ್ರ ರಸ್ತೆ ಸಾರಿಗೆ ಸಚಿವರಾಗಿದ್ದ ನಿತಿನ್ ಗಡ್ಕರಿ ಅವರು, ಭಾರತೀಯ ಸೇತುವೆ ನಿರ್ವಹಣಾ ವ್ಯವಸ್ಥೆಗೆ (ಐಬಿಎಂಎಸ್) ನವದೆಹಲಿಯಲ್ಲಿ ಚಾಲನೆ ನೀಡಿದ್ದರು. ದೇಶದಲ್ಲಿರುವ ಸೇತುವೆಗಳ ಡಾಟಾಬೇಸ್ ಅನ್ನು ರೂಪಿಸುವುದು, ಅವುಗಳ ರಚನೆಗೆ ಸಂಬಂಧಿಸಿದ ಸ್ಥಿತಿಗತಿ ದಾಖಲಿಸುವುದು ಮತ್ತು ಸಮಯಕ್ಕೆ ತಕ್ಕಂತೆ ಕ್ರಮ ವಹಿಸುವುದು ಐಬಿಎಂಎಸ್ ಕೆಲಸ ಎಂದು ಗಡ್ಕರಿ ಪ್ರತಿಪಾದಿಸಿದ್ದರು. ಆದರೆ, ಐಬಿಎಂಎಸ್ ಸಮರ್ಪಕ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಅದರ ವೆಬ್‌ಸೈಟ್‌ನಲ್ಲಿ ಆರು ವರ್ಷಕ್ಕೂ ಹಿಂದಿನ ಸೇತುವೆಗಳ ಸ್ಥಿತಿ ಕುರಿತ ಮಾಹಿತಿ ಅಷ್ಟೇ ಲಭ್ಯವಿದೆ.

ಸುಪ್ರೀಂ ಕೋರ್ಟ್‌ಗೆ ಮೊರೆ

ಬಿಹಾರದಲ್ಲಿರುವ ನಿರ್ಮಾಣ ಹಂತದಲ್ಲಿರುವುದೂ ಸೇರಿದಂತೆ ಎಲ್ಲ ಸೇತುವೆಗಳ ವಿನ್ಯಾಸದ ಮೌಲ್ಯಮಾಪನ ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ಬ್ರಿಜೇಶ್ ಸಿಂಗ್ ಎಂಬವರು ಈ ಅರ್ಜಿ ಸಲ್ಲಿಸಿದ್ದು, ‘ಮೌಲ್ಯಮಾಪನ ವರದಿಯ ಆಧಾರದಲ್ಲಿ ದುರ್ಬಲ ಸೇತುವೆಗಳನ್ನು ಉರುಳಿಸಬೇಕು ಅಥವಾ ದುರಸ್ತಿ ಮಾಡಲು ಸೂಚನೆ ನೀಡಬೇಕು. ಹಾಗೂ ರಾಜ್ಯದಲ್ಲಿ ಸೇತುವೆಗಳ ಸಾಮರ್ಥ್ಯದ ಮೇಲ್ವಿಚಾರಣೆ ನಡೆಸುವುದಕ್ಕಾಗಿ ವ್ಯವಸ್ಥಿತ ಮತ್ತು ಪರಿಣಾಮಕಾರಿಯಾದ ನೀತಿ ಜಾರಿಗೆ ತರಲು ಬಿಹಾರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಕೋರಿದ್ದಾರೆ.

ಆಧಾರ: ಐಬಿಎಂಎಸ್ ವೆಬ್‌ಸೈಟ್, ಪಿಟಿಐ

ಸಿನಿ ಬಿಟ್ಸ್

ಸಿಂಪಲ್ ಸುನಿ ಹೊಸ ಸಿನಿಮಾ



ಚಿತ್ರದ ಪೋಸ್ಟರ್

ಇತ್ತೀಚೆಗಷ್ಟೇ ‘ಒಂದು ಸರಳ ಪ್ರೇಮಕಥೆ’ಯನ್ನು ಯಶಸ್ವಿಯಾಗಿ ಹೇಳಿ ಮುಗಿಸಿರುವ ನಿರ್ದೇಶಕ ಸಿಂಪಲ್ ಸುನಿ ಇದೀಗ ‘ದೇವರು ರುಜು ಮಾಡಿದನು’ ಎನ್ನಲು ಹೊರಟಿದ್ದಾರೆ. ರಂಗಭೂಮಿ ಪ್ರತಿಭೆ, ನವನಟ ವಿರಾಜ್ ಈ ಚಿತ್ರದ ನಾಯಕ.

ಕುವೆಂಪುರವರ ಕವಿತೆ ಸಾಲನ್ನೇ ಚಿತ್ರದ ಶೀರ್ಷಿಕೆಯಾಗಿಸಿಕೊಂಡಿರುವ ಸುನಿ ಮತ್ತೊಂದು ಪ್ರೇಮಕಥೆಗೆ ತಯಾರಿ ನಡೆಸಿದ್ದಾರೆ. ಚಿತ್ರದ ಮೊದಲ ಪೋಸ್ಟರ್ ಬಿಡುಗಡೆಗೊಂಡಿದ್ದು, ಇದೊಂದು ಕಾವ್ಯಾತ್ಮಕ ಚಿತ್ರ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸದಾ ವಿಭಿನ್ನ ಕಥೆಗಳೊಂದಿಗೆ ಬರುವ ಸುನಿ, ಬಾನೆತ್ತರಕ್ಕೆ ಹಾರುವ ಪ್ರೇಮದ ಹಕ್ಕಿಗಳ ಕುರುಹನ್ನು ಪೋಸ್ಟರ್‌ನಲ್ಲಿ ನೀಡಿದ್ದಾರೆ.

ಸಿಂಪಲ್ ಸುನಿ

ಒಂದು ಕಾಲಕ್ಕೆ ಚಿತ್ರರಂಗದವರ ಖಾಯಂ ಜಾಗವಾಗಿದ್ದ ಗ್ರೀನ್ ಹೌಸ್‌ನ ಮಾಲೀಕ ಗೋವಿಂದ್ ರಾಜ್, ತಮ್ಮ ಪುತ್ರ ವಿರಾಜ್‌ಗಾಗಿ ಗ್ರೀನ್ ಹೌಸ್ ಮೂವೀಸ್ ಬ್ಯಾನರ್ ಮೂಲಕ ಬಂಡವಾಳ ಹೂಡುತ್ತಿದ್ದಾರೆ. ಚಿತ್ರದ ತಂಡ ನಾಯಕಿ ಮತ್ತು ಇನ್ನಿತರ ಕಲಾವಿದರ ಹುಡುಕಾಟದಲಿದ್ದು, ಸೆಪ್ಟೆಂಬರ್‌ನಲ್ಲಿ ಚಿತ್ರೀಕರಣ ಪ್ರಾರಂಭಿಸುವುದಾಗಿ ಹೇಳಿದೆ.

ಸ್ಟಾರ್ ಸುವರ್ಣದಲ್ಲಿ ‘ಶ್ರೀ ದೇವೀ ಮಹಾತ್ಮೆ’

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪೌರಾಣಿಕ ಕಥೆಯನ್ನು ಹೊಂದಿರುವ ‘ಶ್ರೀ ದೇವೀ ಮಹಾತ್ಮೆ’ ಧಾರಾವಾಹಿ ಸೋಮವಾರದಿಂದ ಶನಿವಾರದವರೆಗೆ ರಾತ್ರಿ 7 ಗಂಟೆಗೆ ಪ್ರಸಾರವಾಗುತ್ತಿದೆ.

‘ಈ ಹಿಂದೆ ವಾಹಿನಿಯಲ್ಲಿ ‘ಗುರು ರಾಘವೇಂದ್ರ ವೈಭವ’, ‘ಹರ ಹರ ಮಹಾದೇವ’, ‘ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ’ ಹಾಗೂ ‘ಎಡೆಯೂರು ಶ್ರೀ ಸಿದ್ದಲಿಂಗೇಶ್ವರ’ದಂತಹ ಧಾರಾವಾಹಿಗಳು ಪ್ರಸಾರಗೊಂಡಿದ್ದವು. ಇದೀಗ ಪೌರಾಣಿಕ ಕಥೆ ಹೊಂದಿರುವ ಮತ್ತೊಂದು ಧಾರಾವಾಹಿ ಪ್ರಾರಂಭಗೊಂಡಿದೆ. ಪುರಾಣಗಳ ಪ್ರಕಾರ ಸತಿಯು ಅತ್ಯಂತ ಸುಂದರವಾಗಿರುತ್ತಾಳೆ. ತಪಸ್ವಿ ಶಿವನಿಗೆ ಮನಸೋಲುವ ಸತಿ, ಮುಂದೆ ಪಾರ್ವತಿಯಾಗಿ ಹೇಗೆ ಮರುಜನ್ಮ ತಾಳುತ್ತಾಳೆ, ಮಹಾಕಾಳಿಯ ರುದ್ರಾವತಾರವನ್ನು ಏಕೆ ಧರಿಸುತ್ತಾಳೆ ಎಂಬುದರ ಜೊತೆಗೆ ಜಗನ್ಮಾತೆಯ ಮಹಿಮೆಯನ್ನು, ಪವಾಡಗಳನ್ನು ಈ ಧಾರಾವಾಹಿಯಲ್ಲಿ ತೋರಿಸಲಾಗುತ್ತದೆ ಎಂದು ವಾಹಿನಿ ತಿಳಿಸಿದೆ. ಶಿವನ ಪಾತ್ರವನ್ನು ಅರ್ಜುನ್ ರಮೇಶ್, ಪಾರ್ವತಿಯ ಪಾತ್ರವನ್ನು ಜೀವಿತಾ ವಸಿಷ್ಠ ನಿರ್ವಹಿಸುತ್ತಿದ್ದಾರೆ. ನಂದಿ ಮೂವೀಸ್ ನಿರ್ಮಾಣ ಸಂಸ್ಥೆಯು ಈ ಧಾರಾವಾಹಿಯನ್ನು ನಿರ್ಮಿಸುತ್ತಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯಲ್ಲಿ 121 ಜನರ ಸಾವಿಗೆ ಕಾರಣವಾದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ವಿಡಿಯೊ ತುಣುಕುಗಳನ್ನು ಜನರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಭಾರಿ ಸಂಖ್ಯೆಯಲ್ಲಿ ಸೇರಿರುವ ಜನರು ಒತ್ತೊತ್ತಾಗಿ ನಿಂತುಕೊಂಡು ಪರಸ್ಪರ ತಳ್ಳಿಕೊಂಡು ಮುಂದಕ್ಕೆ ಹೋಗುತ್ತಿರುವ ವಿಡಿಯೊ ದೃಶ್ಯಾವಳಿಗಳನ್ನು ಹಂಚಿಕೊಂಡು, ಹಾಥರಸ್‌ನಲ್ಲಿ ನಡೆದ ಘಟನೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಜುಲೈ 2ರಂದು ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು ಈ ವಿಡಿಯೊವನ್ನು ಹಂಚಿಕೊಂಡಿದ್ದರು. ಆದರೆ, ಈ ವಿಡಿಯೊ ಹಾಥರಸ್ ಕಾಲ್ತುಳಿತದ್ದಲ್ಲ.

ವಿಡಿಯೊದ ಮೂಲ ಪತ್ತೆಹಚ್ಚುವುದಕ್ಕಾಗಿ ಇನ್‌ವಿಡ್ ಟೂಲ್ ಬಳಸಿಕೊಂಡು ಶೋಧನಡೆಸಿದಾಗ, ಹಲವು ಪ್ರಮುಖ ಫ್ರೇಮ್‌ಗಳು ಕಂಡು ಬಂದವು. ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ, ಇದೇ ರೀತಿಯ ಮಾಹಿತಿ ನೀಡುವ ಹಲವು ವಿಡಿಯೊಗಳು ಕಂಡು ಬಂದವು. ಮತ್ತಷ್ಟು ಶೋಧಕ್ಕೆ ಒಳಪಡಿಸಿದಾಗ, ಎನ್‌ಡಿಟಿವಿ ಯುಟ್ಯೂಬ್ ಚಾನೆಲ್‌ನಲ್ಲಿ ಮಾರ್ಚ್ 17ರಂದು ಅಪ್‌ಲೋಡ್ ಮಾಡಿದ ವಿಡಿಯೊ ಸಿಕ್ಕಿತು. ಅದು ಮಥುರಾದಲ್ಲಿ ಹೋಳಿಗೂ ಮುನ್ನ ನಡೆದಿದ್ದ ಸಮಾರಂಭದಲ್ಲಿ ನಡೆದ ಕಾಲ್ತುಳಿತದ ಪ್ರಕರಣದ ವಿಡಿಯೊವಾಗಿತ್ತು. ಹಾಗಾಗಿ, ಹಾಥರಸ್‌ನಲ್ಲಿ ನಡೆದಿರುವುದು ಎಂದು ಹೇಳಿಕೊಂಡ ವಿಡಿಯೊ ತುಣುಕುಗಳು ಅಲ್ಲಿಯದ್ದಲ್ಲ. ಮಥುರಾದಲ್ಲಿ ನಡೆದಿದ್ದ ಕಾಲ್ತುಳಿತದ್ದು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ತಿಳಿಸಿದೆ.

ಗುಂಡಣ್ಣ

ಸೋಲು ಕಲಿಸುವ ಜೀವನ ಪಾಠ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

20 ಮಾರ್ಚ್ 2007: ಭಾರತೀಯ ಕ್ರಿಕೆಟ್‌ನ ಕರಾಳ ದಿನವಾಗಿತ್ತು. ತೆಂಡೂಲ್ಕರ್, ಗಂಗೂಲಿ, ಯುವರಾಜ್, ಸೆಹ್ವಾಗ್ ಮುಂತಾದ ದಿಗ್ಗಜ ಆಟಗಾರರಿದ್ದ ತಂಡದ ನಾಯಕರಾಗಿದ್ದ ರಾಹುಲ್ ದ್ರಾವಿಡ್ ಸೋತು ತಲೆತಗ್ಗಿಸಿದ್ದರು. ಕೆರೀಬಿಯನ್ ದ್ವೀಪಗಳಲ್ಲಿ ಆಯೋಜಿತವಾಗಿದ್ದ ಒಂದು ದಿನದ ಅಂತರರಾಷ್ಟ್ರೀಯ ಕ್ರಿಕೆಟ್ ವಿಶ್ವಕಪ್ ಸ್ಪರ್ಧೆಯಲ್ಲಿ ಭಾರತ ಗುಂಪು ಹಂತದಿಂದಲೇ ಹೊರಬಿದ್ದಿತ್ತು. ತಾನು ಸದಾ ಸೋಲಿಸುತ್ತಿದ್ದ ಬಾಂಗ್ಲಾ, ಶ್ರೀಲಂಕಾ ತಂಡಗಳೆದುರು ಹೀನಾಯವಾಗಿ ಸೋತು ಸೂಪರ್ ಎಂಟರ ಹಂತವನ್ನೂ ತಲುಪಲಾಗದ ಭಾರತ ತಂಡ ಹಾಗೂ ಅದರ ನಾಯಕ ರಾಹುಲ್ ದ್ರಾವಿಡ್ ಸಹಜವಾಗಿಯೇ ಅತ್ಯಂತ ಕಠೋರ ಟೀಕೆಯನ್ನು ಎದುರಿಸಬೇಕಾಯಿತು. ಕ್ರಿಕೆಟನ್ನು ಒಂದು ಧರ್ಮದಂತೆ ಆರಾಧಿಸುವ ನಮ್ಮ ದೇಶದ ಜನ ಗೆದ್ದಾಗ ಹೊಗಳಿ ಅಟ್ಟಕ್ಕೇರಿಸುತ್ತಾರೆ. ಸೋತಾಗ ಅತ್ಯಂತ ಕೀಳು ಮಟ್ಟದ ವೈಯಕ್ತಿಕ ಟೀಕೆಗೂ ಇಳಿಯುತ್ತಾರೆ.

29 ಜೂನ್ 2024: ಅದೇ ಕೆರೀಬಿಯನ್ ದ್ವೀಪ ಸಮೂಹ ವೆಸ್ಟ್ ಇಂಡೀಸ್‌ನ ಬಾರ್ಬಾಡೋಸ್‌ನಲ್ಲಿ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತವು ದಕ್ಷಿಣ ಆಫ್ರಿಕಾಕ್ಕೆ ಮುಖಾಮುಖಿಯಾಗಿ ನಿಂತಿತ್ತು. ಅಂದು ನಾಯಕರಾಗಿ ಸಾಧಿಸಲಾಗದನ್ನು ಇಂದು ತಾನು ತರಬೇತುದಾರನಾಗಿರುವ ತಂಡ ಸಾಧಿಸುತ್ತದೆ ಎನ್ನುವ ಆಶಾಭಾವನೆಯ ನೋಟದೊಂದಿಗೆ ಕುಳಿತಿದ್ದರು, ದ್ರಾವಿಡ್. ಇದಕ್ಕೂ ಮುಂಚೆ ಹಲವಾರು ಬಾರಿ ಐಸಿಸಿ ಟೂರ್ನಿಗಳಲ್ಲಿ ಫೈನಲ್‌ವರೆಗೂ ತಲುಪಿದ್ದ ಭಾರತ ಅಂತಿಮ ಗೆರೆ ದಾಟಲಾರದ ಅಳುಕು ಸಹಜವಾಗಿಯೇ ದ್ರಾವಿಡ್‌ರಲ್ಲಿತ್ತು. ಅತ್ಯಂತ ರೋಚಕವಾಗಿ ಸಾಗಿದ ಪಂದ್ಯ ಕೊನೆಯ ಓವರ್‌ನಲ್ಲಿ ಫಲಿತಾಂಶ ಕಂಡಿತು. ತಮ್ಮ ಕೊನೆಯ ಟಿ20 ಪಂದ್ಯ ಆಡುತ್ತಿರುವ ರೋಹಿತ್‌ರವರ ವಿಶೇಷ ನಾಯಕತ್ವದಿಂದ, ಕೊಹ್ಲಿಯ ತಾಳ್ಮೆಯ ಬ್ಯಾಟಿಂಗ್‌ನಿಂದ, ಡೆತ್ ಓವರ್‌ಗಳಲ್ಲಿ ಬೂಮ್ರಾ, ಅರ್ಷದೀಪ್, ಪಾಂಡ್ಯ ಮುಂತಾದ ಹೊಸ ಹುಡುಗರ ಚೇತೋಹಾರಿ ಬೌಲಿಂಗ್‌ನಿಂದ, ಸೂರ್ಯಕುಮಾರ್ ಯಾದವ್ ಹಿಡಿದ ಅದ್ಭುತ ಕ್ಯಾಚ್‌ನಿಂದ, ಭಾರತ ಅತ್ಯಂತ ರೋಮಾಂಚನಕಾರಿಯಾಗಿ ಗೆಲುವು ಸಾಧಿಸಿತು.

ಕೋಚ್ ಆಗಿ ತನ್ನ ಕಟ್ಟಕಡೆಯ ಪಂದ್ಯದಲ್ಲಿ ತಂಡವನ್ನು ಗೆಲ್ಲಿಸಿಕೊಟ್ಟ ಅದಮ್ಯ ತೃಪ್ತಿ ದ್ರಾವಿಡ್ ಮುಖದಲ್ಲಿತ್ತು. ಟ್ರೋಫಿ ಹಿಡಿದು ಅವರು ಮಕ್ಕಳಂತೆ ಸಂಭ್ರಮಿಸಿದ ರೀತಿಯಂತೂ ಅತ್ಯಂತ ವಿಶಿಷ್ಟವಾಗಿತ್ತು.

ಇಲ್ಲಿ ಕಲಿಯಬೇಕಾದ ಜೀವನದ ಅತಿ ದೊಡ್ಡ ಪಾಠವಿದೆ. ಸೋಲು ಕಲಿಸಿದಷ್ಟು ಪಾಠವನ್ನು ಗೆಲುವು ಕಲಿಸುವುದಿಲ್ಲ. ಒಂದು ಹಂತದಲ್ಲಿ ನಾವು ಸೋತಿರಬಹುದು ಆದರೆ ಬೇರೆ ಸ್ವರೂಪದಲ್ಲಿ ಗೆಲುವನ್ನು ಮತ್ತೆ ಕಾಣಬಹುದು. ಸೋಲು ನಮ್ಮನ್ನು ವಿನಯಶೀಲರನ್ನಾಗಿಸುತ್ತದೆ, ಎಲ್ಲಿ ಎಡವಿದ್ದೇವೆ ಎನ್ನುವುದರ ಆತ್ಮಾವಲೋಕನಕ್ಕೆ ಎಡೆ ಮಾಡಿಕೊಡುತ್ತದೆ. ಹೆಚ್ಚಿನ ಪರಿಶ್ರಮಕ್ಕೆ ನಮ್ಮನ್ನು ನಾವು ಒಡ್ಡಿಕೊಳ್ಳುವಂತೆ ಮಾಡುತ್ತದೆ. ಅದೇ ಗೆಲುವು ಸೃಷ್ಟಿಸುವ ಅಹಂಕಾರ ಮತ್ತೆ ನಮ್ಮನ್ನು ಸೋಲಿನೆಡೆಗೆ ತಳ್ಳುವ ಎಲ್ಲ ಅಪಾಯ ಇರುತ್ತದೆ. ನಾಯಕನಾಗಿ ತಾನು ಸಾಧಿಸಲಾಗದನ್ನು 17 ವರ್ಷಗಳ ನಂತರ ತರಬೇತುದಾರನಾಗಿ ಸಾಧಿಸಿದ ದ್ರಾವಿಡ್ ನಮ್ಮೆಲ್ಲರಿಗೂ ಸ್ಫೂರ್ತಿಯ ಮಾದರಿಯಾಗುತ್ತಾರೆ, ನಿರಂತರವಾದ ಪರಿಶ್ರಮವಿದ್ದರೆ ಸಾಧನೆಗೆ ವಯಸ್ಸು ಮಿತಿಯಲ್ಲ ಎಂಬುದನ್ನು ಸಾರಿ ಹೇಳುತ್ತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ತೃತೀಯ ಅಹೋರಾತ್ರ ನಕ್ಷತ್ರ: ಪುಷ್ಯ ಗಂ. 06-03 ಯೋಗ: ವಜ್ರ ಗಂ. 26-06 ಕರಣ: ತೈತಿಲ ಗಂ. 17-30, ಮಿಥುನ ಮಾಸದ 23 ನೇ ದಿನ, ಮಳೆನಕ್ಷತ್ರ: ಪುನರ್ವಸು 1.
ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 01 ಮೊಹರಮ್
ದಿನ ಭವಿಷ್ಯ : ಇಸ್ಲಾಮಿಕ್ ಹೊಸ ವರ್ಷ ದಿನ
ಅದೃಷ್ಟ ಸಂಖ್ಯೆ : 9, 3

ಮೇಷ: ಬದುಕಿನಲ್ಲಿ ನಡೆದ ಅತ್ಯಂತ ಮುಖ್ಯಘಟ್ಟವನ್ನು ಕಾರಣಾಂತರದಿಂದ ಸ್ಮರಣೆ ಮಾಡುವಿರಿ. ಎಂಥ ಸಂದರ್ಭದಲ್ಲೂ ಒತ್ತಡಕ್ಕೆ ಸಿಲುಕದೆ ಕಾರ್ಯನಿರ್ವಹಿಸುವ ವೈಖರಿಯಿಂದ ಗುರುತಿಸಲ್ಪಡುವಿರಿ.

ವೃಷಭ: ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗಿಲ್ಲ. ಅನವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಅತಿಯಾದ ಖರ್ಚುವೆಚ್ಚಗಳು ತಗ್ಗುವುದು.

ಮಿಥುನ: ನೂತನ ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ. ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ಆರೋಗ್ಯದ ಬಗ್ಗೆ ನಿಗಾ ವಹಿಸಿ.

ಕರ್ಕಾಟಕ: ಆರೋಪದ ಮಾತುಗಳು ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ಎಂಬುದಕ್ಕೆ ಜೀವನ ಸಾಕ್ಷಿಯಾಗಲಿದೆ. ಲಕ್ಷ್ಯಗೊಟ್ಟು ಕೇಳಿದ ವಿಷಯಗಳು ಕ್ಲಿಪ್ತ ಸಮಯದಲ್ಲಿ ಪ್ರಯೋಜನಕ್ಕೆ ಬರಲಿದೆ.

ಸಿಂಹ: ಹೆಚ್ಚಿನ ಶ್ರಮವಹಿಸಿ ಕೆಲಸ ನಿರ್ವಹಿಸಿದ ಕಾರಣದಿಂದಾಗಿ ದೇಹಾಯಾಸವು ಅಧಿಕವಾಗಿ ಕಾಡುವುದು. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಅಧಿಕಾರ ಪಡೆದುಕೊಳ್ಳುವಿರಿ. ಪರಿವರ್ತನೆ ಬಾಳಲ್ಲಿ ಬರಲಿದೆ.

ಕನ್ಯಾ: ಕೈಗೊಂಡ ಕೆಲಸಗಳ ಬಗೆಗೆ ಮುತುವರ್ಜಿ ವಹಿಸುವುದರಿಂದ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕೆಲಸ ಪೂರ್ಣಗೊಳ್ಳುವುದು. ಸರ್ಕಾರಿ ನೌಕರರಿಗೆ ವರ್ಗಾವಣೆಯ ಯೋಗವಿದೆ. ಶುಭ ಸುದ್ದಿ ಕೇಳುವಿರಿ.

ತುಲಾ: ಸೂಕ್ತ ಸಮಯದಲ್ಲಿ ಕೆಲಸಗಳನ್ನು ಮಾಡಿಕೊಳ್ಳದೆ ಕಡೆ ಗಳಿಗೆಯಲ್ಲಿ ಕಷ್ಟಪಡುವಿರಿ. ನೂತನ ವಸ್ತ್ರವನ್ನು ಇತರರಿಗೆ ಕೊಡುವಂಥ ದೃಷ್ಟಿಯಿಂದ ಕೊಂಡುಕೊಳ್ಳುವಿರಿ. ಪರಿಶ್ರಮಕ್ಕೆ ತಕ್ಕ ಯಶಸ್ಸು ಕಾಣುವಿರಿ.

ವೃಶ್ಚಿಕ: ಬಹುದಿನದಿಂದ ಮುಂದೂಡಲ್ಪಟ್ಟಿದ್ದ ದೂರದ ಪ್ರಯಾಣ ಅನಿವಾರ್ಯತೆಯ ಸನ್ನಿವೇಷದಿಂದ ಕೈಗೊಳ್ಳಬೇಕಾಗುತ್ತದೆ. ಶುಭ್ರವಾದಂತಹ ಉಡುಗೆ ತೊಡುಗೆಗಳು ನಿಮ್ಮ ಸ್ಥಾನಮಾನವನ್ನು ಹೆಚ್ಚಿಸುತ್ತದೆ.

ಧನು: ತಾರುಣ್ಯದಲ್ಲಿದ್ದಾಗ ಮಾಡಿದ ಬುದ್ಧಿವಂತಿಕೆಯ ಕೆಲಸವು ವೃದ್ಧಾಪ್ಯದಲ್ಲಿ ಅನುಕೂಲವಾಗಲಿದೆ. ದೊಡ್ಡದಾದ ಧಾರ್ಮಿಕ ಕಾರ್ಯಕ್ರಮದಲ್ಲಿ ನಿಭಾಯಿಸಿದ ಪಾತ್ರ ನಿಮ್ಮನ್ನು ಸಂತೃಪ್ತರನ್ನಾಗಿಸುತ್ತದೆ.

ಮಕರ: ಲೋಹದ ಕಾರ್ಖಾನೆಯವರು, ಚಿನ್ನಾಭರಣ ವ್ಯಾಪಾರಿಗಳು ಉದ್ಯೋಗದಲ್ಲಿ ಅಧಿಕ ಲಾಭ ಹೊಂದುವಿರಿ. ಕೋಪ ಶಮನ ಮಾಡಿಕೊಳ್ಳಲು ಸಾಧ್ಯವಿಲ್ಲದಂತಾಗುವುದು. ಜಗದ್ಗುರು ಸೇವೆಯಿಂದ ಅಭೀಷ್ಟಸಿದ್ಧಿ.

ಕುಂಭ: ಕಷ್ಟಗಳನ್ನು ಎದುರಿಸುವಂಥ ಶಕ್ತಿಯು ನಿಮಗಿಂತ ಕಷ್ಟಪಡುತ್ತಿರುವಂಥ ವ್ಯಕ್ತಿಗಳನ್ನು ನೋಡಿ ಪಡೆದು ಕೊಳ್ಳುವಿರಿ. ಚರ ಆಸ್ತಿಯನ್ನು ಮಾರಾಟ ಮಾಡಿದರೆ ನಷ್ಟ ಸಂಭವಿಸುವುದು. ವೃತ್ತಿಯಲ್ಲಿ ಪೈಪೋಟಿ ಇರಲಿದೆ.

ಮೀನ: ಮುಜುಗರದ ತೆರೆಗಳನ್ನು ದಾಟಿ ಮನೋಭಿಲಾಷೆಯಂತೆ ಪತಿಯ ಗೃಹದಲ್ಲಿಯು ಜೀವನವನ್ನು ಪ್ರಾರಂಭಿಸುವಿರಿ. ಒಳ ಮನಸ್ಸಿಗೆ ಗೋಚರಿಸಿದ ಅವಘಡವು ನಿಜವಾಗುವ ಸಂಭವವಿದೆ.

ಪದಬಂಧ 5735

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕರದಲ್ಲಿಟ್ಟುಕೊಂಡಿರುವ ಸಲಕರಣೆ (4)
3.ವಂಚಕ ಇಲ್ಲಿದ್ದಾನೆ (4)
5.ಮುಂದುಗಡೆಯೇ ಪ್ರತ್ಯಕ್ಷ! (3)
7.ಗುರಾಣಿ ಹಿಡಿದಿರುವ ಅರಸಿ (2)
8.ನಿಧಾನ ಎಂದು ಹೀಗೆನ್ನಿ (2)
10.ಖನಿಜ ದ್ರವ್ಯ ಇಲ್ಲಿದೆ (3)
11.ಮೂಗಿನಿಂದ ಸುರಿಯುವ ಶ್ಲೇಷ್ಮ (3)
13. ದಾಖಲೆಗಳಲ್ಲಿ ಗಮನಿಸ ಬೇಕೆಂದು ಸೇರಿಸುವ ವಿಶೇಷ ಅಂಶ (2)
15.ಬೀಜ ಬಿತ್ತಲು ಮಾಡಿರುವ ಮಡಿ (2)
16.ಕಾಠಿಣ್ಯಕ್ಕೊಂದು ಪರ್ಯಾಯ ಪದ (3)
18.ರತ್ನಖಚಿತ ವಸ್ತು (4)
19.ಇನ್ನೂ ಮರಿ, ಈ ಹೆಣ್ಣು ದುಂಬಿ! (4)

ಮೇಲಿಂದ ಕೆಳಕ್ಕೆ
1.ಈತ ಸೋಲಿಸಲ್ಪಟ್ಟವನು (4)
2.ರಭಸದಲ್ಲಿ ಹರಿದ ದ್ರವ (2)
3.ಮುಕ್ತಿ ಅಥವಾ ಬಿಡುಗಡೆ (2)
4.ಮಣಿ ಧರಿಸಿದ ಚಲುವೆ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
7.ಮುಚ್ಚುಮರೆಯಿಲ್ಲದ ಬಹಿರಂಗ ವ್ಯವಹಾರ (4)
9.ನಡುವಿರುವ ಕಾಯಿಯ ದರೋಡೆ! (4)
12.ಬಡವನ ಮನೆ ಮುಂದಿರುವ ಕೊಚ್ಚೆ (3)
14.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
15.ಈತ ತಿಳುವಳಿಕೆ ಇಲ್ಲದವನು (3)
16.ಗಡಿಬಿಡಿಯಿಂದ ಪ್ರವೇಶಿರುವ ಎಲ್ಲೆ (2)
17.ಪುಷ್ಪ ಇಲ್ಲಿ ಕಾಣುತ್ತಿದೆ (2)

5734ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅಕ್ಷ 3.ಶಾಪ 5.ಪಳಿಯುಳಿಕೆ 6.ಗಡವ 7.ಪಾರ್ಥಿವ 8.ಸಾರ್ವಜನಿಕ 9.ಸಂಧಾನ 10.ಪ್ರಪಾತ 13.ಸೋದಾಹರಣ 14.ನಿಷ್ಠೆ 15.ಕಾಲು

ಮೇಲಿಂದ ಕೆಳಕ್ಕೆ
1.ಅನುರಾಗ 2.ಆಯುಧ 4.ಪರಾಭವ 5.ಪರ್ಯವಸಾನ 7.ಪಾಕಪ್ರವೀಣ 9.ಸಂಜೀವಿನಿ 11.ತಡಸಲು 12.ಕುಹಕಿ

ಸುಡೊಕು 6120

	3		9		2	1		6
1		6					8	
	8	2		6			4	5
7								
	5		7	1		2		8
4					6			7
2		5		7			6	
	6					8		
8		1	6		3		2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6119 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಾರಾಟ; ಮುಡಾಗೇ ವಂಚನೆ

ಮುಡಾ ಸದಸ್ಯರಿಂದಲೇ 'ಅಕ್ರಮ'

• ಆರ್. ಜಿತೇಂದ್ರ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಮುನ್ನಡೆಸಲು ಇರುವ ಸಮಿತಿಯ ಸದಸ್ಯರೇ 'ಅಕ್ರಮ' ನಡೆಸಿ ವಂಚಿಸಿದ ಬಗ್ಗೆ ದೂರುಗಳು ದಾಖಲಾಗಿವೆ.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮುಡಾ ಸಮಿತಿ ಸದಸ್ಯರೂ ಹೌದು. ಮೈಸೂರು ತಾಲ್ಲೂಕಿನ ಕಸಬಾ ಹೋಬಳಿಯ ಶ್ರೀರಾಂಪುರದಲ್ಲಿ ಭವ್ಯ ಭಾರತ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಯು 2001ರಲ್ಲಿ ವಸತಿ ಬಡಾವಣೆ ನಿರ್ಮಿಸಿದ್ದು, ಮಂಜೇಗೌಡ ಈ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ. ಈ ಬಡಾವಣೆಯಲ್ಲಿ ಉದ್ಯಾನಕ್ಕೆ ನಿಗದಿಪಡಿಸಿದ ಸ್ಥಳವನ್ನು ಸುಳ್ಳು ದಾಖಲೆ ಸೃಷ್ಟಿಸಿ ನಿವೇಶನಗಳನ್ನಾಗಿ ಮಾರಾಟ ಮಾಡಿದ ಆರೋಪ ಸೊಸೈಟಿಯ ಮೇಲಿದೆ. ಈ ಕುರಿತು ಆರ್‌ಟಿಐ ಕಾರ್ಯಕರ್ತ ಎನ್. ಗಂಗರಾಜು 2024ರ ಫೆ.28ರಂದು ಮುಡಾ ಆಯುಕ್ತರಿಗೆ ದೂರು ಸಲ್ಲಿಸಿದ್ದು, ಕ್ರಮಕ್ಕೆ ಒತ್ತಾಯಿಸಿದ್ದರು. ಆ ಪ್ರತಿ 'ಪ್ರಜಾವಾಣಿ' ಲಭ್ಯವಾಗಿದೆ.

ಏನಿದೆ ದೂರಿನಲ್ಲಿ?: 'ಶ್ರೀರಾಂಪುರ ಗ್ರಾಮದ ಸರ್ವೆ ಸಂಖ್ಯೆ 18/2, 19/2, 52/1, 2ರಲ್ಲಿ ಭವ್ಯ ಭಾರತ ಸೊಸೈಟಿಯು ವಸತಿ ಬಡಾವಣೆ ರಚಿಸಿದೆ. ಈ ಬಡಾವಣೆಯ ನಕ್ಷೆಗೆ ಪ್ರಾಧಿಕಾರವು 2001ರ ಆ. 8ರಂದು ನಕ್ಷೆ ಅನುಮೋದನೆ ನೀಡಿದೆ. ಆ ನಕ್ಷೆಯಲ್ಲಿ ಒಟ್ಟು ಬಡಾವಣೆಯ ಶೇ 50ರಷ್ಟು ಭೂಮಿಯನ್ನು ಸಿ.ಎ. ನಿವೇಶನ, ಉದ್ಯಾನ ಹಾಗೂ ರಸ್ತೆಗಾಗಿ ನಿಗದಿಪಡಿಸಲಾಗಿದೆ. ಉದ್ಯಾನದ ಜಾಗವನ್ನು ಸೊಸೈಟಿಯು ಮುಡಾಕ್ಕೆ ನೋಂದಣಿ ಮಾಡಿಕೊಟ್ಟಿದೆ. ಆದರೆ, ನಂತರ ನಕಲಿ ದಾಖಲೆಗಳನ್ನು ಸೃಷ್ಟಿಸಿ ಇದೇ ಉದ್ಯಾನದ ಜಾಗವನ್ನು '58ಎಯಿಂದ ಎಚ್'ವರೆಗೆ ಎಂಟು ನಿವೇಶನಗಳನ್ನಾಗಿ ಮಾಡಿ ನೋಂದಣಿ ಪತ್ರದ ಮೂಲಕ ಅನ್ಯರಿಗೆ ನೋಂದಣಿ ಮಾಡಿಕೊಡಲಾಗಿದೆ. ಹೀಗೆ ಅಕ್ರಮವಾಗಿ ನೋಂದಣಿ ಆಗಿರುವ ಎಲ್ಲ ನಿವೇಶನಗಳ ದಾಖಲೆಗಳನ್ನು ರದ್ದುಪಡಿಸಬೇಕು. ಜಾಗವನ್ನು ಮುಡಾ ವಶಕ್ಕೆ ಪಡೆಯಬೇಕು. ಆ ಬಡಾವಣೆಯಲ್ಲಿನ ಎಲ್ಲ ನಿವೇಶನಗಳ ಹಕ್ಕು ಬದಲಾವಣೆ ಆಗದಂತೆ ನೋಡಿಕೊಳ್ಳಬೇಕು' ಎಂಬುದು ದೂರಿನಲ್ಲಿದೆ.

'ಉದ್ಯಾನದ ಜಾಗದಲ್ಲಿ ತಲಾ 40X60 ಚ.ಅಡಿ ಅಳತೆಯ 8 ನಿವೇಶನಗಳನ್ನು ನಕಲಿ ದಾಖಲೆ ಮೂಲಕ ನೋಂದಣಿ ಮಾಡಿಕೊಟ್ಟಿದ್ದಾರೆ. ಸದ್ಯ ಮಾರುಕಟ್ಟೆಯಲ್ಲಿ ಇವುಗಳ ಮೌಲ್ಯ ಕೋಟ್ಯಂತರ ರೂಪಾಯಿಗಳಷ್ಟಿದೆ. ಜನಪ್ರತಿನಿಧಿಯಾಗಿ ಮುಡಾಕ್ಕೆ ವಂಚಿಸಿದ್ದಾರೆ. ಮಂಜೇಗೌಡರ ವಿರುದ್ಧ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದು, ಪ್ರಕರಣವು ಸದ್ಯದಲ್ಲೇ ವಿಚಾರಣೆಗೆ ಬರಲಿದೆ' ಎಂದು ದೂರುದಾರ ಎನ್. ಗಂಗರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಇನ್ನಷ್ಟು ಹೆಸರು?: ಮುಡಾ 'ಫಲಾನುಭವಿ' ಪಟ್ಟಿಯಲ್ಲಿ ಮೂರೂ ಪಕ್ಷಗಳ ಕೆಲವು ಜನಪ್ರತಿನಿಧಿಗಳು ಹಾಗೂ ಮುಖಂಡರ ಹೆಸರು ಹರಿದಾಡುತ್ತಿದೆ. ಪ್ರಭಾವಿಗಳು ತಮ್ಮ ಆಪ್ತರಿಗೆ ಶೇ 50:50, ಸೆಟ್ಲ್‌ಮೆಂಟ್ ಡೀಡ್ ಮೊದಲಾದ ರೂಪದಲ್ಲಿ ನಿವೇಶನ ಕೊಡಿಸಲು ಪ್ರಭಾವ ಬೀರಿದ್ದಾರೆ ಎನ್ನಲಾಗಿದೆ.

ಪ್ರತಿಕ್ರಿಯೆಗೆ ಮಂಜೇಗೌಡ ಅವರು ಕರೆ ಸ್ವೀಕರಿಸಲಿಲ್ಲ, ಸಂದೇಶಕ್ಕೂ ಪ್ರತಿಕ್ರಿಯಿಸಲಿಲ್ಲ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ

ಮುಡಾ ಸಮಿತಿ ರದ್ದು ಚಿಂತನೆ: ಮಹದೇವಪ್ಪ

'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಹಾಲಿ ಇರುವ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರದ್ದುಪಡಿಸಲು ಚಿಂತನೆ ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪೂರಕವಾಗಿ ಸ್ಪಂದಿಸಿದ್ದಾರೆ' ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ತಿಳಿಸಿದರು.

'ಮುಡಾದ ಈಗಿನ ಸಮಿತಿಯಲ್ಲಿ 13ಕ್ಕೂ ಹೆಚ್ಚು ಜನಪ್ರತಿನಿಧಿಗಳ ಜೊತೆಗೆ ಅಧಿಕಾರಿಗಳೂ ಇದ್ದಾರೆ. ಹೆಚ್ಚು ಜನರ ಬದಲಿಗೆ ಈ ಹಿಂದೆ ಇದ್ದಂತೆ 3–4 ಜನರ ಸಮಿತಿಯಷ್ಟೇ ಇರಲಿ ಎಂದು ಸಲಹೆ ನೀಡಿದ್ದೇನೆ' ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಮುಡಾದಲ್ಲಿ ಶೇ 50-50 ಅನುಪಾತದಲ್ಲಿ ಬದಲಿ ನಿವೇಶನ ಪಡೆದವರ ಪಟ್ಟಿ ಬಿಡುಗಡೆ ಮಾಡಲಾಗುವುದು. ಯಾವ ಪಕ್ಷದವರೇ ಇರಲಿ, ಅಧಿಕಾರಿ ಇರಲಿ, ಪ್ರಭಾವಿ ಇರಲಿ. ಅವರ ಪಟ್ಟಿಯನ್ನು ಸಾರ್ವಜನಿಕರಿಗೆ ತಿಳಿಯುವಂತೆ ಜಾಹೀರಾತು ಮೂಲಕ ಬಹಿರಂಗಪಡಿಸಲಾಗುವುದು' ಎಂದರು.

'ಕೆಸರೆ ಗ್ರಾಮದ ಸರ್ವೆ ನಂ.464ರ 3 ಎಕರೆ 16 ಗುಂಟೆ ಜಮೀನನ್ನು 1985ರಲ್ಲಿ ಜವರ ಎಂಬುವರು ಜಿಲ್ಲಾಧಿಕಾರಿಯಿಂದ ಹರಾಜಿನಲ್ಲಿ ₹100ಕ್ಕೆ ಖರೀದಿಸಿದ್ದಾರೆ. ನಂತರದಲ್ಲಿ ಈ ಜಮೀನು ಸಿದ್ದರಾಮಯ್ಯ ಅವರ ಬಾಮೈದ ಮಲ್ಲಿಕಾರ್ಜುನ ಅವರಿಗೆ ಹಾಗೂ ಅವರಿಂದ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ವರ್ಗಾವಣೆ ಆಗಿದೆ. ಹೀಗಾಗಿ ಇದು ದಲಿತ ಸಮುದಾಯಕ್ಕೆ ಸರ್ಕಾರ ನೀಡಿದ 'ಗ್ರ್ಯಾಂಟ್ ಲ್ಯಾಂಡ್' ಅಲ್ಲ. ಪಿಟಿಸಿಎಲ್ ಕಾಯ್ದೆ ಅಡಿ ಬರುವುದಿಲ್ಲ' ಎಂದು ಸ್ಪಷ್ಟನೆ ನೀಡಿದರು. ಪಾರ್ವತಿ ಅವರಿಗೆ ವಿಜಯನಗರದಲ್ಲಿ ನಿವೇಶನ ನೀಡಿರುವುದನ್ನು ಸಮರ್ಥಿಸಿಕೊಂಡರು.

ಪತ್ರಕರ್ತರ ಮೇಲೆ ಸಿಟ್ಟು: 'ಮುಡಾ ಅಕ್ರಮವನ್ನು ಸಿಬಿಐಗೆ ವಹಿಸಬೇಕು' ಎಂಬ ಪತ್ರಕರ್ತರ ಪ್ರಶ್ನೆಗೆ ಸಿಟ್ಟಾದ ಮಹದೇವಪ್ಪ, 'ಇಲಿ ಹೋಯಿತು ಎಂದರೂ ಸಿಬಿಐಗೆ ಹಾಕಿ, ಕೋತಿ ಹೋಯಿತು ಎಂದರೂ ಸಿಬಿಐಗೆ ಹಾಕಿ ಅಂತ ಹೇಳುವುದೇಕೆ? ನಮ್ಮ ನೆಲದ ಪೊಲೀಸರ ಮೇಲೆ ನಂಬಿಕೆ ಇಲ್ಲವೇ' ಎಂದು ಮರು ಪ್ರಶ್ನಿಸಿದರು.

'ಬಿಜೆಪಿಯವರಿಗೆ ಏಕಾಏಕಿ ಸಿಬಿಐ ಮೇಲೆ ಪ್ರೀತಿ ಬಂದಿದೆ. ಅವರು ಅಧಿಕಾರದಲ್ಲಿದ್ದಾಗ ಎಷ್ಟು ಪ್ರಕರಣವನ್ನು ಸಿಬಿಐಗೆ ಕೊಟ್ಟಿದ್ದರು?' ಎಂದು ಕೇಳಿದರು.

ಅನುಕೂಲಕ್ಕೆ ತಕ್ಕಂತೆ 'ಸರ್ಕಾರಿ ಸ್ಕೀಂ' ಬಳಕೆ: ಬೊಮ್ಮಾಯಿ ಆರೋಪ

ಗದಗ: 'ಮುಡಾ ನಿವೇಶನ ಹಂಚಿಕೆ ವಿಚಾರದಲ್ಲಿ ಯಾವುದೇ ತಪ್ಪುಗಳು ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ತಪ್ಪು ಮಾಡಿಲ್ಲ ಎಂದಾದರೆ ಈ ಪ್ರಕರಣವನ್ನು ಸಿಬಿಐ ಅಥವಾ ಒಬ್ಬರು ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಆಗ ಸತ್ಯ ಹೊರಬರಲಿದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು, 'ಸರ್ಕಾರದಲ್ಲಿ ಸಾಕಷ್ಟು ಸ್ಕೀಂಗಳು (ಯೋಜನೆ) ಇರುತ್ತವೆ. ಜಮೀನು ಪಡೆದುಕೊಳ್ಳಲು ಬೇರೆ ಬೇರೆ ಸರ್ಕಾರದಲ್ಲಿ ಬೇರೆ ಬೇರೆ ಸ್ಕೀಂಗಳು ಇರುತ್ತವೆ. ಅದನ್ನು ನ್ಯಾಯಸಮ್ಮತವಾಗಿ ಪಡೆದುಕೊಳ್ಳಲು ನಮ್ಮ ತಕರಾರಿಲ್ಲ. ಆದರೆ, ಈ ಪ್ರಕರಣದಲ್ಲಿ ಈ ಯೋಜನೆ ದುರುಪಯೋಗ ಮಾಡಿಕೊಂಡಿರುವ ಅಂಶ ಇದೆ. ಅದನ್ನು ತಮಗೆ ಹೇಗೆ ಬೇಕೋ ಆ ರೀತಿ ಬದಲಾವಣೆ ಮಾಡಿಕೊಳ್ಳಲಾಗಿದೆಯೋ ಇಲ್ಲವೋ ಎಂಬುದು ತನಿಖೆಯಿಂದ ಹೊರಬರಬೇಕಿದೆ' ಎಂದರು.

ಶಾಸಕರ ಫೈಲ್‌ಗಳೇ ಹೆಚ್ಚು– ಎಸ್‌ಟಿಎಸ್

'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆಯುತ್ತಿದ್ದ ಪ್ರತಿ ಸಭೆಯಲ್ಲೂ ಆಗಿನ ಸ್ಥಳೀಯ ಶಾಸಕರ ಫೈಲ್‌ಗಳೇ ಇರುತ್ತಿದ್ದವು ಹಾಗೂ ಚರ್ಚೆಯಾಗದೆ ಪಾಸ್ ಆಗುತ್ತಿದ್ದವು' ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದ ಹಾಲಿ ಶಾಸಕ ಎಸ್‌.ಟಿ. ಸೋಮಶೇಖರ್ ತಿಳಿಸಿದರು.

ಸಿ.ಎನ್. ಮಂಜೇಗೌಡ ಅಧ್ಯಕ್ಷರಾಗಿರುವ ಸೊಸೈಟಿಯು ಉದ್ಯಾನ ಜಾಗವನ್ನು ನಕಲಿ ದಾಖಲೆ ಸೃಷ್ಟಿಸಿ ನಿವೇಶನಗಳನ್ನಾಗಿ ಮಾರಿದೆ. ಖಾಸಗಿ ದೂರು ದಾಖಲಿಸಿದ್ದೇನೆ
ಎನ್. ಗಂಗರಾಜು, ದೂರುದಾರ

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಮುಡಾ ಸಭೆಯ ಬಹುತೇಕ ವಿಷಯಗಳು ಶಾಸಕರಿಗೆ ಸೇರಿದವೇ ಆಗಿರುತ್ತಿದ್ದವು. ಈ ಮಟ್ಟಕ್ಕೆ ಇಲ್ಲಿನ ಶಾಸಕರು ಲಾಬಿ ಮಾಡುತ್ತಾರೆ. ಮುಡಾ ಸದಸ್ಯರಾಗಲು ಬೇರೆ ಜಿಲ್ಲೆಯ ವಿಧಾನಪರಿಷತ್ ಸದಸ್ಯರು ವಾಸ ಸ್ಥಳವನ್ನು ಮೈಸೂರು ಎಂದು ತೋರಿಸುತ್ತಾರೆ' ಎಂದು ದೂರಿದರು.

'ನನ್ನ ಹೆಸರಿನಲ್ಲಿ ಅಥವಾ ಬೇನಾಮಿ ಹೆಸರಿನಲ್ಲಿ ಮುಡಾದಲ್ಲಿ ಒಂದೇ ಒಂದು ನಿವೇಶನ ಪಡೆದಿದ್ದರೆ ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ. ನಾನು ನಿವೇಶನ ತೆಗದುಕೊಂಡಿಲ್ಲ. ಒತ್ತಡ ಹೇರಿ ಯಾರಿಗೂ ಕೊಡಿಸಿಲ್ಲ. ಈ ವಿಚಾರದಲ್ಲಿ ಅನಗತ್ಯವಾಗಿ ನನ್ನ ಹೆಸರು ತರಬೇಡಿ' ಎಂದರು.

'ನಾನು ಜಿಲ್ಲಾ ಉಸ್ತುವಾರಿ ಸಚಿವ ಆಗಿದ್ದಾಗ, ಮುಡಾದಲ್ಲಿನ ಅಕ್ರಮ ಗಮನಕ್ಕೆ ಬಂದಿತ್ತು. ಆಗಿನ ಆಯುಕ್ತರು ಸಭೆ ಮಾಡದೆ ನಿವೇಶನಗಳನ್ನು ಕೊಟ್ಟಿದ್ದಾರೆ. ಶೇ 50:50 ಅನುಪಾತದಡಿ ಕೊಡುವಾಗ ಸಭೆಗೆ ತಂದು ಚರ್ಚಿಸಬೇಕಿತ್ತು. ಇದ್ಯಾವ ನಿಯಮಗಳನ್ನೂ ಅನುಸರಿಸಿಲ್ಲ. ಆದ್ದರಿಂದ ಆಯುಕ್ತರನ್ನು ಬದಲಾಯಿಸುವಂತೆ ಸರ್ಕಾರಕ್ಕೆ ಹೇಳಿದ್ದೆ. ಆದರೆ, ಜಾತಿ ಪ್ರಭಾವದಿಂದ ಉಳಿದುಬಿಟ್ಟರು. ಆಗಲೇ ಸರಿಯಾದ ಕ್ರಮ ಆಗಿದ್ದರೆ ಈಗ ಇಷ್ಟು ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಯುತ್ತಿರಲಿವೇನೋ' ಎಂದರು. 'ಈಗಲಾದರೂ ಸಮರ್ಪಕ ತನಿಖೆ ನಡೆದು ವ್ಯವಸ್ಥೆ ಬದಲಾಗಲಿ' ಎಂದು ಆಶಿಸಿದರು.

'ಮದ್ಯ' ಸಮಾರಾಧನೆ

ಒಂದನೇ ಪುಟದಿಂದ...

ಪಟ್ಟಣದ ಚೌಡೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಸಂಸದ ಡಾ. ಸುಧಾಕರ್ ಅವರನ್ನು ತೆರೆದ ವಾಹನದಲ್ಲಿ ಮತ್ತು ಬೈಕ್ ರ‍್ಯಾಲಿ ಮೂಲಕ ಬಾವಿಕೆರೆಯ ಮೈದಾನಕ್ಕೆ ಕರೆತರಲಾಯಿತು. ಅಲ್ಲಿ ಅಭಿನಂದನಾ ಕಾರ್ಯಕ್ರಮ ನಡೆದ ಬಳಿಕ ಮದ್ಯ ಹಂಚಿಕೆ, ಬಾಡೂಟ ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಜಗದೀಶ್ ಚೌಧರಿ, ಜೆಡಿಎಸ್ ಮಾಜಿ ಶಾಸಕ ಡಾ.ಕೆ. ಶ್ರೀನಿವಾಸಮೂರ್ತಿ ಈ ಕಾರ್ಯಕ್ರಮ ಆಯೋಜಿಸಿದ್ದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಬಿಜೆಪಿ, ಜೆಡಿಎಸ್‌ನ ಹಲವು ನಾಯಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮದ್ಯದ ಬಾಟಲಿಗಾಗಿ ಜನರು ಮುಗಿಬಿದ್ದಾಗ ನೂಕುನುಗ್ಗಲು ಉಂಟಾಗುವುದನ್ನು ತಡೆಯಲು ಬ್ಯಾರಿಕೇಡ್ ಅಳವಡಿಸಲಾಗಿತ್ತು. ಬಿಯರ್ ಪ್ರಿಯರಿಗೆ ಬಾಟಲಿಗಟ್ಟಲೆ ಬಿಯರ್ ನೀಡಿದರೆ, ವಿಸ್ಕಿ, ಬ್ರಾಂದಿ ಕುಡಿಯುವವರಿಗೆ ಮದ್ಯದ ಟೆಟ್ರಾ ಪ್ಯಾಕ್ ಜತೆ ಒಂದು ಲೋಟ ನೀರನ್ನೂ ವಿತರಿಸಲಾಯಿತು. ಎರಡು ಪ್ಯಾಕ್ ಕೇಳಿದವರನ್ನು ಬೌನ್ಸರ್‌ಗಳು ದಬಾಯಿಸಿ ಕಳುಹಿಸಿದರು. ಮದ್ಯ ಪಡೆದವರು ಅಲ್ಲಿಯೇ ನಿಲ್ಲದಂತೆ ನಿಯಂತ್ರಿಸಲು 'ಬೇಗ ಬೇಗ ಹೋಗಿ' ಎಂದು ಪೊಲೀಸರು ಎಲ್ಲರನ್ನೂ ಮುಂದಕ್ಕೆ ತಳ್ಳುತ್ತಿದ್ದರು.

ಮದ್ಯದ ಜತೆಗೆ ಬಿರಿಯಾನಿ, ಕಬಾಬ್, ಕುರಿ ಮಾಂಸದ ಖಾದ್ಯಗಳ ವ್ಯವಸ್ಥೆಯೂ ಇತ್ತು. ಬಿಯರ್, ವಿಸ್ಕಿ ಪಡೆದವರು ಆಹಾರ ಪೂರೈಕೆ ಕೌಂಟರ್‌ನತ್ತ ತೆರಳುತ್ತಿದ್ದರು. ಊಟದ ತಟ್ಟೆಯೊಂದಿಗೆ ಮೈದಾನದ ಮೂಲೆ ಮೂಲೆಯಲ್ಲಿ ಕುಳಿತು ಮದ್ಯ ಕುಡಿದರು. ಮೈದಾನದಲ್ಲಿ ಎಲ್ಲಿ ಕಣ್ಣು ಹಾಯಿಸಿದರೂ ಮದ್ಯ ಸಮಾರಾಧನೆಯೇ ಕಾಣುತ್ತಿತ್ತು.

ಐದು ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಊಟ ಹಾಕುವುದರಲ್ಲಿ ತಪ್ಪೇನಿಲ್ಲ. ನಮ್ಮನ್ನು ಕಾರ್ಯಕ್ರಮಕ್ಕೆ ಕರೆದಿದ್ದರು ಹೋದೆವು, ಬಂದೆವು. ನಂತರ ಏನಾಗಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ
ಡಾ.ಕೆ.ಸುಧಾಕರ್, ಸಂಸದ

ಸನ್ಮಾನ ಕಾರ್ಯಕ್ರಮ ಉದ್ಘಾಟನೆ ಆದ ತಕ್ಷಣ ಅಲ್ಲಿಂದ ಹೊರಟೆ. ಮುಂದೆ ಏನಾಯಿತೊ ಗೊತ್ತಿಲ್ಲ. ಕುಡಿತಕ್ಕೆ ಬಿಜೆಪಿ ಪ್ರೋತ್ಸಾಹ ನೀಡುವುದಿಲ್ಲ
ಆರ್.ಅಶೋಕ,
ವಿಪಕ್ಷ ನಾಯಕ

ಸುದ್ದಿ 2 ನಿಮಿಷ

ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳಿಗೆ ಶಾಲೆ ತೆರೆಯಿರಿ: ಮಂಜಮ್ಮ

ಕೆರೂರ (ಬಾಗಲಕೋಟೆ ಜಿಲ್ಲೆ): 'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಸರ್ಕಾರ ಶಾಲೆ ತೆರೆಯಬೇಕು' ಎಂದು ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷೆ ಮಂಜಮ್ಮ ಜೋಗತಿ ಆಗ್ರಹಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸುಮಾರು 40 ಸಾವಿರಕ್ಕೂ ಅಧಿಕ ಲಿಂಗತ್ವ ಅಲ್ಪಸಂಖ್ಯಾತರು ವಿದ್ಯಾಭ್ಯಾಸ ಇಲ್ಲದೆ ಬದುಕಿನಲ್ಲಿ ಸಾಕಷ್ಟು ಗೋಳಾಟ ನಡೆಸಿ ಹಾದಿಬೀದಿ ಹೀನ ಬದುಕು ಸಾಗಿಸುತ್ತಿದ್ದು, ಮಕ್ಕಳ ಭವಿಷ್ಯಕ್ಕೆ ಶಾಲೆ ತೆರೆಯುವುದು ಅವಶ್ಯಕವಾಗಿದೆ' ಎಂದರು.

'ಸಮಾಜವು ಲಿಂಗತ್ವ ಅಲ್ಪಸಂಖ್ಯಾತರನ್ನು ಬೇರೆ ದೃಷ್ಟಿಯಿಂದಲೇ ಕಾಣುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಉನ್ನತ ವ್ಯಾಸಂಗ ಮಾಡಿರುವ ವ್ಯಕ್ತಿಗಳು ಸೂಕ್ತ ಉದ್ಯೋಗ ದೊರೆಯದೇ ಅನಿವಾರ್ಯವಾಗಿ ಲಿಂಗತ್ವ ಅಲ್ಪಸಂಖ್ಯಾತರಾಗಿ ಪರಿವರ್ತನೆ ಆಗುತ್ತಿರುವುದು ತೀರಾ ವಿಷಾದಕರ ಸಂಗತಿ' ಎಂದು ಕಳವಳ ವ್ಯಕ್ತಪಡಿಸಿದರು.

'ದೇಶದ ಎಲ್ಲ ಕಡೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಸಂಖ್ಯೆ ಹೆಚ್ಚುತ್ತಾ ಸಾಗಿದೆ ಇಲ್ಲಿಯವರೆಗೂ ಗಣತಿ ಕಾರ್ಯ ನಡೆದಿಲ್ಲ. ನಿರ್ದಿಷ್ಟ ಅಂಕಿ-ಸಂಖ್ಯೆ ಸಿಗುತ್ತಿಲ್ಲ. ಮಾಸಾಶನ ಮೊತ್ತ ಹೆಚ್ಚಳವಾಗಬೇಕು. ವಿದ್ಯಾಭ್ಯಾಸ ಕಲ್ಪಿಸುವ ಕಾರ್ಯಕ್ಕೆ ಮುಂದಾಗಿ ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಆಸಕ್ತಿ ತೋರಬೇಕು. ಈಗಾಗಲೇ ಕಲಿತ ಸಾಕಷ್ಟು ಮಂದಿಗೆ ಸರ್ಕಾರಿ ಕೆಲಸ ನೀಡಬೇಕು. ವಯಸ್ಸಾದ ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಅನಾಥಾಶ್ರಮ ಕಲ್ಪಿಸಬೇಕು' ಎಂದು ಆಗ್ರಹಿಸಿದರು.



ಚಿರತೆ ಕೊಂದ ಗ್ರಾಮಸ್ಥರು

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನಲ್ಲಿ ಮೂರು ತಿಂಗಳಿಂದ ಆತಂಕ ಸೃಷ್ಟಿಸಿದ್ದ ಚಿರತೆಯನ್ನು ಡಿ.ಕರಡಿಗುಡ್ಡ ಗ್ರಾಮಸ್ಥರು ಭರ್ಚಿ ಹಾಗೂ ದೊಣ್ಣೆಗಳಿಂದ ಹೊಡೆದು ಕೊಂದಿದ್ದಾರೆ.

ಡಿ.ಕರಡಿಗುಡ್ಡ ಗ್ರಾಮದ ಹೊರವಲಯದಲ್ಲಿ ಭಾನುವಾರ ಬೆಳಿಗ್ಗೆ ಕಾಣಿಸಿಕೊಂಡ ಚಿರತೆಯನ್ನು ನೋಡಲು ಹೋದ ಮೂವರ ಮೇಲೆ ಅದು ದಾಳಿ ಮಾಡಿತ್ತು. ಗ್ರಾಮಸ್ಥರು ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಿ ತಕ್ಷಣ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಬಲೆ ಬೀಸಿ ಅಥವಾ ಅರಿವಳಿಕೆ ನೀಡಿ ಹಿಡಿದು ಬೇರೆ ಕಡೆಗೆ ಸಾಗಿಸುವಂತೆ ಮನವಿ ಮಾಡಿದ್ದರು.

ಬೆಳಿಗ್ಗೆ ಅರಣ್ಯ ಇಲಾಖೆಯ ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರೂ ಯಾವುದೇ ನಿರ್ಧಾರಕ್ಕೆ ಬಂದಿರಲಿಲ್ಲ. ಮಧ್ಯಾಹ್ನದ ವೇಳೆ ಚಿರತೆ ಇನ್ನೊಬ್ಬರ ಮೇಲೆ ಎರಗಿ ಗಾಯಗೊಳಿಸಿತು. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಬಂಡೆಗಳ ಮಧ್ಯೆ ಕುಳಿತಿದ್ದ ಚಿರತೆ ಮೇಲೆ ಭರ್ಚಿಯಿಂದ ಚುಚ್ಚಿ, ದೊಣ್ಣೆಗಳಿಂದ ಹೊಡೆದು ಕೊಂದು ಹಾಕಿದ್ದಾರೆ.

ಎರಡು ತಿಂಗಳ ಹಿಂದೆ ವಾಚನಾಯಕ ತಾಂಡದಲ್ಲಿ ಚಿರತೆ ಆಕಳು ಮೇಲೆ ದಾಳಿ ನಡೆಸಿ ಕೊಂದು ಹಾಕಿತ್ತು. ಇದರಿಂದ ಸುತ್ತಮುತ್ತಲಿನ ಗ್ರಾಮಸ್ಥರು ಆತಂಕ್ಕೆ ಒಳಗಾಗಿದ್ದರು.

ರೇಣುಕಸ್ವಾಮಿ ಕೊಲೆ ಪ್ರಕರಣ: ತನಿಖೆ ಚುರುಕು

10 ಆರೋಪಿಗಳ ಬೆರಳಚ್ಚು ಹೊಂದಾಣಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಸಂಗ್ರಹಿಸಿದ್ದ ಬೆರಳಚ್ಚು ಮಾದರಿ, ಬಂಧಿತ ಆರೋಪಿಗಳ ಪೈಕಿ ಕೆಲವರಿಗೆ ಹೊಂದಾಣಿಕೆ ಆಗಿರುವುದು ದೃಢಪಟ್ಟಿದೆ ಎಂದು ಮೂಲಗಳು ಹೇಳಿವೆ.

'ಕೊಲೆ ಪ್ರಕರಣದಲ್ಲಿ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ, ಪವನ್, ಪ್ರದೋಷ್ ಸೇರಿದಂತೆ 17 ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದರು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ 14 ಮಂದಿ ಹಾಗೂ ತುಮಕೂರು ಜಿಲ್ಲಾ ಕಾರಾಗೃಹದಲ್ಲಿ ಮೂವರು ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ. 17 ಮಂದಿಯ ಪೈಕಿ 10 ಮಂದಿಯ ಬೆರಳಚ್ಚು ಹೊಂದಾಣಿಕೆ ಆಗಿದೆ' ಎಂದು ಮೂಲಗಳು ಹೇಳಿವೆ.

ಜೂನ್ 9ರಂದು ಪಟ್ಟಣಗೆರೆಯ ಶೆಡ್‌ನಲ್ಲಿ ಕೊಲೆ ನಡೆದಿತ್ತು. ಕೃತ್ಯ ನಡೆದ ಮರುದಿನ ನಾಲ್ವರು ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದರು. ಜೂನ್ 11ರಂದು ದರ್ಶನ್ ಸೇರಿ 13 ಆರೋಪಿಗಳನ್ನು ವಿವಿಧೆಡೆ ಕಾರ್ಯಾಚರಣೆ ನಡೆಸಿ ಪೊಲೀಸರು ಬಂಧಿಸಿದ್ದರು.

'ಕೊಲೆ ನಡೆದ ಪಟ್ಟಣಗೆರೆ ಶೆಡ್, ಶವ ಇಟ್ಟಿದ್ದ ಸೆಕ್ಯೂರಿಟಿ ಗಾರ್ಡ್ ಕೊಠಡಿ, ಮೃತದೇಹ ಸಾಗಿಸಲು ಬಳಸಿದ್ದ ವಾಹನ, ಶವ ಎಸೆದಿದ್ದ ಸ್ಥಳ, ಮೃತನ ಬಟ್ಟೆಗಳು, ಹಲ್ಲೆ ಮಾಡಲು ಬಳಸಿದ್ದ ವಸ್ತುಗಳು, ವಿದ್ಯುತ್ ಶಾಕ್ ನೀಡಲು ಬಳಸಿದ್ದ ಉಪಕರಣ, ಆರೋಪಿಗಳ ಬಟ್ಟೆಗಳ ಮೇಲಿದ್ದ ಬೆರಳಚ್ಚನ್ನು ಮಹಜರು ವೇಳೆ ತಜ್ಞರು ಸಂಗ್ರಹಿಸಿದ್ದರು. ಜತೆಗೆ, ಬಂಧಿತರ ಬೆರಳಚ್ಚು ಮಾದರಿ ಸಹ ಸಂಗ್ರಹಿಸಿ ಬೆಂಗಳೂರು ಹಾಗೂ ಹೈದರಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಪರೀಕ್ಷೆಯ ಪ್ರಾಥಮಿಕ ಮಾಹಿತಿಗಳು ಹೊರಬಿದ್ದಿದ್ದು, ಕೆಲವು ಆರೋಪಿಗಳ ಬೆರಳಚ್ಚು ಹೊಂದಾಣಿಕೆ ಆಗುತ್ತಿದೆ. ಕೆಲವೇ ದಿನಗಳಲ್ಲಿ ಪೂರ್ಣ ವರದಿ ತನಿಖಾಧಿಕಾರಿಗಳ ಕೈಸೇರುವ ಸಾಧ್ಯತೆಯಿದೆ' ಎಂದು ಮೂಲಗಳು ಹೇಳಿವೆ. 'ಡಿಎನ್‌ಎ ಪರೀಕ್ಷೆಗಾಗಿ 10 ಜನರ ರಕ್ತ ಹಾಗೂ ಕೂದಲು ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ. ಅದರ ವರದಿಯೂ ಬರಬೇಕಿದೆ' ಎಂದು ಪೊಲೀಸರು ಹೇಳಿದರು.

ಮತ್ತೆ ಕಾರ್ತಿಕ್ ವಿಚಾರಣೆ: ಬಂಧಿತ ಆರೋಪಿ ಪ್ರದೋಷ್ ಸ್ನೇಹಿತ ಕಾರ್ತಿಕ್ ಪುರೋಹಿತ್‌ಗೆ ಸೋಮವಾರ ಮತ್ತೆ ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ.

ಆರೋಪಿಗೆ ಹಣ ನೀಡಿದ್ದ ಪವಿತ್ರಾ ಸ್ನೇಹಿತೆ

ಪ್ರಕರಣದ ಮೊದಲನೇ ಆರೋಪಿ ಪವಿತ್ರಾಗೌಡ ಅವರ ಸ್ನೇಹಿತೆ ಸಮತಾ ಅವರಿಗೂ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ಅವರೂ ಸೋಮವಾರ ವಿಚಾರಣೆಗೆ ಬರುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

'ಕೃತ್ಯ ನಡೆದ ಮರುದಿನ ಸಮತಾ ಅವರು ಪವಿತ್ರಾಗೌಡ ಅವರ ಮನೆಗೆ ಭೇಟಿ ನೀಡಿದ್ದರು. ಅಲ್ಲದೇ ಆರೋಪಿ ಧನರಾಜ್‌ಗೆ ಫೋನ್ ಪೇ ಮೂಲಕ ₹3 ಸಾವಿರದಷ್ಟು ಹಣ ಹಾಕಿದ್ದರು ಎನ್ನಲಾಗಿದೆ. ರೇಣುಕಸ್ವಾಮಿ ಅಶ್ಲೀಲ ಸಂದೇಶ ಕಳುಹಿಸಿದ್ದ ಬಗ್ಗೆ ಪವಿತ್ರಾ ಅವರು ಸಮತಾ ಜತೆಗೆ ಹೇಳಿಕೊಂಡಿರುವ ಸಾಧ್ಯತೆಯಿದ್ದು ಅವರಿಗೂ ನೋಟಿಸ್ ನೀಡಲಾಗಿದೆ' ಎಂದು ತಿಳಿಸಿವೆ.

15 ತಿಂಗಳಲ್ಲಿ 1,182 ಅನ್ನದಾತರ ಆತ್ಮಹತ್ಯೆ

ಒಂದನೇ ಪುಟದಿಂದ...

'ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೈಕೊಟ್ಟ ಮಳೆ, ಬೆಳೆ ಹಾನಿಯ ಪರಿಣಾಮ ಬ್ಯಾಂಕ್ ಸಾಲ ಮರು ಪಾವತಿಸಲಾಗದೆ ಬಹುತೇಕ ರೈತರು ನೇಣಿಗೆ ಕೊರಳೊಡ್ಡಿದ್ದಾರೆ. ಕೆಲವರು ತಮ್ಮ ಹೊಲದಲ್ಲಿಯೇ ವಿಷ ಸೇವಿಸಿ ಸಾವಿಗೆ ಶರಣಾಗಿದ್ದಾರೆ. ಅನ್ನದಾತರು ಈ ರೀತಿಯ ಮನನೊಂದು ಆತ್ಮಹತ್ಯೆಯಂಥ ದಾರಿ ತುಳಿಯಲು ಕಾರಣವೇನೆಂಬ ಬಗ್ಗೆ ಸಮರ್ಪಕ ಅಧ್ಯಯನ ನಡೆಸಬೇಕಾದ ಅಗತ್ಯವಿದೆ' ಎಂದು ಕೃಷಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಹೆಬ್ಬುತಿ ಗ್ರಾಮದ ರೈತರೊಬ್ಬರು ಸಹಕಾರಿ ಬ್ಯಾಂಕ್ ನಲ್ಲಿ ಪಡೆದಿದ್ದ ₹3 ಲಕ್ಷ ಸಾಲ ಮರುಪಾವತಿಸಲು ಸಾಧ್ಯವಾಗದ ಕಾರಣಕ್ಕೆ ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಸಾಲ ಮಾಡಿ ಒಂದು ಎಕರೆ 34 ಗುಂಟೆ ಜಮೀನಿನಲ್ಲಿ ಭತ್ತ ಹಾಗೂ ಅಡಿಕೆ ಬೆಳೆದಿದ್ದರು. ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಕಳೆದ ಅತೀ ಕಡಿಮೆ ಮಳೆಯಾಗಿದೆ. ಮಳೆಯಿಲ್ಲದೆ ಈರುಳ್ಳಿ ಬೆಳೆ ಹಾನಿಯಿಂದ ಮನ ನೊಂದು ಕಡೂರು ತಾಲ್ಲೂಕಿನ ಗಿರಿಯಾಪುರ ರೈತರೊಬ್ಬರು ತಮ್ಮ ಹೊಲದಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರು ತಮ್ಮ ಎರಡು ಎಕರೆ ಜಮೀನಿನಲ್ಲಿ ಈರುಳ್ಳಿ ಬೆಳೆಯಲು ಸಾಲ ಮಾಡಿಕೊಂಡಿದ್ದರು. ಆದರೆ, ಕಳೆದ ವರ್ಷ ಮುಂಗಾರು ವೈಫಲ್ಯ ಮತ್ತು ಬರಗಾಲ ಪರಿಸ್ಥಿತಿಯಿಂದಾಗಿ ಬೆಳೆ ಸಂಪೂರ್ಣ ಒಣಗಿ ಹೋಗಿತ್ತು. ಇದರಿಂದ ತಮ್ಮ ಜಮೀನಿನಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು ಎಂದು ಹೇಳಿದರು.

ಯಾದಗಿರಿ ಜಿಲ್ಲೆಯ ಹುಣಸೂರು ತಾಲ್ಲೂಕಿನ ಉಡುವೆಪುರ ಗ್ರಾಮದ ರೈತರೊಬ್ಬರು ಬ್ಯಾಂಕಿನಿಂದ ಪಡೆದ ಸಾಲ ಮತ್ತು ಗ್ರಾಮಸ್ಥರಿಂದಲೂ ಮಾಡಿದ್ದ ಕೈಸಾಲ ಮರುಪಾವತಿಸಲಾಗದೆ ಆತ್ಮಹತ್ಯೆ ಮಾಡಿಕೊಂಡರೆ, ಎಸ್‌ಬಿಐ ಬ್ಯಾಂಕಿನಿಂದ ₹3 ಲಕ್ಷ ಬೆಳೆ ಸಾಲ ಪಡೆದಿದ್ದ ಬ್ಯಾಡಗಿಯ ತಾಲ್ಲೂಕಿನ ತಿಪಲಾಪುರ ಗ್ರಾಮದ ರೈತರೊಬ್ಬರು, ಕಳೆದ ವರ್ಷ ಮಳೆಯಾಗದ ಕಾರಣಕ್ಕೆ ನಷ್ಟ ಅನುಭವಿಸಿದ್ದರು. ಇದರಿಂದ ಮನನೊಂದು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದರು. ಹೀಗೆ, ಬಹುತೇಕ ರೈತರು ಸಾಲಬಾಧೆಯ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆರಳೆಣಿಕೆಯ ರೈತರಷ್ಟೆ ವೈಯಕ್ತಿಕ ಕಾರಣಕ್ಕೆ ಸಾವಿಗೆ ಶರಣಾಗಿದ್ದಾರೆ. ರೈತರು ಸಾಲ ಮರುಪಾವತಿ ವಿಚಾರದಲ್ಲಿ ಸಂಯಮ ವಹಿಸುವಂತೆ ಮತ್ತು ಸಂದರ್ಭಕ್ಕೆ ಅನುಸಾರ ಸಾಲ ಮರುಪಾವತಿಗೆ ಅವಕಾಶ ನೀಡುವಂತೆ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿಗೆ ರಾಜ್ಯ ಸರ್ಕಾರ ಸೂಚನೆ ನೀಡಿದೆ. ಆದರೂ ಕೆಲವು ಬ್ಯಾಂಕುಗಳ ಅಧಿಕಾರಿಗಳು ಸಾಲ ಮರುಪಾವತಿಸುವಂತೆ ನೋಟಿಸ್ ನೀಡಿದ್ದಾರೆ. ಆತ್ಮಹತ್ಯೆ ಪ್ರಕರಣಗಳು ಹೆಚ್ಚಲು ಇದೂ ಕಾರಣ ಎಂದೂ ಅವರು ವಿವರಿಸಿದರು.

ಬೆಳೆ ವಿಮೆ ನೋಂದಣಿಗೆ ಅವಕಾಶ

'ಪ್ರಾಕೃತಿಕ ವಿಕೋಪಗಳಿಂದ ಬೆಳೆ ನಷ್ಟವಾದರೆ ಬೆಳೆ ವಿಮೆ ಪರಿಹಾರ ನೀಡಲಾಗುತ್ತದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ರೈತರು ಬೆಳೆ ವಿಮೆಗೆ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. 2024–25ನೇ ಸಾಲಿನಲ್ಲಿ ಬೆಳೆ ವಿಮೆಗೆ 19.43 ಲಕ್ಷ ರೈತರ ನೋಂದಣಿ ಗುರಿ ನಿಗದಿಪಡಿಸಲಾಗಿದೆ. 2024ರ ಮುಂಗಾರು ಹಂಗಾಮಿನಲ್ಲಿ ಬೆಳೆವಿಮೆಗೆ 5.08 ಲಕ್ಷ ರೈತರು ನೋಂದಾಯಿಸಿಕೊಂಡಿದ್ದರು' ಎಂದು ಕೃಷಿ ಇಲಾಖೆಯ ಮೂಲಗಳು ತಿಳಿಸಿವೆ.

ಆದಾಯ ಕಡಿಮೆ, ಕೃಷಿ ವೆಚ್ಚ ಹೆಚ್ಚಿದ ಕಾರಣ ಬ್ಯಾಂಕ್ ಸಾಲ ಮರುಪಾವತಿ ರೈತನಿಂದ ಸಾಧ್ಯವಾಗುತ್ತಿಲ್ಲ. ಪರಿಣಾಮ, ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಸರ್ಕಾರವೇ ವ್ಯವಸ್ಥಿತವಾದ ಕೃಷಿ ಸಂಬಂಧಿ ಯೋಜನೆಗಳನ್ನು ರೂಪಿಸುವ ಮೂಲಕ ರೈತರ ಕೈಹಿಡಿಯದೇ ಇದ್ದರೆ, ಆತ್ಮಹತ್ಯೆ ಪ್ರಕರಣಗಳಿಗೆ ತಡೆ ಅಸಾಧ್ಯ. ರೈತ ಬೆಳೆದ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ದರವನ್ನು ಸರ್ಕಾರ ದೊರಕಿಸಿಕೊಡಬೇಕು
ಸಿದಗೌಡ ಮೋದಗಿ, ರಾಜ್ಯ ಅಧ್ಯಕ್ಷ, ಭಾರತೀಯ ಕೃಷಿಕ ಸಮಾಜ (ಸಂಯುಕ್ತ)

ಪಶ್ಚಿಮಘಟ್ಟದ ಸೆರಗಿನಲ್ಲಿ ಸುರಿಯುತ್ತಿರುವ ಸತತ ವರ್ಷಧಾರೆಯಿಂದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಶಂಕರಪೇಟ ಅರಣ್ಯದಲ್ಲಿ ಮಲಪ್ರಭಾ ನದಿ ಭಾನುವಾರ ಉಕ್ಕಿ ಹರಿಯಿತು
ಪ್ರಜಾವಾಣಿ ಚಿತ್ರ:ಪ್ರಸನ್ನ ಕುಲಕರ್ಣಿ

ಹರಿಹರದ ಬಳಿ ಮೈದುಂಬಿ ಹರಿಯುತ್ತಿರುವ ತುಂಗಭದ್ರಾ ನದಿಯಲ್ಲಿ ಅಳಿವಿನಂಚಿನಲ್ಲಿರುವ ನೀರುನಾಯಿಗಳು ಭಾನುವಾರ ಅಪರೂಪಕ್ಕೆ ಎಂಬಂತೆ ಕಂಡುಬಂದವು. ಆಹಾರ ಅರಸಿ ನೀರಿನಿಂದ ಹೊರಬಂದು ದಡದಲ್ಲಿ ಓಡಾಡುತ್ತಿದ್ದ ದೃಶ್ಯ ಸೆರೆ ಸಿಕ್ಕಿದ್ದು ಹೀಗೆ...
ಪ್ರಜಾವಾಣಿ ಚಿತ್ರ:ಸತೀಶ ಬಡಿಗೇರ್

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಬಿರುಸು; ದಕ್ಷಿಣ ಕನ್ನಡದಲ್ಲಿ ಸಾಧಾರಣ ಮಳೆ

ಸತತ ವರ್ಷಧಾರೆ: ಗುಡ್ಡ ಕುಸಿತ, ಜಲಾವೃತ

ಪ್ರಜಾವಾಣಿ ವಾರ್ತೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಾದ್ಯಂತ ಭಾನುವಾರ ಗಾಳಿ ಸಹಿತ ಬಿರುಸಿನ ಮಳೆ ಸುರಿಯಿತು. ಇದರಿಂದ ಕೆಲವೆಡೆ ಗುಡ್ಡ ಕುಸಿತ, ಜಲಾವೃತ ಸಮಸ್ಯೆ ಎದುರಾಯಿತು.

ರಾಷ್ಟ್ರೀಯ ಹೆದ್ದಾರಿ–66ರ ಹೊನ್ನಾವರ ಪಟ್ಟಣದ ಕರ್ನಲ್ ಹಿಲ್ ಬಳಿ ಗುಡ್ಡ ಕುಸಿತ ಸಂಭವಿಸಿ ಹೆದ್ದಾರಿ ಮೇಲೆ ಬಂಡೆಗಳು ಉರುಳಿ ಬಿದ್ದಿದ್ದವು. ಇದರಿಂದ ಕೆಲ ತಾಸು ಸಂಚಾರ ವ್ಯತ್ಯಯ ಉಂಟಾಗಿತ್ತು. ಯಲ್ಲಾಪುರ ತಾಲ್ಲೂಕಿನ ಅರಬೈಲ್ ಘಟ್ಟದಲ್ಲಿ ಬೃಹದಾಕಾರದ ಮರ ರಸ್ತೆಗೆ ಬಿದ್ದು ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು.

ಕಾರವಾರ ಭಾಗದಲ್ಲಿ ನಿರಂತರ ಮಳೆ ಸುರಿದಿದ್ದರಿಂದ ಇಡೂರು, ಚೆಂಡಿಯಾ ಗ್ರಾಮಗಳಲ್ಲಿ 20ಕ್ಕೂ ಹೆಚ್ಚು ಮನೆಗಳು ಜಲಾವೃತ ಸಮಸ್ಯೆ ಎದುರಿಸಿದವು. ಅಘನಾಶಿನಿ, ಗುಂಡಬಾಳ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದರಿಂದ ಪ್ರವಾಹ ಭೀತಿ ಎದುರಾಗಿದ್ದು, ಆ ಭಾಗಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಕಾಳಜಿ ಕೇಂದ್ರ ಸ್ಥಾಪಿಸಲಾಗಿದೆ.

ತುಂಗಭದ್ರಾ ಜಲಾಶಯ–50 ಸಾವಿರ ಕ್ಯುಸೆಕ್ ಒಳಹರಿವು

ಹೊಸಪೇಟೆ (ವಿಜಯನಗರ) ವರದಿ: ಮಲೆನಾಡು ಭಾಗದಲ್ಲಿ ಭರ್ಜರಿ ಮಳೆ ಆಗುತ್ತಿರುವುದರಿಂದ ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 50 ಸಾವಿರ ಕ್ಯುಸೆಕ್ ಮೀರಿದ್ದು, ಒಂದೇ ದಿನದಲ್ಲಿ 5 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಿದೆ.

ಗರಿಷ್ಠ 1,633 ಅಡಿ ಎತ್ತರದ ಅಣೆಕಟ್ಟೆಯಲ್ಲಿ ಶನಿವಾರ 1,593.19 ಅಡಿಯಷ್ಟಿದ್ದ ನೀರಿನ ಮಟ್ಟ (13.90 ಟಿಎಂಸಿ ಅಡಿ)ಭಾನುವಾರ 1,597.31 ಅಡಿಗೆ (18.24 ಟಿಎಂಸಿ ಅಡಿ) ಏರಿಕೆಯಾಗಿದೆ.

ಕಳೆದ ವರ್ಷ ಮುಂಗಾರು ವಿಳಂಬವಾಗಿದ್ದರಿಂದ ಜಲಾಶಯದಲ್ಲಿ ಈ ಅವಧಿಯಲ್ಲಿ 3.08 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಾಗಿತ್ತು.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಪಟ್ಟಣದ ಕರ್ನಲ್ ಹಿಲ್ ಬಳಿ ಭಾನುವಾರ ಗುಡ್ಡ ಕುಸಿದು ರಾಷ್ಟ್ರೀಯ ಹೆದ್ದಾರಿ–66ರ ಮೇಲೆ ಗಿಡ, ಮಣ್ಣು, ಕಲ್ಲಿನ ರಾಶಿ ಬಿದ್ದಿತ್ತು

ಮಲೆನಾಡಿನಲ್ಲಿ ಮುಂದುವರಿದ ಮಳೆ

(ಶಿವಮೊಗ್ಗ ವರದಿ): ಜಿಲ್ಲೆಯಲ್ಲಿ ಭಾನುವಾರವೂ ಮಳೆ ಮುಂದುವರೆದಿದ್ದು, ಹೊಸನಗರ ತಾಲ್ಲೂಕಿನ ಚಕ್ರಾ ವ್ಯಾಪ್ತಿಯಲ್ಲಿ 13.05 ಸೆಂ.ಮೀ. ಮಳೆಯಾಗಿದೆ.

ಸಾವೇಹಕ್ಲು ಪ್ರದೇಶದಲ್ಲಿ 11.8 ಸೆಂ.ಮೀ, ಹುಲಿಕಲ್‌ನಲ್ಲಿ 7.03 ಸೆಂ.ಮೀ, ಮಾಸ್ತಿಕಟ್ಟೆಯಲ್ಲಿ 8.0 ಸೆಂ.ಮೀ ಮಳೆಯಾಗಿದೆ.

ಇಡೀ ದಿನ ಮೋಡ ಕವಿದ ವಾತಾವರಣ ಇತ್ತು. ಶಿವಮೊಗ್ಗ ನಗರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ಸಾಧಾರಣವಾಗಿ ಮಳೆ ಸುರಿಯಿತು.

(ದಾವಣಗೆರೆ ವರದಿ): ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಭಾನುವಾರ ಸಾಧಾರಣ ಮಳೆಯಾಗಿದೆ. ಜಿಲ್ಲೆಯ ಹೊನ್ನಾಳಿ, ಚನ್ನಗಿರಿ ತಾಲ್ಲೂಕಿನಲ್ಲಿ ಮಧ್ಯಾಹ್ನದಿಂದಲೇ ಮಳೆ ಸುರಿಯಿತು.

ದಾವಣಗೆರೆ ನಗರದಲ್ಲಿ ದಿನವಿಡೀ ಮೋಡ ಕವಿದ ವಾತಾವರಣದ ನಡುವೆ ಆಗಾಗ ಮಳೆಯ ಸಿಂಚನವಾಯಿತು. ಮಧ್ಯಾಹ್ನ ಮತ್ತು ಸಂಜೆ ಅರ್ಧ ಗಂಟೆ ಉತ್ತಮ ಮಳೆ ಸುರಿಯಿತು. ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮುಂಗಾರು ಬೆಳೆಗಳು ಹಸಿರಿನಿಂದ ನಳನಳಿಸುತ್ತಿವೆ.

(ಮಂಗಳೂರು ವರದಿ): ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ ಸಾಧಾರಣ ಮಳೆಯಾಗಿದೆ. ಬೆಳಿಗ್ಗೆ ಎರಡು ಮೂರು ಸಲ ಬಿಟ್ಟು ಬಿಟ್ಟು ಮಳೆ ಸುರಿಯಿತು. ಬಳಿಕ ಕೆಲ ಹೊತ್ತು ಬಿಸಿಲಿನಿಂದ ಕೂಡಿದ ವಾತಾವರಣವಿತ್ತು. ಮಧ್ಯಾಹ್ನ ಮತ್ತೆ ತುಂತುರು ಮಳೆ ಸುರಿಯಿತು.

ಭಾನುವಾರ ಬೆಳಿಗ್ಗೆ 8.30ರವರೆಗಿನ 24 ಗಂಟೆಗಳಲ್ಲಿ ಸುಳ್ಯ ತಾಲ್ಲೂಕಿನ ಕಲ್ಮಡ್ಕದಲ್ಲಿ 15.05 ಸೆಂ.ಮೀ. ಮಳೆಯಾಗಿದೆ. ಇದು ರಾಜ್ಯದಲ್ಲೇ ಗರಿಷ್ಠ. ಮಂಗಳೂರು ತಾಲ್ಲೂಕಿನಲ್ಲಿ ಒಂದು ಮನೆ ಸಂಪೂರ್ಣ ಹಾನಿಗೊಳಗಾಗಿದ್ದು, ಇನ್ನೊಂದು ಮನೆ ಭಾಗಶಃ ಹಾನಿಗೊಂಡಿದೆ.

ಇದೇ 8, 9, 11 ಮತ್ತು 12ರಂದು ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗಾಳಿಯಿಂದ ಬಿರುಸಿನ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಈ ದಿನಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಉಡುಪಿ ಜಿಲ್ಲೆಯ ವಿವಿಧೆಡೆ ಭಾನುವಾರ ಬೆಳಿಗ್ಗೆ ಧಾರಾಕಾರ ಮಳೆ ಸುರಿದಿದೆ. ಮಧ್ಯಾಹ್ನದವರೆಗೆ ಬಿಡುವು ನೀಡಿದ್ದ ಮಳೆ ಮಧ್ಯಾಹ್ನದ ನಂತರ ಮತ್ತೆ ಬಿರುಸುಗೊಂಡಿದೆ. ಕುಂದಾಪುರದಲ್ಲಿ 5 ಸೆಂ.ಮೀ., ಉಡುಪಿಯಲ್ಲಿ 6 ಸೆಂ,ಮೀ., ಬ್ರಹ್ಮಾವರದಲ್ಲಿ 5 ಸೆಂ.ಮೀ. ಮಳೆಯಾಗಿದೆ. ಬ್ರಹ್ಮಾವರ ಕೋಟ ಪರಿಸರದಲ್ಲಿ ಭಾರಿ ಮಳೆಯಾಗುತ್ತಿದ್ದು ನೆರೆ ಭೀತಿ ಕಾಣಿಸಿಕೊಂಡಿದೆ. ಕೋಟ ಪರಿಸರದಲ್ಲಿ ಮಳೆಯೊಂದಿಗೆ ಗಾಳಿಯೂ ರಭಸವಾಗಿ ಬೀಸುತ್ತಿದ್ದು, ಅನೇಕ ಕಡೆ ಮರಗಳು ಬಿದ್ದು ಸಂಚಾರಕ್ಕೆ ಅಡಚಣೆ ಉಂಟಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	102	11,027	562
ಹಾರಂಗಿ	2,859	2,848.18	2,054	200
ಕಬಿನಿ	2,284.00	2,281.56	5,039	3,250
ಹೇಮಾವತಿ	2,922	2,896.30	7,796	250
ಲಿಂಗನಮಕ್ಕಿ	1,819	1,766.70	29,044	2030,76
ಸೂಪಾ (ಮೀ)	564	531.15	28,599	500
ಮಾಣಿ	595	575.60	1,090	000
ತುಂಗಭದ್ರಾ	1,633	1,597.31	50,715	263
ಮಲಪ್ರಭಾ	2,079.5	2,048.50	4,048	194
ಘಟಪ್ರಭಾ	2175	2,119.70	17,759	114
ಭದ್ರಾ	186	131.10	8,689	553
ಆಲಮಟ್ಟಿ (ಮೀ)	519.6	514.58	59,306	430
ನಾರಾಯಣಪುರ (ಮೀ)	492.25	488.88	3600	00

* ನೆಲಮಟ್ಟದಿಂದ

ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ • ಮೂರು ಡಜನ್‌ಗೂ ಹೆಚ್ಚು ಅರ್ಜಿಗಳ ಸಲ್ಲಿಕೆ

ನೀಟ್ ಅಕ್ರಮ: 'ಸುಪ್ರೀಂ' ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜೂನ್ 23ರಂದು ತನಿಖೆ ಆರಂಭಿಸಿದ್ದ ಸಿಬಿಐ
- ಕೌನ್ಸೆಲಿಂಗ್‌ಗೆ ತಡೆ ನೀಡಲು ನಿರಾಕರಿಸಿದ್ದ ಸುಪ್ರೀಂ ಕೋರ್ಟ್

ನವದೆಹಲಿ: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 5ರಂದು ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್-ಯುಜಿ) ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಇತರೆ ಅವ್ಯವಹಾರಗಳಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಸೋಮವಾರ ಆರಂಭಿಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ನೇತೃತ್ವದ ನ್ಯಾಯಪೀಠವು ಮೂರು ಡಜನ್‌ಗೂ ಅಧಿಕ ಅರ್ಜಿಗಳ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಿದೆ.

ನೀಟ್ ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿದಂತೆ ಜೂನ್ 23ರಂದು ಸಿಬಿಐ ತನಿಖೆ ಆರಂಭಿಸಿದ್ದು, ಪ್ರಕರಣ ಸಂಬಂಧ ಹಲವರನ್ನು ಬಂಧಿಸಿದೆ. ವಿವಾದದ ನಂತರ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಪಾರದರ್ಶಕ, ಸುಗಮ, ನ್ಯಾಯಸಮ್ಮತವಾಗಿ ಪರೀಕ್ಷೆ ನಡೆಸಲು ಇಸ್ರೊದ ಮಾಜಿ ಅಧ್ಯಕ್ಷ ಡಾ.ಕೆ. ರಾಧಾಕೃಷ್ಣನ್, ಐಐಟಿ ಕಾನ್ಪುರದ ಬೋರ್ಡ್ ನಿರ್ದೇಶಕರನ್ನು ಒಳಗೊಂಡ ತಜ್ಞರ ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು ಮೇ 5ರಂದು ನೀಟ್-ಯುಜಿ ಪರೀಕ್ಷೆ ನಡೆಸಿದ್ದು, ಜೂನ್ 6ರಂದು ಫಲಿತಾಂಶ ಪ್ರಕಟಿಸಿದೆ. ಸೂಕ್ತ ಸಾಕ್ಷ್ಯಾಧಾರ-ಗಳ ಕೊರತೆಯಿಂದ ಇಡೀ ಪರೀಕ್ಷಾ ಪ್ರಕ್ರಿಯೆಯನ್ನು ರದ್ದುಗೊಳಿಸಿದರೆ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಸುಪ್ರೀಂಕೋರ್ಟ್‌ಗೆ ಎನ್‌ಟಿಎ ಹಾಗೂ ಕೇಂದ್ರ ಸರ್ಕಾರವು ಪ್ರತ್ಯೇಕ ಅಫಿಡವಿಟ್‌ಗಳನ್ನು ಈಗಾಗಲೇ ಸಲ್ಲಿಸಿವೆ.

ಇದಕ್ಕೆ ತೀವ್ರವಾದ ಆಕ್ಷೇಪ ವ್ಯಕ್ತಪಡಿಸಿರುವ ಅಭ್ಯರ್ಥಿಗಳು, ಶಿಕ್ಷಣ ತಜ್ಞರು, ಮರು ಪರೀಕ್ಷೆ ನಡೆಸುವಂತೆ ಅರ್ಜಿ ಸಲ್ಲಿಸಿದ್ದಾರೆ. ಪರೀಕ್ಷೆಯಲ್ಲಿ ವ್ಯಾಪಕ ಅಕ್ರಮ ನಡೆದಿರುವ ಕುರಿತು ದೆಹಲಿ, ಪಟ್ನಾ, ಗುಜರಾತ್‌ನಲ್ಲಿ ಈಗಾಗಲೇ ಎಫ್‌ಐಆರ್ ದಾಖಲಾಗಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

ಸುಪ್ರೀಂಕೋರ್ಟ್‌ನಲ್ಲಿ ಜುಲೈ 8ರಂದು ಅರ್ಜಿ ವಿಚಾರಣೆ ನಡೆಯಲಿರುವ ಬೆನ್ನಲ್ಲೇ, ಈ ಹಿಂದೆ ಜುಲೈ6ರಂದು ನಡೆಸಲು ನಿರ್ಧರಿಸಿದ್ದ ನೀಟ್- ಯುಜಿ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಅಧಿಕಾರಿಗಳು ತಿಂಗಳ ಕೊನೆಯವರೆಗೂ ಮುಂದೂಡಿದ್ದಾರೆ. ನ್ಯಾಯಾಲಯದಲ್ಲಿ ಅರ್ಜಿ ವಿಚಾರಣೆಯ ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ.

ಉದ್ದೇಶಿತ ಕೌನ್ಸೆಲಿಂಗ್‌ಗೆ ತಡೆ ನೀಡಲು ಸುಪ್ರೀಂಕೋರ್ಟ್ ಈ ಹಿಂದೆ ನಿರಾಕರಿಸಿತ್ತು. ನೀಟ್‌ನಲ್ಲಿ ಕೃಪಾಂಕ ಪಡೆದು ಉತ್ತಮ ರ್‍ಯಾಂಕ್ ಪಡೆದ 1,563 ವಿದ್ಯಾರ್ಥಿಗಳಿಗೆ ಜೂನ್ 23ರಂದು ಮರು ಪರೀಕ್ಷೆ ನಡೆಸಲು ನಿರ್ಧರಿಸಿದ್ದ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಕ್ರಮಕ್ಕೆ ಸುಪ್ರೀಂಕೋರ್ಟ್ ಜೂನ್ 13ರಂದು ಒಪ್ಪಿಗೆ ಸೂಚಿಸಿತ್ತು.

ಖಿನ್ನತೆ: ಮತ್ತೆ ಪರೀಕ್ಷೆ ಬರೆಯಲು ಅವಕಾಶ

ಮುಖ್ಯಾಂಶಗಳು
- ಬಾಂಬೆ ಹೈಕೋರ್ಟ್ ಮೊರೆ ಹೋಗಿದ್ದ ವಿದ್ಯಾರ್ಥಿ
- ಮರು ಪರೀಕ್ಷೆ ಬರೆಯುವ ವಿದ್ಯಾರ್ಥಿ ಕೋರಿಕೆ ನಿರಾಕರಿಸಿದ್ದ ಕಾಲೇಜು

ಮುಂಬೈ (ಪಿಟಿಐ): 'ಖಿನ್ನತೆ ಹಾಗೂ ಅಂತರ್ಜಾಲ ಗೇಮಿಂಗ್ ಗೀಳಿನಿಂದ ಉಂಟಾದ ಮನೋರೋಗದ ಕಾರಣಕ್ಕೆ 12ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲಾಗಲಿಲ್ಲ. ನಂತರ ನಡೆದ ಪೂರಕ ಪರೀಕ್ಷೆಯನ್ನೂ ಬರೆಯಲಾಗಲಿಲ್ಲ. ಆದ ಕಾರಣ, ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ ನೀಡಬೇಕು' ಎಂದು ಕೋರಿ 19 ವರ್ಷದ ವಿದ್ಯಾರ್ಥಿ ಮಾಡಿದ ಮನವಿಗೆ ಬಾಂಬೆ ಹೈಕೋರ್ಟ್ ಸಮ್ಮತಿ ಸೂಚಿಸಿದೆ.

ಬಾಂಬೆ ಹೈಕೋರ್ಟ್‌ನ ವಿಭಾಗೀಯ ಪೀಠದ ನ್ಯಾಯಮೂರ್ತಿಗಳಾದ ಎ.ಎಸ್. ಚಂದೂರ್ಕರ್ ಹಾಗೂ ರಾಜೇಶ್ ಪಾಟಿಲ್ ಈ ಸಂಬಂಧ ಆದೇಶ ನೀಡಿದ್ದಾರೆ. 'ನಾನು 11ನೇ ತರಗತಿವರೆಗೂ ಶೇ 85ರಿಂದ ಶೇ 93 ರಷ್ಟು ಅಂಕ ಗಳಿಸುತ್ತಿದೆ. 2023ರ ಮಾರ್ಚ್‌ನಲ್ಲಿ 12ನೇ ತರಗತಿ ಪರೀಕ್ಷೆ ನಡೆದ ಹೊತ್ತಿನಲ್ಲಿ, ನಾನು ಖಿನ್ನತೆಗೆ ಒಳಗಾಗಿದ್ದೆ. ಆದ್ದರಿಂದ 600ಕ್ಕೆ 316 ಅಂಕಗಳನ್ನಷ್ಟೇ ಗಳಿಸಿದೆ' ಎಂದು ವಿದ್ಯಾರ್ಥಿ ಅರ್ಜಿಯಲ್ಲಿ ವಿವರಿಸಿದ್ದಾರೆ.

'2023ರ ಜುಲೈನಿಂದ 2023ರ ಡಿಸೆಂಬರ್‌ವರೆಗೆ ನಾನು ಖಿನ್ನತೆಗೆ ಚಿಕಿತ್ಸೆ ಪಡೆದುಕೊಂಡೆ. ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ಪಡೆದೆ. ಇಲ್ಲಿ ನನಗೆ ಅಂತರ್ಜಾಲ ಗೇಮಿಂಗ್ ಗೀಳಿನ ಮನೋರೋಗ ಇರುವುದನ್ನು ಖಾತರಿಪಡಿಸಿದರು. ಈ ಕಾರಣಕ್ಕಾಗಿ 2023ರ ಜುಲೈನಲ್ಲಿ ನಡೆದ ಮರು ಪರೀಕ್ಷೆಯನ್ನು ಬರೆಯಲು ಸಾಧ್ಯವಾಗಲಿಲ್ಲ' ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

'2024ರ ಮಾರ್ಚ್‌ನಲ್ಲಿ ನಾನು ಓದಿದ ಕಾಲೇಜಿನಲ್ಲಿ ಮತ್ತೊಮ್ಮೆ ಪರೀಕ್ಷೆ ನಡೆಸಲಾಗಿತ್ತು. ಆಗ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಕೋರಿದ್ದೆ. ಆದರೆ, ಕಾಲೇಜಿನವರು ಅವಕಾಶ ನೀಡಲಿಲ್ಲ. ಅಂಕಗಳನ್ನು ಉತ್ತಮ-ಪಡಿಸಿಕೊಳ್ಳಲು ಅವಕಾಶ ನೀಡುವ ಸಂಬಂಧ ಜುಲೈ 16ರಿಂದ ಮತ್ತೊಮ್ಮೆ ಪರೀಕ್ಷೆಯನ್ನು ಕಾಲೇಜು ನಡೆಸಲಿದೆ. ಈ ಬಾರಿಯಾದರೂ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿ' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿತ್ತು.

ಲೋಪಗಳು ಕಂಡುಬಂದರೆ ಸಿಯುಇಟಿ–ಯುಜಿ ಮರುಪರೀಕ್ಷೆ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ -ಯುಜಿ) ಬಗೆಗಿನ ಆರೋಪಗಳು ಸಾಬೀತಾದರೆ ಜುಲೈ 15ರಿಂದ 19ರವರೆಗೆ ಮರು ಪರೀಕ್ಷೆ ನಡೆಸುವುದಾಗಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಭಾನುವಾರ ತಿಳಿಸಿದೆ

ಸಾರ್ವಜನಿಕರು ತಿಳಿಸಿರುವ ಲೋಪಗಳನ್ನು ಸರಿಪಡಿಸಿಕೊಂಡು ಸಿಯುಇಟಿ–ಯುಜಿ ಮರುಪರೀಕ್ಷೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರೊಂದಿಗೆ ಪದವಿ ಪೂರ್ವ ಪ್ರವೇಶ ಪರೀಕ್ಷೆಯ ಉತ್ತರಗಳನ್ನು ಪ್ರಕಟಿಸಿರುವ ಎನ್‌ಟಿಎ, ಕೀ ಉತ್ತರಗಳ ಬಗ್ಗೆ ಆಕ್ಷೇಪವಿದ್ದರೆ ಜುಲೈ 9ರಂದು ಸಂಜೆ 6 ಗಂಟೆಯಿಂದ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

'ಅಭ್ಯರ್ಥಿಗಳು ಎತ್ತಿರುವ ಪ್ರಶ್ನೆಗಳ ಬಗ್ಗೆ ವಿಷಯ ತಜ್ಞರ ಸಮಿತಿಯು ಪರಿಶೀಲನೆ ನಡೆಸುತ್ತಿದೆ. ಪರಿಷ್ಕೃತ ಕೀ ಉತ್ತರದ ಆಧಾರದಲ್ಲಿ ಫಲಿತಾಂಶ ಪ್ರಕಟಿಸಲಾಗುವುದು' ಎಂದು ತಿಳಿಸಿದ್ದಾರೆ.

ನೀಟ್, ನೆಟ್‌ಗಳಂತಹ ಪರೀಕ್ಷೆಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಆರೋಪಗಳು ಕೇಳಿಬಂದಿರುವ ಕಾರಣ ಸಿಯುಇಟಿ–ಯುಜಿಯ ಫಲಿತಾಂಶ ಬಿಡುಗಡೆ ವಿಳಂಬವಾಗಿದೆ.

ಎನ್‌ಟಿಯು ಮೇ 16ರಿಂದ ದೇಶದಾದ್ಯಂತ ಸಿಯುಇಟಿ -ಯುಜಿ ಪರೀಕ್ಷೆ ನಡೆಸಿತ್ತು, ಆದರೆ ತಾಂತ್ರಿಕ ದೋಷಗಳಿಂದ ದೆಹಲಿಯಲ್ಲಿ ಪರೀಕ್ಷೆಯನ್ನು ಕೆಲ ದಿನಗಳ ಬಳಿಕ ನಡೆಸಲಾಗಿತ್ತು.

ಚೆನ್ನೈನ ಪೆರಂಬೂರಿನಲ್ಲಿರುವ ಖಾಸಗಿ ಶಾಲೆಯೊಂದರಲ್ಲಿ ಇರಿಸಲಾಗಿದ್ದ ಆರ್ಮ್‌ಸ್ಟ್ರಾಂಗ್ ಅವರ ಮೃತದೇಹಕ್ಕೆ ಅಂತಿಮ ನಮನ ಸಲ್ಲಿಸಿದ ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ

ಪಕ್ಷದ ಕಚೇರಿಯಲ್ಲಿ ಆರ್ಮ್‌ಸ್ಟ್ರಾಂಗ್ ಅಂತ್ಯಕ್ರಿಯೆಗೆ ಅವಕಾಶ ನಿರಾಕರಣೆ

ಚೆನ್ನೈ (ಪಿಟಿಐ): ಹತ್ಯೆಯಾದ ತಮಿಳುನಾಡಿನ ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಆರ್ಮ್‌ಸ್ಟ್ರಾಂಗ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ಚೆನ್ನೈನಲ್ಲಿರುವ ಪಕ್ಷದ ಕಚೇರಿಯ ಆವರಣದಲ್ಲಿ ನಡೆಸಲು ಮದ್ರಾಸ್ ಹೈಕೋರ್ಟ್ ಅನುಮತಿ ನಿರಾಕರಿಸಿದೆ.

ಇದರ ಬದಲಾಗಿ ಪಕ್ಕದ ತಿರುವಳ್ಳೂರು ಜಿಲ್ಲೆಯಲ್ಲಿ ಅಂತ್ಯಕ್ರಿಯೆ ನಡೆಸಲು ನ್ಯಾಯಾಲಯ ಅವಕಾಶ ನೀಡಿದೆ.

ಪಕ್ಷದ ಕಚೇರಿ ಆವರಣದಲ್ಲಿ ಅಂತ್ಯಕ್ರಿಯೆಗೆ ಅನುಮತಿ ಕೋರಿ ಆರ್ಮ್‌ಸ್ಟ್ರಾಂಗ್ ಅವರ ಪತ್ನಿ ಹೈಕೋರ್ಟ್ ಮೊರೆ ಹೋಗಿದ್ದರು. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಭಾನುವಾರ ನಡೆಸಿತು. ಪಕ್ಷದ ಕಚೇರಿಯು ಜನವಸತಿ ಪ್ರದೇಶದಲ್ಲಿದೆ, ಹೀಗಾಗಿ ಅಲ್ಲಿ ಅಂತ್ಯಕ್ರಿಯೆ ನಡೆಸುವುದು ಸರಿಯಲ್ಲ ಎಂದು ಸರ್ಕಾರ ಅರ್ಜಿಯನ್ನು ವಿರೋಧಿಸಿತು.

ತಿರುವಳ್ಳೂರಿನಲ್ಲಿರುವ ಆರ್ಮ್‌ಸ್ಟ್ರಾಂಗ್ ಅವರ ಸಂಬಂಧಿಕರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಸಲು ಅನುಮತಿ ನೀಡಿದ್ದು, ಈ ಸಂಬಂಧ ಆದೇಶವನ್ನೂ ಹೊರಡಿಸಲಾಗಿದೆ ಎಂದು ಸರ್ಕಾರ ಹೇಳಿತು. ಇದಕ್ಕೆ ನ್ಯಾಯಾಲಯ ಸಮ್ಮತಿಸಿತು. ಆರ್ಮ್‌ಸ್ಟ್ರಾಂಗ್ ಅವರ ಪತ್ನಿಯೂ ಅದನ್ನು ಒಪ್ಪಿಕೊಂಡರು.

ಸಿಬಿಐ ತನಿಖೆಗೆ ಮಾಯಾವತಿ ಆಗ್ರಹ

ಚೆನ್ನೈ(ಪಿಟಿಐ): ತಮಿಳುನಾಡಿನ ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಆರ್ಮ್‌ಸ್ಟ್ರಾಂಗ್ ಹತ್ಯೆ ಸಂಬಂಧ ಇದುವರೆಗೆ ಬಂಧಿಸಲ್ಪಟ್ಟವರು ನಿಜವಾದ ಅಪರಾಧಿಗಳಲ್ಲ ಎಂದು ಹೇಳಿರುವ ಪಕ್ಷದ ಮುಖ್ಯಸ್ಥೆ ಮಾಯಾವತಿ, ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಶನಿವಾರ ಪೊಲೀಸರು ತಿಳಿಸಿದ್ದರು. ಆದರೆ, ಇವರು ನಿಜವಾದ ಅಪರಾಧಿಗಳಲ್ಲ ಎಂದು ಮಾಯಾವತಿ ಹೇಳಿದ್ದಾರೆ.

ಪೆರಂಬೂರಿನ ಖಾಸಗಿ ಶಾಲೆಯೊಂದರಲ್ಲಿ ಇಟ್ಟಿದ್ದ ಆರ್ಮ್‌ಸ್ಟ್ರಾಂಗ್ ಅವರ ಪಾರ್ಥಿವ ಶರೀರಕ್ಕೆ ಭಾನುವಾರ ಪುಷ್ಪನಮನ ಸಲ್ಲಿಸಿದ ಬಳಿಕ ಮಾತನಾಡಿದ ಅವರು, 'ಆರ್ಮ್‌ಸ್ಟ್ರಾಂಗ್ ಅವರನ್ನು ಗುಂಪೊಂದು ಹತ್ಯೆ ಮಾಡಿರುವುದು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ ಎಂಬುದನ್ನು ತೋರಿಸುತ್ತದೆ. ಅವರನ್ನು ಹತ್ಯೆಮಾಡಿದ ನಿಜವಾದ ಅಪರಾಧಿಗಳನ್ನು ಬಂಧಿಸಿಲ್ಲ. ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸಬೇಕು' ಎಂದು ಒತ್ತಾಯಿಸಿದರು.

ಆರ್ಮ್‌ಸ್ಟ್ರಾಂಗ್ ಹತ್ಯೆಯಿಂದ ರಾಜ್ಯದಲ್ಲಿ ದಲಿತರು ಆತಂಕಗೊಂಡಿದ್ದಾರೆ. ತಮ್ಮ ಸುರಕ್ಷತೆಯನ್ನು ಖಚಿತಪಡಿಸುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ. ಬಿಎಸ್‌ಪಿಯು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಆದರೆ, ಕಾರ್ಯಕರ್ತರು ಕಾನೂನು ಸುವ್ಯವಸ್ಥೆಯನ್ನು ತಮ್ಮ ಕೈಗೆ ತೆಗೆದುಕೊಳ್ಳಬಾರದು ಎಂದರು.

ಮಹಿಳೆಯ ಘನತೆಗೆ ಕುಂದು ಉಂಟು ಮಾಡಿದ ಆರೋಪದಡಿ ಎಫ್‌ಐಆರ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದಡಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮಹುವಾ ಮೊಯಿತ್ರಾ



ರೇಖಾ ಶರ್ಮಾ

ಉತ್ತರಪ್ರದೇಶದ ಹಾಥರಸ್‌ನಲ್ಲಿ ಭೀಕರ ಕಾಲ್ತುಳಿತ ಸಂಭವಿಸಿರುವ ಸ್ಥಳಕ್ಕೆ ಭೇಟಿ ನೀಡಿದ ವಿಡಿಯೊವನ್ನು ರೇಖಾ ಶರ್ಮ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಮಹುವಾ, 'ರೇಖಾ ತನ್ನ ಬಾಸ್‌ನ ಪೈಜಾಮವನ್ನು ಹಿಡಿದುಕೊಳ್ಳುವಲ್ಲೇ ನಿರತರಾಗಿದ್ದರು' ಎಂದು ಕಾಮೆಂಟ್ ಮಾಡಿದ್ದರು. ಬಳಿಕ ಅದನ್ನು ತೆಗೆದು ಹಾಕಿದ್ದರು.

ಭಾರತೀಯ ನ್ಯಾಯಸಂಹಿತೆಯ 79ನೇ ಕಲಂನಡಿ ಪ್ರಕರಣ ದಾಖಲಾಗಿದ್ದು, ಹೊಸ ಕಾನೂನು ಜಾರಿಯಾದ ಬಳಿಕ ಈ ಕಾಯ್ದೆಯಡಿ ದೆಹಲಿ ಪೊಲೀಸರ ವಿಶೇಷ ಘಟಕ ದಾಖಲಿಸಿದ ಮೊದಲ ಪ್ರಕರಣವಿದು.

'ಅಸಭ್ಯ ಮತ್ತು ಅತಿರೇಕದ ಹೇಳಿಕೆಗಳಿಂದ ಮಹಿಳೆಯ ಘನತೆಗೆ ಧಕ್ಕೆಯುಂಟು ಮಾಡಿದ ಮಹುವಾ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ 3 ದಿನಗಳೊಳಗಾಗಿ ಆಯೋಗಕ್ಕೆ ಸಮಗ್ರ ವರದಿಯನ್ನು ನೀಡಬೇಕು' ಎಂದು ಆಯೋಗ ಸೂಚಿಸಿದೆ.

रजिस्ट्री सं. डी.एल.- 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- -18062024-254765
CG-DL-E- -18062024-254765
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 2187] NEW DELHI, FRIDAY, JUNE 14, 2024/JYAISHTHA 24, 1946

ಭಾರತ ಸರಕಾರದ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ಸಂ.ಎಲ್ಎಕ್ಯೂ/ರಾಹೆ/ಉಪವಿ/367/2023–24 ದಿನಾಂಕ:

ಅಧಿಸೂಚನೆ

ನವದೆಹಲಿ, ದಿನಾಂಕ:–14ನೇ ಜೂನ್ 2024

ಎಸ್.ಓ.ನಂ.2305(ಇ) ಕೇಂದ್ರ ಸರಕಾರಕ್ಕೆ ಪ್ರಸ್ತುತ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–367 ರಲ್ಲಿ ಕಿಮೀ.104.794 (ಪಟ್ಟದಕಲ್ಲು) ರಿಂದ ಕಿಮೀ. 133.00 (ಶಿರೂರು ಕ್ರಾಸ್) ರವರೆಗೆ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂದು ಕಂಡು ಬಂದಿರುತ್ತದೆ, ಆದಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ಕಲಂ ಹೆಚ್ಚುವರಿ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನ ಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂ–ಮಾಲೀಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಇದ್ದವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರ ಅಂದರೆ ಉಪವಿಭಾಗ ಅಧಿಕಾರಿಗಳು ಬಾಗಲಕೋಟ ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಯಿಸಿ ಈ ಬಗ್ಗೆ ಇತರ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು. ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ 3ಸಿ (2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ. ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಇದ್ದವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ: ಈ ಕೆಳಕಂಡ ಶೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯ ವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/–
ಉಪ ವಿಭಾಗಾಧಿಗಾರಿಗಳು ಹಾಗೂ ಭೂಸ್ವಾಧಿನ ಸಕ್ಷಮ ಪ್ರಾಧಿಕಾರ
ರಾಷ್ಟ್ರೀಯ ಹೆದ್ದಾರಿ 367, ಬಾಗಲಕೋಟೆ"

ಅನುಸೂಚಿ

ಕರ್ನಾಟಕ ರಾಜ್ಯದ ಬಾಗಲಕೋಟೆ ಜಿಲ್ಲೆಯಲ್ಲಿ ಹಾಯ್ದು ಹೋಗಿರುವ (ಬಾಣಾಪುರ ಗದ್ದನಕೇರಿ ಸೆಕ್ಷನ್) ರಾಷ್ಟ್ರೀಯ ಹೆದ್ದಾರಿ–367ರ ಕಿಮೀ.104.794 (ಪಟ್ಟದಕಲ್ಲು) ರಿಂದ ಕಿಮೀ. 133.00 (ಶಿರೂರು ಕ್ರಾಸ್) ವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ ಜಿಲ್ಲೆ : ಬಾಗಲಕೋಟೆ

ಅ ನಂ	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)
1	2	3	4	5	6
ತಾಲೂಕು: ಬದಾಮಿ					ಗ್ರಾಮ: ಪಟ್ಟದಕಲ್ಲು
1	132	ಖಾಸಗಿ	ತರಿ	1.34	0.000134
2	141	ಖಾಸಗಿ	ತರಿ	628.25	0.062825
3	147	ಖಾಸಗಿ	ತರಿ	526.916	0.0526916
4	148	ಖಾಸಗಿ	ತರಿ	233.16	0.023316
5	18	ಖಾಸಗಿ	ತರಿ	1069.43	0.106943
6	22	ಖಾಸಗಿ	ತರಿ	97.04	0.009704
7	26	ಖಾಸಗಿ	ತರಿ	411.043	0.0411043
8	27	ಖಾಸಗಿ	ತರಿ	42.756	0.0042756
9	29	ಖಾಸಗಿ	ತರಿ	82.17	0.008217
10	30	ಖಾಸಗಿ	ತರಿ	45.586	0.0045586
11	33	ಖಾಸಗಿ	ತರಿ	199.51	0.019951
12	35	ಖಾಸಗಿ	ತರಿ	128.926	0.0128926
13	36	ಖಾಸಗಿ	ತರಿ	111.34	0.011134
14	37	ಖಾಸಗಿ	ಖುಷ್ಕಿ	55.19	0.005519
15	38	ಖಾಸಗಿ	ತರಿ	120.34	0.012034
16	39	ಖಾಸಗಿ	ತರಿ	39.757	0.0039757
17	45	ಖಾಸಗಿ	ತರಿ	83.756	0.0083756
18	46	ಖಾಸಗಿ	ತರಿ	103.926	0.0103926
19	47	ಖಾಸಗಿ	ತರಿ	171.926	0.0171926
20	48	ಖಾಸಗಿ	ತರಿ	4.586	0.0004586
21	49	ಖಾಸಗಿ	ತರಿ	48.17	0.004817
22	50	ಖಾಸಗಿ	ತರಿ	52.756	0.0052756
23	51	ಖಾಸಗಿ	ತರಿ	203.511	0.0203511
24	54	ಖಾಸಗಿ	ತರಿ	299.436	0.0299436
25	55	ಖಾಸಗಿ	ತರಿ	389.436	0.0389436
26	56	ಖಾಸಗಿ	ತರಿ	282.68	0.028268
27	57	ಖಾಸಗಿ	ತರಿ	37.586	0.0037586
28	60	ಖಾಸಗಿ	ತರಿ	152.096	0.0152096
29	61	ಖಾಸಗಿ	ತರಿ	55.19	0.005519
30	62	ಖಾಸಗಿ	ತರಿ	81.682	0.0081682
31	69	ಖಾಸಗಿ	ತರಿ	21.929	0.0021929
32	76	ಖಾಸಗಿ	ತರಿ	136.51	0.013651
33	77	ಖಾಸಗಿ	ತರಿ	237.17	0.023717
34	78	ಖಾಸಗಿ	ತರಿ	60.85	0.006085
ತಾಲೂಕು :ಬಾಗಲಕೋಟೆ					ಗ್ರಾಮ: ಶಿರೂರು
35	1238	ಖಾಸಗಿ	ಖುಷ್ಕಿ	12.65	0.001265
36	1239	ಖಾಸಗಿ	ತರಿ/ಖುಷ್ಕಿ	63.23	0.006323
37	1244	ಖಾಸಗಿ	ಎನ್.ಎ	50.58	0.005058
ತಾಲೂಕು: ಗುಳೇದಗುಡ್ಡ					ಗ್ರಾಮ: ಆಸಂಗಿ
38	24	ಖಾಸಗಿ	ತರಿ	13.76	0.001376
ತಾಲೂಕು: ಗುಳೇದಗುಡ್ಡ					ಗ್ರಾಮ: ಪರ್ವತಿ
39	32	ಖಾಸಗಿ	ತರಿ	768.23	0.076823
40	33	ಖಾಸಗಿ	ತರಿ	1410.48	0.141048
41	34	ಖಾಸಗಿ	ತರಿ	1668.82	0.166882
42	35	ಖಾಸಗಿ	ತರಿ	339.85	0.033985
43	38	ಖಾಸಗಿ	ತರಿ	33.586	0.0033586
44	39	ಖಾಸಗಿ	ಖುಷ್ಕಿ	2.586	0.00025856
45	40	ಖಾಸಗಿ	ತರಿ	204.926	0.02049256
46	42	ಖಾಸಗಿ	ತರಿ	196.340	0.019634
47	44	ಖಾಸಗಿ	ತರಿ/ಖುಷ್ಕಿ	108.340	0.010834
48	45	ಖಾಸಗಿ	ತರಿ	64.170	0.006417
49	46	ಖಾಸಗಿ	ತರಿ	22.170	0.002217
50	50	ಖಾಸಗಿ	ತರಿ	46.926	0.0046926
51	52	ಖಾಸಗಿ	ತರಿ	192.19	0.019219
ತಾಲೂಕು: ಗುಳೇದಗುಡ್ಡ					ಗ್ರಾಮ: ಕಟಗನಹಳ್ಳಿ
52	11	ಖಾಸಗಿ	ತರಿ	308.946	0.0308946
53	12	ಖಾಸಗಿ	ತರಿ	22.756	0.0022756
54	13	ಖಾಸಗಿ	ತರಿ	51.34	0.005134
55	20	ಖಾಸಗಿ	ತರಿ	33.022	0.0033022
56	87	ಖಾಸಗಿ	ತರಿ	134.344	0.0134344
57	88	ಖಾಸಗಿ	ತರಿ	17.68	0.001768
58	89	ಖಾಸಗಿ	ತರಿ	349.666	0.0349666
59	9	ಖಾಸಗಿ	ತರಿ	25.586	0.0025586
60	90	ಖಾಸಗಿ	ತರಿ	65.23	0.006523
61	93	ಖಾಸಗಿ	ತರಿ	291.08	0.029108
62	94	ಖಾಸಗಿ	ತರಿ	42.616	0.0042616
63	95	ಖಾಸಗಿ	ತರಿ	68.02	0.006802
64	96	ಖಾಸಗಿ	ತರಿ	121.612	0.0121612
65	97	ಖಾಸಗಿ	ತರಿ	131.756	0.0131756
ತಾಲೂಕು: ಗುಳೇದಗುಡ್ಡ					ಗ್ರಾಮ: ಕೊಟ್ನಳ್ಳಿ
66	11	ಖಾಸಗಿ	ತರಿ	111.51	0.011151
67	110	ಖಾಸಗಿ	ತರಿ	158.51	0.015851
68	12	ಖಾಸಗಿ	ತರಿ	54.93	0.005493
69	13	ಖಾಸಗಿ	ತರಿ	131.34	0.013134
70	14	ಖಾಸಗಿ	ತರಿ	41.81	0.004181
71	21	ಖಾಸಗಿ	ತರಿ	65.756	0.0065756
72	22	ಖಾಸಗಿ	ತರಿ	150.34	0.015034
73	25	ಖಾಸಗಿ	ತರಿ	77.756	0.0077756
ತಾಲೂಕು: ಗುಳೇದಗುಡ್ಡ					ಗ್ರಾಮ: ನಾಗರಾಳ ಎಸ್ ಪಿ
74	1	ಖಾಸಗಿ	ತರಿ	1668.4884	0.16684884
75	10	ಖಾಸಗಿ	ತರಿ	101.3424	0.01013424
76	12	ಖಾಸಗಿ	ತರಿ	275.9868	0.02759868
77	128	ಖಾಸಗಿ	ತರಿ	169.3424	0.01693424
78	129	ಖಾಸಗಿ	ತರಿ	43.1712	0.00431712
79	13	ಖಾಸಗಿ	ತರಿ	176.5112	0.01765112
80	18	ಖಾಸಗಿ	ತರಿ	214.7756	0.02147756
81	21	ಖಾಸಗಿ	ತರಿ	88.2656	0.00882656
82	24	ಖಾಸಗಿ	ತರಿ	542.0412	0.05420412
83	25	ಖಾಸಗಿ	ತರಿ	187.4368	0.187437
84	29	ಖಾಸಗಿ	ಖುಷ್ಕಿ	208.948	0.0208948
85	30	ಖಾಸಗಿ	ತರಿ	594.6526	0.0594653
86	33	ಖಾಸಗಿ	ತರಿ	699.3812	0.0699381
87	34	ಖಾಸಗಿ	ತರಿ	451.1156	0.04511156
88	35	ಖಾಸಗಿ	ತರಿ	100.3424	0.01003424
89	36	ಖಾಸಗಿ	ತರಿ	212.51	0.021251
90	37	ಸಾಮಾನ್ಯ	ತರಿ	73.3412	0.00733412
91	39	ಖಾಸಗಿ	ತರಿ	217.0956	0.02170956
92	4	ಖಾಸಗಿ	ತರಿ	574.532	0.0574532
93	40	ಖಾಸಗಿ	ತರಿ	144.68	0.014468
94	43	ಖಾಸಗಿ	ತರಿ	51.5112	0.00515112
95	47	ಸಾಮಾನ್ಯ	ತರಿ	253.7756	0.02537756
96	49	ಖಾಸಗಿ	ತರಿ	56.7566	0.00567566
97	5	ಖಾಸಗಿ	ತರಿ	552.0412	0.05520412
98	51	ಖಾಸಗಿ	ತರಿ	276.4368	0.02764368
99	52	ಖಾಸಗಿ	ಖುಷ್ಕಿ	226.6824	0.02266824
100	53	ಖಾಸಗಿ	ತರಿ	130.34	0.013034
101	55	ಖಾಸಗಿ	ತರಿ	410.1156	0.04101156
102	56	ಖಾಸಗಿ	ತರಿ	287.7756	0.02877756
103	6	ಖಾಸಗಿ	ತರಿ	260.85	0.026085
104	75	ಖಾಸಗಿ	ತರಿ	530.4568	0.05304568
105	77	ಖಾಸಗಿ	ತರಿ	51.7556	0.00517556
106	78	ಖಾಸಗಿ	ತರಿ	1192.3056	0.11923056
107	8	ಖಾಸಗಿ	ತರಿ	96.17	0.009617
108	81	ಖಾಸಗಿ	ತರಿ	1509.5356	0.15095356
109	82	ಖಾಸಗಿ	ತರಿ	904.8756	0.09048756
110	9	ಖಾಸಗಿ	ತರಿ	90.17	0.009017
ತಾಲೂಕು: ಗುಳೇದಗುಡ್ಡ					ಗ್ರಾಮ: ಸಬ್ಬಲಹುಣಸಿ
111	3	ಖಾಸಗಿ	ಖುಷ್ಕಿ	148.2656	0.01482656
112	4	ಖಾಸಗಿ	ತರಿ	266.03	0.026603
ತಾಲೂಕು: ಗುಳೇದಗುಡ್ಡ					ಗ್ರಾಮ: ಲಾಯಗುಂಡಿ
113	40	ಖಾಸಗಿ	ತರಿ	1601.91	0.160191
ತಾಲೂಕು: ಗುಳೇದಗುಡ್ಡ					ಗ್ರಾಮ: ಹರದೊಳ್ಳಿ
114	101	ಖಾಸಗಿ	ತರಿ/ಖುಷ್ಕಿ	810.53	0.081053
115	62	ಖಾಸಗಿ	ತರಿ	937.34	0.093734
116	66	ಖಾಸಗಿ	ಖುಷ್ಕಿ	182.34	0.018234
117	67	ಖಾಸಗಿ	ತರಿ/ಖುಷ್ಕಿ	132.1	0.01321
118	72	ಖಾಸಗಿ	ತರಿ	323.096	0.0323096
119	94	ಖಾಸಗಿ	ಖುಷ್ಕಿ	96.17	0.009617
120	95	ಖಾಸಗಿ	ತರಿ	131.76	0.013176
121	98	ಖಾಸಗಿ	ತರಿ/ಖುಷ್ಕಿ	1463.31	0.146331
122	99	ಖಾಸಗಿ	ಎನ್.ಎ	827.122	0.0827122
ತಾಲೂಕು: ಗುಳೇದಗುಡ್ಡ					ಗ್ರಾಮ: ಬೂದನಗಡ
123	51	ಖಾಸಗಿ	ಖುಷ್ಕಿ	2.17	0.000217
124	56	ಖಾಸಗಿ	ಖುಷ್ಕಿ	117.756	0.0117756
125	58	ಖಾಸಗಿ	ಖುಷ್ಕಿ	113.756	0.0113756
126	59	ಖಾಸಗಿ	ಖುಷ್ಕಿ	61.17	0.006117
127	61	ಖಾಸಗಿ	ಖುಷ್ಕಿ	273.44	0.027344
128	87	ಖಾಸಗಿ	ತರಿ	23.926	0.0023926
				ಒಟ್ಟು	**3.5008109**

[F. No. RW/BNG/KNT/NH-367/3A]
ABHAY JAIN, Dy. Secy.

ಈರುಳ್ಳಿ ಬಿತ್ತನೆ ಗುರಿ ಶೇ 27ರಷ್ಟು ಏರಿಕೆ

ಆಲೂಗಡ್ಡೆ ಬಿತ್ತನೆ ಚುರುಕು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧೆಡೆ ಉತ್ತಮ ಮಳೆ ಸುರಿಯುತ್ತಿರುವುದರಿಂದ ಮುಂಗಾರು ಹಂಗಾಮಿನಲ್ಲಿ ಈರುಳ್ಳಿ ಮತ್ತು ಆಲೂಗಡ್ಡೆ ಬಿತ್ತನೆಯು ಚುರುಕುಗೊಂಡಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಸದ್ಯ ಬೆಳೆಗಾರರು ದಾಸ್ತಾನು ಇಟ್ಟಿದ್ದ ಈರುಳ್ಳಿ ಮತ್ತು ಆಲೂಗಡ್ಡೆಯನ್ನು ಮಾರುಕಟ್ಟೆ ಪ್ರವೇಶಿಸಿದೆ. ಹಾಗಾಗಿ, ಈ ಎರಡರ ಬೆಲೆಯು ಸ್ಥಿರವಾಗಿದೆ ಎಂದು ಹೇಳಿದೆ.

ಮಳೆ ಸುರಿಯುತ್ತಿರುವುದರಿಂದ ವಾತಾವರಣದಲ್ಲಿ ತೇವಾಂಶ ಹೆಚ್ಚಿರುತ್ತದೆ. ಇದರಿಂದ ಈರುಳ್ಳಿ ದಾಸ್ತಾನಿಟ್ಟಿರುವ ರೈತರಿಗೆ ನಷ್ಟ ಕಟ್ಟಿಟ್ಟಬುತ್ತಿ. ಹಾಗಾಗಿ, ಹಿಂಗಾರು ಅವಧಿಯಲ್ಲಿ ಕಟಾವು ಮಾಡಿದ್ದ ಈರುಳ್ಳಿಯು ಮಾರುಕಟ್ಟೆಯಲ್ಲಿ ಆವಕವಾಗುತ್ತಿದೆ ಎಂದು ತಿಳಿಸಿದೆ.

ಮುಂಗಾರು ಋತುವಿನಲ್ಲಿ 3.61 ಲಕ್ಷ ಹೆಕ್ಟೇರ್‌ನಲ್ಲಿ ಈರುಳ್ಳಿ ಬಿತ್ತನೆಯ ಗುರಿ ಹೊಂದಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಬಿತ್ತನೆ ಪ್ರದೇಶದಲ್ಲಿ ಶೇ 27ರಷ್ಟು ಏರಿಕೆಯಾಗಲಿದೆ ಎಂದು ತಿಳಿಸಿದೆ.

ಹಿಂಗಾರು ಋತುವಿನಲ್ಲಿ ಹೆಚ್ಚಾಗಿ ಆಲೂಗಡ್ಡೆ ಬೆಳೆಯಲಾಗುತ್ತದೆ. ಆದರೆ, ಕರ್ನಾಟಕ, ಹಿಮಾಚಲ ಪ್ರದೇಶ, ಉತ್ತರಾಖಂಡ, ಮೇಘಾಲಯ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಮುಂಗಾರು ಅವಧಿಯಲ್ಲಿ ಬಿತ್ತನೆ ಮಾಡುವುದು ಹೆಚ್ಚು. ಈ ಫಸಲು ಸೆಪ್ಟೆಂಬರ್‌–ನವೆಂಬರ್‌ನಲ್ಲಿ ಮಾರುಕಟ್ಟೆಗೆ ಪೂರೈಕೆಯಾಗುತ್ತದೆ ಎಂದು ವಿವರಿಸಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಮುಂಗಾರಿನಲ್ಲಿ ಆಲೂಗಡ್ಡೆ ಬಿತ್ತನೆ ಪ್ರದೇಶದಲ್ಲಿ ಶೇ 12ರಷ್ಟು ಏರಿಕೆಯಾಗಿದೆ. ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ನಿಗದಿತ ಬಿತ್ತನೆ ಪೂರ್ಣಗೊಂಡಿದೆ.

ಕರ್ನಾಟಕ ಸೇರಿ ಇತರ ರಾಜ್ಯಗಳಲ್ಲಿ ಬಿತ್ತನೆ ಪ್ರಕ್ರಿಯೆ ಉತ್ತಮವಾಗಿದೆ. ಹಿಂಗಾರು ಅವಧಿಯಲ್ಲಿ 273 ಲಕ್ಷ ಟನ್‌ನಷ್ಟು ಆಲೂಗಡ್ಡೆಯನ್ನು ಶೈತ್ಯಾಗಾರದಲ್ಲಿ ದಾಸ್ತಾನು ಮಾಡಲಾಗಿದೆ. ಹಾಗಾಗಿ, ಮಾರುಕಟ್ಟೆಯಲ್ಲಿ ಅಭಾವ ತಲೆದೋರುವುದಿಲ್ಲ ಎಂದು ವಿವರಿಸಿದೆ.

ದೇಶದಲ್ಲಿ ಕಳೆದ ವರ್ಷ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪಾದನೆ ಇಳಿಕೆಯಾಗಿತ್ತು. ಇದರಿಂದ ಪ್ರಸಕ್ತ ವರ್ಷ ಮಾರುಕಟ್ಟೆಯಲ್ಲಿ ಇವುಗಳ ಧಾರಣೆ ಏರಿಕೆಯಾಗಿತ್ತು. ಬೇಸಿಗೆಯಲ್ಲಿ ಬಿಸಿಲ ಝಳ ಹೆಚ್ಚಳ, ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಕಡಿಮೆ ಇತ್ತು. ಹಾಗಾಗಿ ಬೆಂಡೆಕಾಯಿ, ಸೋರೆಕಾಯಿ, ಬೀನ್ಸ್ ಮತ್ತು ಎಲೆಕೋಸು ಬೆಲೆಯಲ್ಲಿ ಏರಿಕೆಯಾಗಿತ್ತು. ಗ್ರಾಹಕರು ಆಲೂಗಡ್ಡೆ, ಈರುಳ್ಳಿ, ಟೊಮೆಟೊ ಬಳಕೆಯತ್ತ ಚಿತ್ತ ನೆಟ್ಟಿದ್ದರಿಂದ ಇವುಗಳ ಬೆಲೆಯಲ್ಲಿ ಏರಿಕೆಯಾಗಿತ್ತು ಎಂದು ವಿವರಿಸಿದೆ.

ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್: 100 ಹೊಸ ಶಾಖೆ ಸ್ಥಾಪನೆ

ನವದೆಹಲಿ (ಪಿಟಿಐ): ದೇಶದಲ್ಲಿ ಬ್ಯಾಂಕ್‌ನ ವಹಿವಾಟು ವಿಸ್ತರಣೆಯ ಭಾಗವಾಗಿ ಸರ್ಕಾರಿ ಸ್ವಾಮ್ಯದ ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೊಸದಾಗಿ 100 ಶಾಖೆಗಳನ್ನು ಮತ್ತು 100 ಎಟಿಎಂಗಳನ್ನು ತೆರೆಯಲು ನಿರ್ಧರಿಸಿದೆ.

ಹೊಸ ಶಾಖೆ ಆರಂಭಿಸುವುದರಿಂದ ಬ್ಯಾಂಕ್‌ನ ಒಟ್ಟು ಶಾಖೆಗಳ ಸಂಖ್ಯೆ 1,665ಕ್ಕೆ ಮುಟ್ಟಲಿದೆ. ಒಟ್ಟು ಎಟಿಎಂ ಸಂಖ್ಯೆ 1,135ಕ್ಕೆ ತಲುಪಲಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸ್ವರೂಪ್ ಕುಮಾರ್ ಸಹಾ ತಿಳಿಸಿದ್ದಾರೆ.

ಗ್ರಾಮೀಣ ಆರ್ಥಿಕತೆಯ ಪರಿವರ್ತನೆಯಲ್ಲಿ ವ್ಯಾಪಾರ ಕರೆಸ್ಪಾಂಡೆಂಟ್‌ಗಳ ಪಾತ್ರ ಹೆಚ್ಚಿದೆ. ಈ ಸೇವೆಯ ವಿಸ್ತರಣೆಗೆ ಒತ್ತು ನೀಡಲಾಗುವುದು ಎಂದರು.

₹2 ಸಾವಿರ ಕೋಟಿ ಸಂಗ್ರಹ: ವಹಿವಾಟು ಬೆಳವಣಿಗೆಗಾಗಿ ಅರ್ಹ ಸಾಂಸ್ಥಿಕ ಹೂಡಿಕೆದಾರರ (ಕ್ಯೂಐಪಿ) ಮೂಲಕ ಪ್ರಸಕ್ತ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ₹2 ಸಾವಿರ ಕೋಟಿ ಸಂಗ್ರಹಿಸಲು ಬ್ಯಾಂಕ್ ತೀರ್ಮಾನಿಸಿದೆ. ಇದಕ್ಕೆ ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ ಎಂದು ತಿಳಿಸಿದ್ದಾರೆ.

ಮಾರುಕಟ್ಟೆಯ ಸ್ಥಿತಿ ಆಧರಿಸಿ ಮೂರನೇ ತ್ರೈಮಾಸಿಕದ ವೇಳೆಗೆ ಬಂಡವಾಳ ಸಂಗ್ರಹಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ.

ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ನ ಬಂಡವಾಳ ಸುರಕ್ಷತೆ ಮಾನದಂಡದ ಅನುಪಾತ ಪರ್ಯಾಪ್ತತಾ (ಸಿಆರ್‌ಎಆರ್) ಶೇ 17.10ರಷ್ಟಿದೆ.

ಛತ್ತೀಸಗಢ: ಐವರು ನಕ್ಸಲರ ಬಂಧನ

ಸುಕ್ಮಾ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಐವರು ನಕ್ಸಲರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ಎರಡು ಬ್ಯಾರಲ್ ಗ್ರೆನೇಡ್ ಲಾಂಚರ್ ಶೆಲ್‌ಗಳು ಮತ್ತು ಟಿಫಿನ್ ಬಾಂಬ್ ಸೇರಿ ಸ್ಫೋಟಕ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ), ಬಸ್ತಾರ್ ಫೈಟರ್ಸ್ ಮತ್ತು ಜಿಲ್ಲಾ ಪಡೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಜಾಗರಗುಂಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ನಕ್ಸಲರನ್ನು ಬಂಧಿಸಲಾಗಿದೆ. ಇವರು ಚಿಂತಾಲ್ನಾರ್ ಪೊಲೀಸ್ ಠಾಣಾ ವ್ಯಾಪ್ತಿ ಪ್ರದೇಶದ ನಿವಾಸಿಗಳಾಗಿದ್ದು ಸುರ್ಪಣಗುಡ ಪ್ರದೇಶದಲ್ಲಿ ಸಕ್ರಿಯರಾಗಿದ್ದರು ಎಂದು ತಿಳಿಸಿದ್ದಾರೆ.

ತಿಂಗಳ ಆದಾಯಕ್ಕೆ ಹೂಡಿಕೆ ಸೂತ್ರ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಪ್ರತಿ ತಿಂಗಳು ಹೂಡಿಕೆ ಮೊತ್ತದ ಮೇಲೆ ಒಂದಿಷ್ಟು ನಿಶ್ಚಿತ ಆದಾಯ ಬರಬೇಕು ಎಂದು ಅನೇಕರು ಬಯಸುತ್ತಾರೆ. ಹೀಗೆ ಮಾಸಿಕ ಆದಾಯ ನಿರೀಕ್ಷಿಸುವವರಿಗೆ ಹೆಚ್ಚು ರಿಸ್ಕ್ ಇರುವ ಹೂಡಿಕೆಗಳು ಮತ್ತು ಕಡಿಮೆ ರಿಸ್ಕ್ ಇರುವ ಹೂಡಿಕೆಯ ಆಯ್ಕೆಗಳಿವೆ.

ಹೆಚ್ಚು ರಿಸ್ಕ್ ಇರುವ ಹೂಡಿಕೆಗಳಲ್ಲಿ ಗಳಿಕೆ ಸಾಧ್ಯತೆಯೂ ಹೆಚ್ಚು. ಅದೇ ರೀತಿ ಕಡಿಮೆ ರಿಸ್ಕ್ ಇರುವ ಹೂಡಿಕೆಗಳಲ್ಲಿ ಗಳಿಕೆಯೂ ಕಡಿಮೆ. ಬನ್ನಿ, ಕೆಲ ಪ್ರಮುಖ ಲೋ ರಿಸ್ಕ್ ಮತ್ತು ಹೈ ರಿಸ್ಕ್ ಹೂಡಿಕೆ ಆಯ್ಕೆಗಳ ಬಗ್ಗೆ ತಿಳಿಯೋಣ.

ಅಂಚೆ ಕಚೇರಿ ಮಾಸಿಕ ಉಳಿತಾಯ ಯೋಜನೆ (ಪಿಒಎಂಐಎಸ್): ಇದು ಕೇಂದ್ರ ಸರ್ಕಾರದ ಖಾತರಿ ಇರುವ ಸಣ್ಣ ಉಳಿತಾಯ ಯೋಜನೆ. ಹೂಡಿಕೆ ಮೊತ್ತಕ್ಕೆ ಅನುಗುಣವಾಗಿ ಪ್ರತಿ ತಿಂಗಳು ನಿಶ್ಚಿತ ಆದಾಯವನ್ನು ಈ ಯೋಜನೆಯು ತಂದುಕೊಡುತ್ತದೆ. ರಿಸ್ಕ್ ಬೇಡ ಹಣ ಸುರಕ್ಷಿತವಾಗಿರಬೇಕು ಅನ್ನೋರಿಗೆ ಇದು ಹೇಳಿ ಮಾಡಿಸಿದ ಯೋಜನೆ.

ಈ ಯೋಜನೆಯಡಿ ಕನಿಷ್ಠ ₹1 ಸಾವಿರ ಮತ್ತು ಗರಿಷ್ಠ ₹9 ಲಕ್ಷ ಹೂಡಿಕೆ ಮಾಡಬಹುದು. ಜಂಟಿ ಖಾತೆಯಲ್ಲಾದರೆ ₹15 ಲಕ್ಷ ತೊಡಗಿಸಬಹುದು.

ಪ್ರಸ್ತುತ ಈ ಯೋಜನೆಯ ಬಡ್ಡಿ ದರ ಶೇ 7.40ರಷ್ಟಿದ್ದು, ಐದು ವರ್ಷಗಳ ಅವಧಿಗೆ ಹೂಡಿಕೆ ಮಾಡಬೇಕಾಗುತ್ತದೆ. ಅವಧಿಗೆ ಮುನ್ನವೇ ಹೂಡಿಕೆ ಹಿಂಪಡೆದರೆ ದಂಡ ಕಟ್ಟಬೇಕಾಗುತ್ತದೆ. ಈ ಯೋಜನೆಯಲ್ಲಿ ಜಂಟಿಯಾಗಿ ₹15 ಲಕ್ಷ ಹೂಡಿಕೆ ಮಾಡಿದರೆ ಪ್ರತಿ ತಿಂಗಳು ₹9,250 ಆದಾಯ ಸಿಗುತ್ತದೆ.

ಏಕ ವ್ಯಕ್ತಿ ಖಾತೆಯಲ್ಲಿ ಗರಿಷ್ಠ ಮಿತಿ ₹9 ಲಕ್ಷ ಹೂಡಿಕೆ ಮಾಡಿದರೆ ಮಾಸಿಕ ₹5,550 ಲಭಿಸುತ್ತದೆ. ಇದು ತುಂಬಾ ದೊಡ್ಡ ಮೊತ್ತದ ಗಳಿಕೆಯೇನಲ್ಲ. ಆದರೆ, ನಮಗೆ ಬಂಡವಾಳ ಸುರಕ್ಷಿತವಾಗಿರುವ ಜೊತೆಗೆ ನಿಶ್ಚಿತ ಆದಾಯವೂ ಬೇಕು ಎನ್ನುವವರಿಗೆ ಉತ್ತಮ ಯೋಜನೆಯಾಗಿದೆ.

ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್): ಈ ಯೋಜನೆಯಡಿ 5 ವರ್ಷ ಲಾಕಿನ್ ಅವಧಿಯಿದೆ. ಸದ್ಯದ ಬಡ್ಡಿ ದರ ಶೇ 8.2ರಷ್ಟಿದೆ. 60 ವರ್ಷ ಮೇಲ್ಪಟ್ಟವರಿಗೆ ಇದೊಂದು ಉತ್ತಮ ಹೂಡಿಕೆ ಯೋಜನೆ. ಎಸ್‌ಸಿಎಸ್‌ಎಸ್ ಯೋಜನೆಯಲ್ಲಿ ಹೂಡಿಕೆ ಮೇಲಿನ ಬಡ್ಡಿ ಗಳಿಕೆಯು ಸಂಪೂರ್ಣ ಆದಾಯ ತೆರಿಗೆಗೆ ಒಳಪಡುತ್ತದೆ. ಆದರೆ, ಹಿರಿಯ ನಾಗರಿಕರು ವಾರ್ಷಿಕವಾಗಿ ಗಳಿಸುವ ₹50 ಸಾವಿರದ ವರೆಗಿನ ಮೊತ್ತಕ್ಕೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ.

ಅಂದರೆ ಹಿರಿಯ ನಾಗರಿಕರೊಬ್ಬರು ಎಸ್‌ಸಿಎಸ್‌ಎಸ್ ಯೋಜನೆಯಲ್ಲಿ ₹6.25 ಲಕ್ಷ ಹೂಡಿಕೆ ಮಾಡಿದರೆ ವಾರ್ಷಿಕ ಯಾವುದೇ ತೆರಿಗೆ ಅನ್ವಯಿಸುವುದಿಲ್ಲ. ಈ ಯೋಜನೆಯಡಿ ಪ್ರತಿ ಮೂರು ತಿಂಗಳಿಗೊಮ್ಮೆ ಬಡ್ಡಿ ಮೊತ್ತವು ಪಾವತಿಯಾಗುತ್ತದೆ. ಗರಿಷ್ಠ ₹15 ಲಕ್ಷದ ವರೆಗೆ ಹೂಡಿಕೆಗೆ ಅವಕಾಶವಿದೆ.

ಪಿಪಿಎಫ್ ಅಥವಾ ಬ್ಯಾಂಕ್ ಫಿಕ್ಸೆಡ್ ಡೆಪಾಸಿಟ್ ಹೂಡಿಕೆಗಿಂತ ಇದರಲ್ಲಿ ಹಿರಿಯ ನಾಗರಿಕರಿಗೆ ಲಾಭವಿದೆ. ಅಲ್ಲದೆ, ಷೇರು ಅಥವಾ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿರುವ ಏರಿಳಿತವೂ ಇದರಲ್ಲಿ ಇರುವುದಿಲ್ಲ. ಹೂಡಿಕೆಗೆ ಇಲ್ಲಿ ಹೆಚ್ಚಿನ ಸುರಕ್ಷತೆ ಇದೆ.

ಕಾರ್ಪೊರೇಟ್ ನಿಶ್ಚಿತ ಠೇವಣಿ: ಪೂರ್ವ ನಿರ್ಧರಿತ ಅವಧಿಗೆ ಹೂಡಿಕೆದಾರರು ಕಂಪನಿಗಳ ಬಳಿ ಹಣವನ್ನು ಠೇವಣಿ ಇಡುವ ವ್ಯವಸ್ಥೆಯನ್ನು ಕಾರ್ಪೊರೇಟ್ ಅಥವಾ ಕಂಪನಿ ಎಫ್‌.ಡಿ ಎಂದು ಕರೆಯುತ್ತಾರೆ. ಸದ್ಯ ಕಾರ್ಪೊರೇಟ್ ಎಫ್‌.ಡಿ ಬಡ್ಡಿ ದರವು ಶೇ 8.5ರಿಂದ ಶೇ 9.5ರ ವರೆಗೆ ಇದೆ. ಈ ರೀತಿಯ ಎಫ್‌.ಡಿ ಹೂಡಿಕೆಯನ್ನು ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಒದಗಿಸುತ್ತವೆ.

ಕಾರ್ಪೊರೇಟ್ ಎಫ್‌.ಡಿಗಳಲ್ಲಿ ಬಡ್ಡಿ ದರ ಸಾಮಾನ್ಯ ಎಫ್‌.ಡಿಗಳ ಬಡ್ಡಿ ದರಕ್ಕಿಂತ ಮೂರ್ನಾಲ್ಕು ಪರ್ಸೆಂಟ್ ಹೆಚ್ಚಿಗೆ ಸಿಗುತ್ತದೆ. ಆದರೆ, ಕಾರ್ಪೊರೇಟ್ ಎಫ್‌.ಡಿಗಳಲ್ಲಿ ಕೊಂಚ ರಿಸ್ಕ್ ಜಾಸ್ತಿ ಇರುತ್ತದೆ. ಸ್ವಲ್ಪ ರಿಸ್ಕ್ ಇದ್ದರೂ ಪರವಾಗಿಲ್ಲ, ಹೆಚ್ಚಿಗೆ ಬಡ್ಡಿ ಲಾಭಾಂಶ ಬೇಕು ಎನ್ನುವವರು ಕಾರ್ಪೊರೇಟ್ ಎಫ್‌.ಡಿಗಳನ್ನು ಪರಿಗಣಿಸಬಹುದು.

ಆದರೆ, ಯಾವುದೇ ನಿರ್ದಿಷ್ಟ ಕಂಪನಿಯ ಎಫ್‌.ಡಿ ಬಗ್ಗೆ ಪೂರ್ವಾಪರ ಅರಿಯದೆ ಹೂಡಿಕೆ ಮಾಡಬಾರದು. ಎಎಎ ರೇಟಿಂಗ್ ಇದ್ದರೆ ಆ ಎಫ್‌.ಡಿ ಸ್ವಲ್ಪ ಹೆಚ್ಚು ಸುರಕ್ಷಿತವಾಗಿದೆ ಎಂದರ್ಥ. ಆದರೆ, ರೇಟಿಂಗ್ ಕಡಿಮೆ ಇದ್ದರೆ ಹಲವು ರಿಸ್ಕ್‌ಗಳಿವೆ ಎನ್ನುವುದನ್ನು ಮನಗಾಣಬೇಕು.

ಮ್ಯೂಚುವಲ್ ಫಂಡ್ ಎಸ್‌ಡಬ್ಲ್ಯುಪಿ: ಮ್ಯೂಚುವಲ್ ಫಂಡ್ ಹೂಡಿಕೆಗೆ ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್ (ಎಸ್‌ಐಪಿ) ಹೇಗೆ ಜಾರಿಯಲ್ಲಿ ಇದೆಯೋ ಅದೇ ಮಾದರಿಯಲ್ಲಿ ಹೂಡಿಕೆ ಮೊತ್ತ ಮತ್ತು ಅದರ ಮೇಲಿನ ಲಾಭವನ್ನು ವ್ಯವಸ್ಥಿತವಾಗಿ ಹಿಂಪಡೆಯಲು ಸಿಸ್ಟಮ್ಯಾಟಿಕ್ ವಿತ್‌ಡ್ರಾವಲ್ ಪ್ಲಾನ್ (ಎಸ್‌ಡಬ್ಲ್ಯುಪಿ) ಇದೆ. ಹೂಡಿಕೆ ಮಾಡಿರುವ ಮೊತ್ತವನ್ನು ಮಾಸಿಕ, ತ್ರೈಮಾಸಿಕ, 6 ತಿಂಗಳಿಗೊಮ್ಮೆ, ವರ್ಷಕ್ಕೊಮ್ಮೆ ಹೀಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಮ್ಯೂಚುವಲ್ ಫಂಡ್‌ನಿಂದ ಹೊರತೆಗೆಯುವ ವ್ಯವಸ್ಥೆಯೇ ಎಸ್‌ಡಬ್ಲ್ಯುಪಿ.

ಹೆಚ್ಚು ಲಾಭವೂ ಬೇಕು, ನಿಗದಿತ ಸಮಯಕ್ಕೆ ನಿಶ್ಚಿತ ಆದಾಯವೂ ಬೇಕು ಎನ್ನುವವರು ಮ್ಯೂಚುವಲ್ ಫಂಡ್ ಎಸ್‌ಡಬ್ಲ್ಯುಪಿ ಯೋಜನೆಯ ಮೊರೆ ಹೋಗಬಹುದು. ನಿಮ್ಮ ಮ್ಯೂಚುವಲ್ ಫಂಡ್‌ನಲ್ಲಿ ₹5 ಲಕ್ಷ ಇದೆ ಎಂದು ಭಾವಿಸೋಣ. ಪ್ರತಿ ತಿಂಗಳು ಅದರಿಂದ ₹20 ಸಾವಿರ ಮೊತ್ತ ವಾಪಸ್ ಪಡೆಯಲು ತೀರ್ಮಾನಿಸುತ್ತೀರಿ ಎಂದುಕೊಳ್ಳೋಣ. ಹೀಗೆ ನಿರ್ಧರಿಸಿದ ಬಳಿಕ ಮ್ಯೂಚುವಲ್ ಫಂಡ್ ಹೌಸ್‌ಗೆ ಸ್ಥಾಯಿ ಸೂಚನೆ ಕೊಡುತ್ತೀರಿ. ಈ ಸೂಚನೆಯ ಬಳಿಕ ಪ್ರತಿ ತಿಂಗಳು ₹20 ಸಾವಿರ ಮೊತ್ತವು ನಿಮ್ಮ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ. ಹೀಗೆ ಒಟ್ಟು ₹5 ಲಕ್ಷದ ಮೊತ್ತವು ಹಂತ ಹಂತವಾಗಿ ಮುಂದಿನ 24 ತಿಂಗಳ ಕಾಲ ನಿಮ್ಮ ಖಾತೆಗೆ ಸಂದಾಯವಾಗುತ್ತದೆ.

ಎಸ್‌ಡಬ್ಲ್ಯುಪಿಯಲ್ಲಿ ಸಾಮಾನ್ಯವಾಗಿ ಎರಡು ಆಯ್ಕೆ ಸಿಗುತ್ತವೆ. ಒಂದನೆಯದು ಹೂಡಿಕೆ ಮೇಲೆ ಬಂದ ಲಾಭವನ್ನು ಮಾತ್ರ ನಿಯಮಿತವಾಗಿ ಹಿಂಪಡೆದುಕೊಳ್ಳುವುದು. ಮತ್ತೊಂದು ಹೂಡಿಕೆ ಮತ್ತು ಲಾಭಾಂಶವನ್ನು ಅನುಕೂಲಕ್ಕೆ ತಕ್ಕಂತೆ ನಿಗದಿತ ಸಮಯಕ್ಕೆ ನಗದೀಕರಣ ಮಾಡಿಕೊಳ್ಳುವುದು. ಈ ಎರಡರ ಪೈಕಿ ನಿಮಗೆ ಯಾವುದು ಅನುಕೂಲವೋ ಅದನ್ನು ಪಡೆಯಬಹುದು.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಐದನೇ ವಾರವೂ ಜಿಗಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಐದನೇ ವಾರವೂ ಜಿಗಿತ ಕಂಡಿವೆ.

79,996 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.22ರಷ್ಟು ಜಿಗಿದಿದೆ. 24,323 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.3ರಷ್ಟು ಹೆಚ್ಚಳವಾಗಿದೆ.

ಲೋಕಸಭಾ ಚುನಾವಣೆಯ ಫಲಿತಾಂಶದ ಬಳಿಕ ಷೇರುಪೇಟೆಯಲ್ಲಿ ಖರೀದಿ ಉತ್ಸಾಹ, ಸ್ಥಳೀಯ ಕಂಪನಿಗಳ ಮೇಲೆ ಹೂಡಿಕೆ ಮಾಡಲು ವಿದೇಶಿ ಕಂಪನಿಗಳ ಉತ್ಸುಕತೆ, ಐ.ಟಿ ಕಂಪನಿ ಷೇರುಗಳ ಜಿಗಿತ ಸೇರಿ ಹಲವು ಅಂಶಗಳು ಷೇರುಪೇಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 4.32, ಫಾರ್ಮಾ ಶೇ 3.66, ಮಾಧ್ಯಮ ಶೇ 2.77, ಅನಿಲ ಮತ್ತು ತೈಲ ಶೇ 2.65, ಎನರ್ಜಿ ಶೇ 1.76, ಎಫ್‌ಎಂಸಿಜಿ ಶೇ 1.61, ಲೋಹ ಶೇ 1.59, ರಿಯಲ್ ಎಸ್ಟೇಟ್ ಶೇ 1.3ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 0.12ರಷ್ಟು ಇಳಿಕೆ ಕಂಡಿದೆ.

ಇಳಿಕೆ–ಏರಿಕೆ: ವಾರದ ಅವಧಿಯಲ್ಲಿ ನಿಫ್ಟಿಯಲ್ಲಿ ಟೈಟನ್ ಶೇ 4.02, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.11, ಇಂಡಸ್ ಇಂಡ್ ಬ್ಯಾಂಕ್ ಶೇ 2.05, ಶ್ರೀರಾಮ್ ಫೈನಾನ್ಸ್ ಶೇ 1.57, ಏರ್‌ಟೆಲ್ ಶೇ 1.06, ಅದಾನಿ ಎಂಟರ್‌ಪ್ರೈಸಸ್ ಶೇ 0.88, ಹೀರೊಮೋಟೊಕಾರ್ಪ್ ಶೇ 0.53 ಮತ್ತು ಬಜಾಜ್ ಫಿನ್‌ಸರ್ವ್ ಶೇ 0.5ರಷ್ಟು ಕುಸಿದಿವೆ.

ಒಎನ್‌ಜಿಸಿ ಶೇ 5.14, ಇನ್ಫೊಸಿಸ್ ಶೇ 5.12, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 3.98, ಕೋಲ್ ಇಂಡಿಯಾ ಶೇ 3.94, ವಿಪ್ರೊ ಶೇ 3.9, ಟಾಟಾ ಕನ್ಸ್ಯೂಮರ್ ಶೇ 3.64, ಸನ್ ಫಾರ್ಮಾ ಶೇ 3.05, ಹಿಂದುಸ್ತಾನ್ ಯೂನಿಲಿವರ್ ಶೇ 2.91 ಮತ್ತು ಟಿಸಿಎಸ್ ಶೇ 2.75ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಡೆಲ್ಟಾ ಕಾರ್ಪ್, ಟಿಸಿಎಸ್, ಎಚ್‌ಸಿಎಲ್ ಟೆಕ್, ಆನಂದ್ ರಾಠಿ ವೆಲ್ತ್, ಐಆರ್‌ಇಡಿಎ, ಅವೆನ್ಯೂ ಸೂಪರ್ ಮಾರ್ಕೆಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಕಂಪನಿಗಳ ತ್ರೈಮಾಸಿಕ ಸಾಧನೆ ವರದಿ, ಕೇಂದ್ರ ಬಜೆಟ್ ಸೇರಿ ಹಲವು ಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಮೊಟ್ಟೆ ಧಾರಣೆ		
ಬೆಂಗಳೂರು	100ಕ್ಕೆ	₹565
	12 ಕ್ಕೆ	₹76
ಮೈಸೂರು	100ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹161-469
ದ್ವಿತಳಿ (ಬಿ.ವಿ)	₹330-592

ಎಫ್‌ಪಿಐ: ₹1.16 ಲಕ್ಷ ಕೋಟಿ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಜುಲೈ ಮೊದಲ ವಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ), ₹7,900 ಕೋಟಿ ಹೂಡಿಕೆ ಮಾಡಿದ್ದಾರೆ.

ಪ್ರಸಕ್ತ ವರ್ಷದ ಜನವರಿಯಿಂದ ಇಲ್ಲಿಯವರೆಗೆ ಷೇರುಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಮೊತ್ತವು ₹1.16 ಲಕ್ಷ ಕೋಟಿ ಆಗಿದೆ ಎಂದು ಷೇರುಪೇಟೆ ಅಂಕಿ–ಅಂಶ ತಿಳಿಸಿವೆ.

ಸರ್ಕಾರಿ ಸಾಲ ಪತ್ರಗಳಲ್ಲಿ ₹6,304 ಕೋಟಿ ಹೂಡಿಕೆ ಮಾಡಿದ್ದಾರೆ. ಜನವರಿಯಿಂದ ಇಲ್ಲಿಯವರೆಗೆ ಸಾಲ ಪತ್ರಗಳಲ್ಲಿನ ಹೂಡಿಕೆ ಮೊತ್ತವು ₹74,928 ಕೋಟಿ ಆಗಿದೆ.

ಇದೇ 23ರಂದು ಮಂಡನೆಯಾಗಲಿರುವ ಕೇಂದ್ರ ಬಜೆಟ್ ಮೇಲೆ ಹೂಡಿಕೆದಾರರು ದೃಷ್ಟಿ ನೆಟ್ಟಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಗಳು ಉತ್ತಮ ಲಾಭ ಗಳಿಸಲಿವೆ ಎಂಬ ಆಶಾಭಾವವು ಹೂಡಿಕೆದಾರರಲ್ಲಿ ಮೂಡಿದೆ. ಇದು ವಿದೇಶಿ ಬಂಡವಾಳ ಒಳಹರಿವಿನ ಪ್ರಮಾಣ ಹೆಚ್ಚಳಕ್ಕೆ ಸಹಕಾರಿಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ದಪ್ಪ ಅಕ್ಷರದಲ್ಲಿ ಸಕ್ಕರೆ, ಉಪ್ಪು ಮಾಹಿತಿ ನಮೂದು ಕಡ್ಡಾಯ

ನವದೆಹಲಿ (ಪಿಟಿಐ): ಪ್ಯಾಕಿಂಗ್ ಮಾಡಿದ ಆಹಾರ ಪದಾರ್ಥಗಳಲ್ಲಿ ಇರುವ ಪೋಷಕಾಂಶಗಳ ಪ್ರಮಾಣ ಕುರಿತ ಮಾಹಿತಿಯನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸುವುದಕ್ಕೆ ಸಂಬಂಧಿಸಿದಂತೆ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಕರಡು ಅಧಿಸೂಚನೆ ಪ್ರಕಟಿಸಿದೆ.

ಆಹಾರ ಪೊಟ್ಟಣಗಳ ಮೇಲೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಉಪ್ಪು, ಸಕ್ಕರೆ ಮತ್ತು ಕೊಬ್ಬಿನಾಂಶ ಇದೆ ಎಂಬ ಬಗೆಗಿನ ಸಂಖ್ಯೆಗಳನ್ನೂ ದಪ್ಪ ಅಕ್ಷರಗಳಲ್ಲಿ ಮುದ್ರಿಸಬೇಕಿದೆ. ಈ ಕುರಿತು ಅಭಿಪ್ರಾಯ ಸಲ್ಲಿಸಲು ಮಧ್ಯಸ್ಥಗಾರರಿಗೆ ಕೋರಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಲೇಬಲಿಂಗ್ ಆ್ಯಂಡ್ ಡಿಸ್‌ಪ್ಲೇ) ನಿಯಮಾವಳಿ 2020ಕ್ಕೆ ತಿದ್ದುಪಡಿ ತರಲಾಗಿದೆ. ಇತ್ತೀಚೆಗೆ ಪ್ರಾಧಿಕಾರದ ಅಧ್ಯಕ್ಷ ಅಪೂರ್ವ ಚಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ 44ನೇ ಸಭೆಯಲ್ಲಿ ಈ ಕುರಿತು ಚರ್ಚಿಸಿ ಕರಡು ಅಧಿಸೂಚನೆ ಪ್ರಕಟಿಸಲಾಗಿದೆ.

ಗ್ರಾಹಕರು ತಾವು ಬಳಸುವ ಆಹಾರದ ಪೊಟ್ಟಣಗಳಲ್ಲಿ ಇರುವ ಪೋಷಕಾಂಶಗಳ ಮೌಲ್ಯದ ಬಗ್ಗೆ ತಿಳಿದುಕೊಳ್ಳಬೇಕು. ಈ ಪದಾರ್ಥಗಳು ಆರೋಗ್ಯಕರವಾಗಿವೆಯೇ ಎಂಬ ಬಗ್ಗೆ ಖಚಿತ ಪಡಿಸಿಕೊಳ್ಳುವ ಅಗತ್ಯವಿದೆ. ಇದಕ್ಕೆ ನೆರವಾಗಲು ತಿದ್ದುಪಡಿ ತರಲಾಗಿದೆ ಎಂದು ತಿಳಿಸಿದೆ.

ಆಫ್ರಿಕನ್ ಹಂದಿ ಜ್ವರ ಪತ್ತೆ

ನವದೆಹಲಿ (ಪಿಟಿಐ): ಕೇರಳದ ತ್ರಿಶ್ಶೂರ್ ಜಿಲ್ಲೆಯ ಮಡಕ್ಕತರನ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆಫ್ರಿಕನ್ ಹಂದಿ ಜ್ವರ ಕಾಣಿಸಿಕೊಂಡಿದ್ದು, ಸೋಂಕು ಹರಡುವಿಕೆ ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಅಲ್ಲಿನ ಪಶುಪಾಲನಾ ಇಲಾಖೆಯು ರೋಗವನ್ನು ಪತ್ತೆ ಹಚ್ಚಿದೆ. ಪಂಚಾಯಿತಿ ವ್ಯಾಪ್ತಿಯ ಒಂದು ಕಿ.ಮೀ. ಅಂತರದಲ್ಲಿದ್ದ ರೋಗಪೀಡಿತ 310 ಹಂದಿಗಳನ್ನು ಹತ್ಯೆ ಮಾಡಿ ವೈಜ್ಞಾನಿಕ ವಿಧಾನ ಅನುಸರಿಸಿ ಗುಂಡಿ ತೋಡಿ ಮುಚ್ಚಲಾಗಿದೆ ಎಂದು ಕೇಂದ್ರ ಮೀನು, ಪಶುಪಾಲನಾ ಮತ್ತು ಹೈನುಗಾರಿಕೆ ಸಚಿವಾಲಯವು ತಿಳಿಸಿದೆ.

2020ರಲ್ಲಿ ದೇಶದಲ್ಲಿ ಮೊದಲ ಬಾರಿಗೆ ಅಸ್ಸಾಂ ಮತ್ತು ಅರುಣಾಚಲ ಪ್ರದೇಶದಲ್ಲಿ ಆಫ್ರಿಕನ್ ಹಂದಿ ಜ್ವರ ಪತ್ತೆಯಾಗಿತ್ತು. ಬಳಿಕ ಈ ರೋಗವು 24 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿದೆ. ಈ ರೋಗ ತಡೆಗೆ ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಿದೆ.

'ಇದು ಪ್ರಾಣಿಗಳಿಂದ ಮಾನವರಿಗೆ ಹರಡುವ ಝೂನೋಟಿಕ್ ಕಾಯಿಲೆಯಲ್ಲ. ಹಾಗಾಗಿ, ನಾಗರಿಕರು ಆತಂಕಪಡುವ ಅಗತ್ಯವಿಲ್ಲ. ಆದರೆ, ಆಫ್ರಿಕನ್ ಹಂದಿ ಜ್ವರಕ್ಕೆ ಲಸಿಕೆಯ ಕೊರತೆ ಇದೆ. ಹಾಗಾಗಿ, ಇದರ ನಿರ್ವಹಣೆಯು ಸವಾಲಾಗಿದೆ' ಎಂದು ಹೇಳಿದೆ.

ಈ ರೋಗ ಹರಡುವುದನ್ನು ತಡೆಗಟ್ಟುವ ಸಂಬಂಧ ನಾಲ್ಕು ವರ್ಷಗಳ ಹಿಂದೆಯೇ ಕೇಂದ್ರ ಸರ್ಕಾರವು ಅಗತ್ಯ ಕಾರ್ಯತಂತ್ರ ಹಾಗೂ ನಿಯಮಾವಳಿಗಳನ್ನು ರೂಪಿಸಿದೆ.

ಶ್ರೀಲಂಕಾ: ಪಕ್ಷೇತರ ಅಭ್ಯರ್ಥಿಯಾಗಿ ರಾನಿಲ್ ವಿಕ್ರಮಸಿಂಘೆ ಕಣಕ್ಕೆ?

ಕೊಲಂಬೊ (ಪಿಟಿಐ): ಶ್ರೀಲಂಕಾದ ಹಾಲಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಅಧ್ಯಕ್ಷೀಯ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ ಎಂದು ಅವರ ಆಪ್ತರು ಭಾನುವಾರ ತಿಳಿಸಿದ್ದಾರೆ.

ಅಧ್ಯಕ್ಷೀಯ ಚುನಾವಣೆಯು ಖಂಡಿತವಾಗಿಯೂ ನಡೆಯಲಿದೆ ಮತ್ತು ವಿಕ್ರಮಸಿಂಘೆ ಅವರು ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ ಎಂದು ಯುನೈಟೆಡ್ ನ್ಯಾಷನಲ್ ಪಾರ್ಟಿಯ ಉಪಾಧ್ಯಕ್ಷರಾದ ರುವಾನ್ ವಿಜೆವರ್ಧನೆ ಅವರು ಖಚಿತಪಡಿಸಿದ್ದಾರೆ ಎಂದು 'ನ್ಯೂಸ್ ಫಸ್ಟ್' ವರದಿ ಮಾಡಿದೆ.

'ಶ್ರೀಲಂಕಾ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸಬಲ್ಲ ಸಾಮರ್ಥ್ಯವುಳ್ಳ ಏಕೈಕ ನಾಯಕ ಎಂದರೆ ಅದು ವಿಕ್ರಮಸಿಂಘೆ. ತಮ್ಮ ಕೆಲಸದಿಂದ ಅವರು ಅದನ್ನು ಸಾಬೀತುಪಡಿಸಿದ್ದಾರೆ' ಎಂದು ರುವಾನ್ ಹೇಳಿದ್ದಾಗಿ ವರದಿಯಾಗಿದೆ. ವಿಕ್ರಮಸಿಂಘೆ ಅವರು 2022ರ ಜುಲೈನಲ್ಲಿ ಶ್ರೀಲಂಕಾ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.



ರಾನಿಲ್ ವಿಕ್ರಮಸಿಂಘೆ

ಅಧ್ಯಕ್ಷೀಯ ಚುನಾವಣೆಯ ದಿನಾಂಕವನ್ನು ಈ ತಿಂಗಳ ಕೊನೆಯಲ್ಲಿ ಪ್ರಕಟಿಸಲಾಗುವುದು ಎಂದು ಚುನಾವಣಾ ಆಯೋಗದ ಮುಖ್ಯಸ್ಥ ಆರ್‌.ಎಂ.ಎ.ಎಲ್ ರತ್ನಾಯಕೆ ಅವರು ಹೇಳಿದ್ದಾರೆ. ಚುನಾವಣೆಯು ಸೆ.17 ಮತ್ತು ಅ.16ರೊಳಗಿನ ಅವಧಿಯಲ್ಲಿ ನಡೆಯಲಿದೆ ಎಂದು ಆಯೋಗವು ಮೇ ತಿಂಗಳಲ್ಲಿ ಹೇಳಿತ್ತು.

ಆಯೋಗವು ಸದ್ಯ ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ನಡೆಸುತ್ತಿದೆ. ಪರಿಷ್ಕೃತ ಪಟ್ಟಿಯ ಪ್ರಕಾರ 1.70 ಕೋಟಿಗೂ ಅಧಿಕ ಜನರು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಜಾದಲ್ಲಿ ಕದನ ವಿರಾಮ ಪ್ರಸ್ತಾವ: ಹಮಾಸ್ ಹೇಳಿಕೆ

'ಇಸ್ರೇಲ್ ಪ್ರತಿಕ್ರಿಯೆಗೆ ಕಾಯುತ್ತಿದ್ದೇವೆ'

ಕೈರೊ (ರಾಯಿಟರ್ಸ್): ಗಾಜಾದಲ್ಲಿ ಕದನ ವಿರಾಮ ಘೋಷಿಸುವ ಸಂಬಂಧ ಇಸ್ರೇಲ್‌ನ ಪ್ರತಿಕ್ರಿಯೆಗೆ ಕಾಯುತ್ತಿರುವುದಾಗಿ ಹಮಾಸ್‌ನ ಇಬ್ಬರು ಅಧಿಕಾರಿಗಳು ಹೇಳಿದ್ದಾರೆ.

ಇಸ್ರೇಲ್–ಹಮಾಸ್ ಯುದ್ಧ ಕೊನೆಗೊಳಿಸಲು ಅಮೆರಿಕವು ಮುಂದಿಟ್ಟಿದ್ದ ಕದನ ವಿರಾಮ ಪ್ರಸ್ತಾವದಲ್ಲಿದ್ದ ಕೆಲವು ಪ್ರಮುಖ ಅಂಶಗಳನ್ನು ಹಮಾಸ್ ಕಳೆದ ವಾರ ಒಪ್ಪಿಕೊಂಡಿತ್ತು.

'ಕದನ ವಿರಾಮಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವನ್ನು ಮಧ್ಯಸ್ಥಗಾರರಿಗೆ ತಿಳಿಸಿದ್ದೇವೆ. ಇಸ್ರೇಲ್‌ನ ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೇವೆ' ಎಂದು ಹಮಾಸ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಕದನ ವಿರಾಮಕ್ಕೆ ಸಂಬಂಧಿಸಿದ ಮೂರು ಹಂತದ ಯೋಜನೆಯನ್ನು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಮೇ ತಿಂಗಳ ಕೊನೆಯಲ್ಲಿ ಮುಂದಿಟ್ಟಿದ್ದರು. ಇದಕ್ಕೆ ಕತಾರ್ ಮತ್ತು ಈಜಿಪ್ಟ್ ದೇಶಗಳು ಮಧ್ಯಸ್ಥಿಕೆ ವಹಿಸಿವೆ. ಯುದ್ಧವನ್ನು ಕೊನೆಗೊಳಿಸುವ ಮತ್ತು ಹಮಾಸ್ ವಶದಲ್ಲಿರುವ 120 ಒತ್ತೆಯಾಳುಗಳನ್ನು ಬಿಡುಗಡೆಗೊಳಿಸುವ ಗುರಿಯನ್ನು ಈ ಪ್ರಸ್ತಾವ ಹೊಂದಿದೆ.

ಹಮಾಸ್ ವಶದಲ್ಲಿರುವ ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗೆ ಕ್ರಮವಹಿಸುವಂತೆ ಆಗ್ರಹಿಸಿ ಟೆಲ್ ಅವೀವ್‌ನಲ್ಲಿ ಜನರು ಭಾನುವಾರ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಕದನ ವಿರಾಮ ಪ್ರಸ್ತಾವದ ಕುರಿತು ಇಸ್ರೇಲ್ – ಕತಾರ್ ನಡುವೆ ಮಾತುಕತೆ ಪ್ರಗತಿಯಲ್ಲಿದೆ ಎಂದು ಹಮಾಸ್‌ನ ಇನ್ನೊಬ್ಬ ಅಧಿಕಾರಿ ಹೇಳಿದ್ದಾರೆ. 'ಹಮಾಸ್ ನೀಡಿರುವ ಪ್ರತಿಕ್ರಿಯೆ ಸಂಬಂಧ ಕತಾರ್‌ನ ಪ್ರತಿನಿಧಿಗಳು ಇಸ್ರೇಲ್ ಜತೆ ಚರ್ಚಿಸಿದ್ದಾರೆ. ಇಸ್ರೇಲ್‌ನ ಪ್ರತಿಕ್ರಿಯೆಯನ್ನು ಒಂದೆರಡು ದಿನಗಳಲ್ಲಿ ನಮಗೆ ತಿಳಿಸುವ ಭರವಸೆ ಕೊಟ್ಟಿದ್ದಾರೆ' ಎಂದರು.

ಇಸ್ರೇಲ್‌ನಲ್ಲಿ ಮುಂದುವರಿದ ಪ್ರತಿಭಟನೆ: ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗೆ ಆಗ್ರಹಿಸಿ ಸರ್ಕಾರದ ಮೇಲೆ ಒತ್ತಡ ಹೇರಲು ಭಾನುವಾರ ಇಸ್ರೇಲ್‌ನ ವಿವಿಧೆಡೆ ಪ್ರತಿಭಟನೆ ನಡೆಯಿತು. ಪ್ರಮುಖ ನಗರಗಳಲ್ಲಿ ಬೀದಿಗಿಳಿದ ಜನರು, ರಸ್ತೆ ತಡೆ ನಡೆಸಿದರು. ರಾಜಕಾರಣಿಗಳ ಮನೆಗಳ ಮುಂದೆ ಕೆಲಹೊತ್ತು ಧರಣಿ ಕುಳಿತರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ.ಕೆ. ನಾಗಭೂಷಣ ರೆಡ್ಡಿ
(ದಿ॥ ಶ್ರೀ ಕೃಷ್ಣಪ್ಪ ರೆಡ್ಡಿಯವರ ಮಗ)
ಬೊಮ್ಮನಹಳ್ಳಿ.
ಜನನ: 01.06.1963 • ನಿಧನ: 08.07.2021
ಪ್ರೀತಿಯ ಪತಿ, ಸಮರ್ಪಿತ ತಂದೆ, ನಲ್ಮೆಯ ತಾತ
ಇಂತಿ: ಶ್ರೀಮತಿ ವಿ. ನೇತ್ರಾವತಿ ಮತ್ತು ಕುಟುಂಬವರ್ಗದವರು.

LOOKING FOR JOB OPPORTUNITY
Refer Classifieds on Wednesday

ಚಿರಸ್ಮರಣೆ

ಶ್ರೀಮತಿ ಪಾಪಮ್ಮ
08-07-1971

ಹೆಬ್ಬಗೋಡಿ ಯಲ್ಲಪ್ಪ ರೆಡ್ಡಿ
20-12-1995

ಯಶವಂತಪುರ
ನಿಮ್ಮ ಆಶೀರ್ವಾದವು ಎಂದೆಂದೂ ನಮಗೆ ಇರಲಿ ಎಂದು ಆಶಿಸುವ
ಶ್ರೀಮತಿ ಮತ್ತು ಶ್ರೀ ವೈ.ರಾಜಾರೆಡ್ಡಿ ಹಾಗೂ ಹೆಬ್ಬಗೋಡಿ ಕುಟುಂಬ ವರ್ಗ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ಪೂಜಾ ಕೈಂಕರ್ಯಕ್ಕೆ ಬೇಕಾಗಿದ್ದಾರೆ
ಹಾಸನ ಜಿಲ್ಲೆಯ ಚನ್ನರಾಯಪಟ್ಟಣಕ್ಕೆ ಸಮೀಪದ ಬಾಗೂರು ರಸ್ತೆಯಲ್ಲಿನ ಗುಲಸಿಂದ ಗ್ರಾಮದಲ್ಲಿ ಶ್ರೀರಾಘವೇಂದ್ರ ಸ್ವಾಮಿಯವರ ಪ್ರತೀಕ ಪೂಜಾ ಮಂದಿರ ನಿರ್ಮಾಣವಾಗುತ್ತಿದ್ದು, ಶ್ರೀ ಗುರುರಾಯರಿಗೆ ಪೂಜಾ ಕೈಂಕರ್ಯಗಳ ಸೇವೆಯನ್ನು ಮಾಡಲಿಚ್ಛಿಸುವವರಿಗೆ ಸದಾವಕಾಶವಿರುತ್ತದೆ. ಮಠದ ಹಿಂಭಾಗದಲ್ಲಿ ನೂತನವಾಗಿ ವಸತಿ ಸೌಕರ್ಯ ಮಾಡಿದ್ದು, ಗೌರವ ಸಂಭಾವನೆಯನ್ನು ನೀಡಲಾಗುವುದು. ಇದು ರಾಯರ ಪ್ರತೀಕ ಮಂದಿರವಾದ್ದರಿಂದ ಶ್ರೀ ರಾಯರ ಬಗ್ಗೆ ಅಧ್ಯಯನ ಹೊಂದಿದ ಪರಿಣಿತ ಮಾಧ್ವರು/ಸ್ಮಾರ್ತರು/ವೈಷ್ಣವರು ಅಥವಾ ಇತರರಿಗೆ ಪೂಜೆ ಸೇವೆ ಮಾಡಲು ಅವಕಾಶವಿರುತ್ತದೆ.
ಆಸಕ್ತರು ದಯವಿಟ್ಟು ಮೊಬೈಲ್
9448733155
8792866295
ಸಂಪರ್ಕಿಸಲು ಕೋರಿದೆ

General

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000-17,000. 8951315839, 9141634619

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈಯಕ್ತಿಕ

Change of Name

ನಾನು, ಗುರುರಾಜ್ S/O ಹನುಮಂತ ರಾವ್ ನಿವಾಸ 187 ಸನ್‌ಸಿಟಿ ಹೋಮ್ಸ್, ಇಲವಾಲ ಹೋಬಳಿ, ನಾಗವಾಲ, P.O ಯೆಲ್ವಾಲ್, ಮೈಸೂರು 571130 ನನ್ನ ಹೆಸರನ್ನು ಎಲ್ಲಾ ಉದ್ದೇಶಗಳಿಗಾಗಿ ಗುರುರಾಜನಿಂದ ಗುರುರಾಜ್ ಹನುಮಂತ ರಾವ್ ಎಂದು ಬದಲಾಯಿಸಿದ್ದೇನೆ

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ ರೈಲು ಎಸಿ ಬಸ್ಸಿನಲ್ಲಿ 08.09.2024 23.09.2024 ಚಾರ್‌ಧಾಮ್ ಪ್ರವಾಸ. 14.09.2024 22.09.2024 ಅಯೋಧ್ಯಾ,ಕಾಶಿ ಬುದ್ಧಗಯಾ. 21.09.2024 29.09.2024 ನೇಪಾಳ ಮುಕ್ತಿನಾಥ ಪೋಕ್ರಾ,ಲುಂಬಿನಿ.15.09.2024 26.09.2024 ದ್ವಾರಕಾ ಸೋಮನಾಥ್ ನಿಷ್ಕಳಂಕ ಮಹಾದೇವ ಓಂಕಾರೇಶ್ವರ್ ಮಹಾಕಾಳೇಶ್ವರ ದಕ್ಷಿಣ ಮತ್ತು ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
BOOK NOW
@500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಅಸ್ಸಾಂ, ಬಿಹಾರದಲ್ಲಿ ಭಾರಿ ಮಳೆ

ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ನದಿಗಳು • ಸಂಕಷ್ಟದಲ್ಲಿ ಅಸ್ಸಾಂನ 24 ಲಕ್ಷ ಜನ

ಗುವಾಹಟಿ/ಪಟ್ನಾ/ಮುಂಬೈ (ಪಿಟಿಐ): ಬಿಹಾರ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಇಲ್ಲಿನ ನದಿಗಳು ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿವೆ. ಅಸ್ಸಾಂನಲ್ಲಿ ಪ್ರವಾಹದ ಕಾರಣ, 29 ಜಿಲ್ಲೆಗಳ ಸುಮಾರು 24 ಲಕ್ಷ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. 'ಈಶಾನ್ಯ ರಾಜ್ಯಗಳಲ್ಲಿ ಮುಂದಿನ ಐದು ದಿನಗಳಲ್ಲಿ ಭಾರಿ ಮಳೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಬಿಹಾರದಲ್ಲಿ ಸುರಿಯುತ್ತಿರುವ ಭಾರಿ ಮಳೆಯ ಕಾರಣ ಪಟ್ನಾದ ರಸ್ತೆಗಳು ನೀರಿನಿಂದ ಆವೃತವಾಗಿದ್ದು, ಜನರ ಸಂಚಾರಕ್ಕೆ ತೊಡಕಾಗಿತ್ತು —ಪಿಟಿಐ ಚಿತ್ರ

ಅಸ್ಸಾಂನಾದ್ಯಂತ ಬ್ರಹ್ಮಪುತ್ರ ನದಿಯು ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದೆ. ಡುಬ್ರಿ ಜಿಲ್ಲೆಯಲ್ಲಿಯೇ ಅಧಿಕ ಹಾನಿ ಉಂಟಾಗಿದ್ದು, 7.95 ಲಕ್ಷ ಜನರು ಅಪಾಯದಲ್ಲಿದ್ದಾರೆ. ನಂತರದಲ್ಲಿ ಕಾಛರ್ ಹಾಗೂ ದರಂಗ್ ಜಿಲ್ಲೆಗಳಿದ್ದಾವೆ. ಪ್ರತಿ ಜಿಲ್ಲೆಯಲ್ಲೂ 1.50 ಲಕ್ಷ ಜನರು ಬಾಧಿತರಾಗಿದ್ದಾರೆ. 577 ನಿರಾಶ್ರಿತ ಶಿಬಿರಗಳಲ್ಲಿ 50 ಸಾವಿರಕ್ಕೂ ಅಧಿಕ ಮಂದಿ ಆಶ್ರಯ ಪಡೆದಿದ್ದಾರೆ. ಭಾರಿ ಮಳೆಯ ಕಾರಣ ರಾಜ್ಯದಾದ್ಯಂತ ಸೇತುವೆಗಳಿಗೆ ಹಾಗೂ ರಸ್ತೆಗಳಿಗೆ ಹಾನಿಯಾಗಿರುವುದು ವರದಿ ಆಗಿದೆ.

'ಶನಿವಾರದಿಂದ ಭಾನುವಾರದವರೆಗೆ ಬಿಹಾರದಲ್ಲಿ ಸುರಿದ ಭಾರಿ ಮಳೆಯ ಕಾರಣಕ್ಕಾಗಿ ಇಲ್ಲಿನ ಪ್ರಮುಖ ನದಿಗಳಾದ ಕೋಸಿ, ಮಹಾನಂದ, ಭಾಗಮತಿ, ಗಂಡಕ್, ಕಮಲಾ ಬಲಾನ್ ಹಾಗೂ ಕಮಲಾ ನದಿಗಳು ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿವೆ' ಎಂದು ಜಲಸಂಪನ್ಮೂಲ ಇಲಾಖೆಯು ಭಾನುವಾರ ತಿಳಿಸಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಈ ನದಿಗಳು ಎಚ್ಚರಿಕೆ ಮಟ್ಟವನ್ನು ತಲುಪಿದ್ದರೆ, ಕೆಲವೆಡೆ ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿವೆ.

'ಬಿಹಾರದಲ್ಲಿ ಮಳೆಯ ಕಾರಣ ಇದುವರೆಗೂ ಯಾವುದೇ ಸಾವು ಸಂಭವಿಸಿಲ್ಲ. ಆದರೆ, ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರನ್ನು ಸ್ಥಳೀಯ ಜಿಲ್ಲಾಡಳಿತ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ' ಎಂದು ಇಲಾಖೆಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

8 ಸಾವು: ಪ್ರವಾಹ ಪರಿಸ್ಥಿತಿಯಿಂದಾಗಿ ಅಸ್ಸಾಂನಲ್ಲಿ ಭಾನುವಾರ 8 ಜನ ಮೃತಪಟ್ಟಿದ್ದಾರೆ ಎಂದು ಅಧಿಕೃತ ಪ್ರಕಟನೆ ತಿಳಿಸಿದೆ.

ದುಬ್ರಿ ಮತ್ತು ನಲಬಾರಿಯಲ್ಲಿ ತಲಾ ಇಬ್ಬರು ಮತ್ತು ಕಚಾರ್, ಗೋಲ್ಪಾರ, ದೇಮಜಿ ಮತ್ತು ಶಿವಸಾಗರ್‌ನಲ್ಲಿ ತಲಾ ಒಬ್ಬರು ಸಾವಿಗೀಡಾದ್ದಾರೆ.

ಈ ವರ್ಷದಲ್ಲಿ ಸಂಭವಿಸಿದ ಪ್ರವಾಹದಿಂದಾಗಿ ಇಲ್ಲಿಯವರೆಗೆ 78 ಮಂದಿ ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದಲ್ಲಿ ಭಾರಿ ಮಳೆಯಾಗುತ್ತಿದ್ದು, ಠಾಣೆ ಜಿಲ್ಲೆಯ ರೆಸಾರ್ಟ್‌ವೊಂದು ನೀರಿನಲ್ಲಿ ಮುಳುಗಿದೆ. ಈ ರೆಸಾರ್ಟ್‌ನಲ್ಲಿದ್ದ 49 ಮಂದಿಯನ್ನು ಎನ್‌ಡಿಆರ್‌ಎಫ್ ರಕ್ಷಿಸಿದೆ. ದೋಣಿ ಹಾಗೂ ಜೀವರಕ್ಷಕ ಜಾಕೆಟ್‌ಗಳ ಮೂಲಕ ಜನರನ್ನು ರಕ್ಷಿಸಲಾಗಿದೆ. ಪಾಲ್ಘರ್ ಜಿಲ್ಲೆಯ 16 ಗ್ರಾಮಗಳಲ್ಲಿನ ಜನರನ್ನು ಎನ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ದಳದವರು ರಕ್ಷಿಸಿದ್ದಾರೆ.

ಚಾರ್‌ಧಾಮ್ ಯಾತ್ರೆ ತಾತ್ಕಾಲಿಕ ಸ್ಥಗಿತ

ಡೆಹ್ರಾಡೂನ್: ಚಾರ್‌ಧಾಮ್ ಯಾತ್ರೆಯನ್ನು ಭಾನುವಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಜುಲೈ 7ಹಾಗೂ 8ರಂದು ಗಢವಾಲ್ ಜಿಲ್ಲೆಯಾದ್ಯಂತ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆಯು ನೀಡಿದ ಮುನ್ಸೂಚನೆ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ.

'ಜುಲೈ 7ರಿಂದ ರಿಷಿಕೇಶದಿಂದ ಹೊರಡಬೇಕಿದ್ದ ಯಾತ್ರೆಯನ್ನು ಮುಂದೂಡಿ' ಎಂದು ಗಢವಾಲ್ ಆಯುಕ್ತ ವಿನಯ್ ಶಂಕರ್ ಅವರು ಭಕ್ತರಲ್ಲಿ ಮನವಿ ಮಾಡಿದ್ದಾರೆ. ಈಗಾಗಲೇ ತೆರಳಿರುವ ಭಕ್ತರಿಗೆ, ಈಗ ಎಲ್ಲಿರುವರೊ ಅಲ್ಲಿಯೇ ಇರುವಂತೆ ಆಯುಕ್ತರು ಸೂಚಿಸಿದ್ದಾರೆ. ವಾತಾವರಣವು ಯಾತ್ರೆಗೆ ಅನುಕೂಲಕರವಾದ ಮೇಲೆ ಯಾತ್ರೆ ಮುಂದುವರಿಸುವಂತೆ ಸೂಚಿಸಿದ್ದಾರೆ.

ಉತ್ತರಾಖಂಡದಲ್ಲಿ ಭಾರಿ ಮಳೆಯಾಗುತ್ತಿದೆ. ಸೇತುವೆಗಳು ಕುಸಿಯುತ್ತಿವೆ ಹಾಗೂ ಭೂಕುಸಿತ ಸಂಭವಿಸುತ್ತಿದೆ. ಚಮೋಲಿ ಜಿಲ್ಲೆಯ ಛಟ್ವಾಪೀಪಲ್ ಪ್ರದೇಶದಲ್ಲಿ ಭಾರಿ ಮಳೆಯ ಕಾರಣ ಬೆಟ್ಟದಿಂದ ಬಂಡೆಗಲ್ಲೊಂದು ರಸ್ತೆಗೆ ಬಿದ್ದು, ಬೈಕ್‌ನಲ್ಲಿದ್ದ ಹೈದರಾಬಾದ್‌ನ ಇಬ್ಬರು ಶನಿವಾರ ಮೃತಪಟ್ಟಿದ್ದರು. ಜೋಶಿಮಠದ ಸಮೀಪದಲ್ಲಿ ಅಲಕಾನಂದ ನದಿಯು ಉಕ್ಕಿ ಹರಿಯುತ್ತಿದೆ.

ಸಿಡಿಲು ಬಡಿದು 10 ಮಂದಿ ಸಾವು

ಪಟ್ನಾ (ಪಿಟಿಐ): ಬಿಹಾರದಲ್ಲಿ 24 ಗಂಟೆಯಲ್ಲಿ 10 ಜನರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ನಳಂದ ಜಿಲ್ಲೆಯಲ್ಲಿ ಇಬ್ಬರು, ವೈಶಾಲಿ, ಭಾಗಲ್ಪುರ, ಸಹರ್ಶ, ರೋಹತಾಸ್, ಸರಣ್, ಜಮುಯಿ, ಭೋಜ್‌ಪುರ ಮತ್ತು ಗೋಪಾಲ್‌ಗಂಜ್‌ನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದು ಮುಖ್ಯಮಂತ್ರಿಗಳ ಕಚೇರಿ ತಿಳಿಸಿದೆ. ಬಿರುಗಾಳಿ ಸಹಿತ ಮಳೆಗೆ ಬಿಹಾರ ತತ್ತರಿಸಿದ್ದು, ಕಳೆದ ಕೆಲವಾರಗಳಲ್ಲಿ ಸಿಡಿಲಿನಿಂದಾಗಿ ಒಟ್ಟು 40 ಮಂದಿ ಮೃತಪಟ್ಟಿದ್ದಾರೆ.

ನೀಗಿದ ಜೂನ್‌ನ ಮಳೆ ಕೊರತೆ

ನವದೆಹಲಿ: 'ಜೂನ್ ತಿಂಗಳಲ್ಲಿ ಶೇ 11ರಷ್ಟು ಮಳೆ ಕೊರತೆಯಾಗಿತ್ತು. ಆದರೆ, ಇತ್ತೀಚೆಗೆ ದೇಶದಾದ್ಯಂತ ಹೆಚ್ಚು ಮಳೆಯಾಗುತ್ತಿರುವ ಕಾರಣ, ಈ ಕೊರತೆಯು ನೀಗಿದೆ ಮತ್ತು ವಾಡಿಕೆಗಿಂತ ಹೆಚ್ಚು ಮಳೆ ಸುರಿದಿದೆ. ಮುಂದಿನ ಎರಡು–ಮೂರು ದಿನಗಳಲ್ಲಿ ಭಾರತದ ವಾಯವ್ಯ ಹಾಗೂ ಪಶ್ಚಿಮ ಭಾಗಗಳಲ್ಲಿ ಭಾರಿ ಮಳೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಭಾನುವಾರ ಮುನ್ಸೂಚನೆ ನೀಡಿದೆ.

'ಜೂನ್‌ಯಿಂದ ಇಲ್ಲಿಯವರೆಗೆ ದೇಶದಲ್ಲಿ 21.49 ಸೆಂ.ಮೀ ಮಳೆಯಾಗಿದೆ. ಅಂದರೆ, ವಾಡಿಕೆಯ 21.33 ಸೆಂ.ಮೀಗಿಂತ 0.16 ಸೆಂ.ಮೀ. ಹೆಚ್ಚು ಮಳೆಯಾಗಿದೆ. ಈಶಾನ್ಯ ರಾಜ್ಯಗಳಲ್ಲಿ ಸುರಿಯುತ್ತಿರುವ ಮಳೆ ಕಾರಣದಿಂದಾಗಿ ಮಳೆ ಕೊರತೆಯು ನೀಗಿದೆ' ಎಂದು ಇಲಾಖೆ ಹೇಳಿದೆ.

ದಕ್ಷಿಣ ಭಾರತದಲ್ಲಿ ವಾಡಿಕೆಗಿಂತ ಶೇ 13ರಷ್ಟು ಹಾಗೂ ವಾಯುವ್ಯ ಭಾರತದಲ್ಲಿ ವಾಡಿಕೆಗಿಂತ ಶೇ 3ರಷ್ಟು ಅಧಿಕ ಮಳೆಯಾಗಿದೆ. ಪೂರ್ವ ಹಾಗೂ ಈಶಾನ್ಯ ಭಾಗದಲ್ಲಿ ಸುರಿದ ಮಳೆಯು ಶೇ 13ರಷ್ಟು ಕೊರತೆಯನ್ನು ನೀಗಿಸಿದೆ. ಮಧ್ಯ ಭಾರತದಲ್ಲಿನ ಮಳೆಯ ಪ್ರಮಾಣವು, ಈ ಭಾಗದ ಶೇ 14ರಷ್ಟಿದ್ದ ಮಳೆ ಕೊರತೆಯನ್ನು ಶೇ 6ಕ್ಕೆ ಇಳಿಸಿದೆ.

ಪಶ್ಚಿಮ ಬಂಗಾಳ: ಪ್ರವಾಹ ಸ್ಥಿತಿ ನಿರ್ಮಾಣ

ಪಶ್ಚಿಮ ಬಂಗಾಳದಲ್ಲಿ ಸುರಿಯುತ್ತಿರುವ ಮಳೆಯ ಕಾರಣ, ರಾಜ್ಯದ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. ಇಲ್ಲಿನ ಜಲಪಾಇಗುಡಿ ಜಿಲ್ಲೆಯಲ್ಲಿ ಶನಿವಾರದಿಂದ ಭಾನುವಾರದ ಅವಧಿಯಲ್ಲಿ 16.6 ಸೆಂ.ಮೀನಷ್ಟು ಮಳೆಯಾಗಿದೆ. ಜಲಪಾಇಗುಡಿ ನಗರದ ಬಹುತೇಕ ಪ್ರದೇಶಗಳು ಜಲಾವೃತವಾಗಿವೆ. ಇಲ್ಲಿನ 300 ಕುಟುಂಬಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ರಾಜ್ಯದ ಡಾರ್ಜಿಲಿಂಗ್, ಜಲಪಾಇಗುಡಿ, ಕಲಿಂಪೋಂಗ್, ಕೂಛ್‌ಬಿಹಾರ ಹಾಗೂ ಅಲಿಪುರದೌರ್ ಜಿಲ್ಲೆಗಳಲ್ಲಿ ಜುಲೈ 12ರವರೆಗೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಪಶ್ಚಿಮ ಬಂಗಾಳ ಹಾಗೂ ಸಿಕ್ಕಿಂಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ.

ಸ್ಥಳೀಯರು, ಪ್ರತ್ಯಕ್ಷದರ್ಶಿಗಳಿಂದ ಮಾಹಿತಿ ಸಂಗ್ರಹ

ಕಾಲ್ತುಳಿತ: ತನಿಖೆ ಚುರುಕು

ನೋಯ್ಡಾ (ಪಿಟಿಐ): ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯ ಫೂಲರಾಯ್ ಗ್ರಾಮದಲ್ಲಿ ನಡೆದಿದ್ದ ಕಾಲ್ತುಳಿತ ಘಟನೆಯ ತನಿಖೆ ನಡೆಸುತ್ತಿರುವ ಅಧಿಕಾರಿಗಳ ತಂಡ ಭಾನುವಾರ ಸ್ಥಳೀಯರು, ಪೊಲೀಸ್ ಅಧಿಕಾರಿಗಳು ಮತ್ತು ಪ್ರತ್ಯಕ್ಷದರ್ಶಿಗಳಿಂದ ಮಾಹಿತಿ ಸಂಗ್ರಹಿಸಿತು.

ಜುಲೈ 2ರಂದು ನಡೆದಿದ್ದ ಅವಘಡದಲ್ಲಿ 121 ಜನರು ಮೃತಪಟ್ಟಿದ್ದರು. ಘಟನೆ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದ ಉತ್ತರ ಪ್ರದೇಶ ಸರ್ಕಾರ, ಮೂವರು ಸದಸ್ಯರ ಸಮಿತಿಯನ್ನು ನೇಮಿಸಿತ್ತು. ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ಶ್ರೀವಾಸ್ತವ ಅವರ ನೇತೃತ್ವದ ಸಮಿತಿಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಹೇಮಂತ್ ರಾವ್ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಭವೇಶ್ ಕುಮಾರ್ ಇದ್ದಾರೆ.

ಶನಿವಾರ ಹಾಥರಸ್ ತಲುಪಿದ್ದ ತನಿಖಾ ತಂಡದ ಸದಸ್ಯರು, ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಹಾಥರಸ್‌ನ ಪಿಡಬ್ಲ್ಯುಡಿ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡಿದ್ದ ಅವರು ಭಾನುವಾರವೂ ತನಿಖೆಯನ್ನು ಮುಂದುವರಿಸಿದರು.

'ಎರಡು ತಿಂಗಳ ಒಳಗಾಗಿ ತನಿಖಾ ವರದಿಯನ್ನು ಸಲ್ಲಿಸುವಂತೆ ನಮಗೆ ಸೂಚಿಸಲಾಗಿದೆ' ಎಂದು ಘಟನೆ ನಡೆದ ತಾಣಕ್ಕೆ ಶನಿವಾರ ಭೇಟಿ ನೀಡಿದ ಬಳಿಕ ಶ್ರೀವಾಸ್ತವ ಹೇಳಿದರು. ಹಾಥರಸ್ ಜಿಲ್ಲಾಧಿಕಾರಿ ಆಶೀಶ್ ಕುಮಾರ್ ಮತ್ತು ಎಸ್‌ಪಿ ನಿಪುನ್ ಅಗರವಾಲ್ ಅವರು ತನಿಖಾ ತಂಡಕ್ಕೆ ಸಾಥ್ ನೀಡಿದರು.

ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ದೇವ್‌ಪ್ರಕಾಶ್ ಮಧುಕರ್ ಸೇರಿದಂತೆ ಒಟ್ಟು ಒಂಬತ್ತು ಮಂದಿಯನ್ನು ಇದುವರೆಗೆ ಬಂಧಿಸಲಾಗಿದೆ. ಮಧುಕರ್ ಅವರು ನಾರಾಯಣ ಸಾಕರ್ ಹರಿ ಅಲಿಯಾಸ್ ಬೋಲೆ ಬಾಬಾ ಅವರ ಕಾರ್ಯಕ್ರಮಗಳಿಗೆ ನಿಧಿ ಸಂಗ್ರಹ ಮಾಡುತ್ತಿದ್ದರು. ಬೋಲೆ ಬಾಬಾ ಅವರ 'ಸತ್ಸಂಗ' ಕಾರ್ಯಕ್ರಮದ ವೇಳೆ ಕಾಲ್ತುಳಿತ ಸಂಭವಿಸಿತ್ತು.

ಯಾರನ್ನೇ ಆದರೂ ವಿಚಾರಣೆಗೆ ಒಳಪಡಿಸುವೆವು: ತನಿಖಾ ತಂಡವು ಬೋಲೆ ಬಾಬಾ ಅವರ ವಿಚಾರಣೆ ನಡೆಸಲಿದೆಯೇ ಎಂಬ ಪ್ರಶ್ನೆಗೆ, 'ಘಟನೆಗೆ ಸಂಬಂಧಿಸಿದಂತೆ ಅಗತ್ಯವಿರುವ ಎಲ್ಲರನ್ನೂ ವಿಚಾರಣೆಗೆ ಒಳಪಡಿಸುತ್ತೇವೆ' ಎಂದು ಭವೇಶ್ ಕುಮಾರ್ ಹೇಳಿದರು.

ಕಾಲ್ತುಳಿತ ಘಟನೆಯ ತನಿಖೆಗೆ ಉತ್ತರ ಪ್ರದೇಶ ಸರ್ಕಾರವು ಪ್ರತ್ಯೇಕವಾಗಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ. ಆಗ್ರಾ ವಲಯದ ಎಡಿಜಿಪಿ ಅನುಪಮ್ ಕುಲಶ್ರೇಷ್ಠ ಅವರು ಎಸ್‌ಐಟಿ ನೇತೃತ್ವ ವಹಿಸಿದ್ದಾರೆ.

ಪರಿಹಾರ ಮೊತ್ತ ಹೆಚ್ಚಿಸಿ: ರಾಹುಲ್ ಮನವಿ

ನವದೆಹಲಿ (ಪಿಟಿಐ): ಹಾಥರಸ್ ಕಾಲ್ತುಳಿತ ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಘೋಷಿಸಿರುವ ಪರಿಹಾರ ಮೊತ್ತವನ್ನು ಹೆಚ್ಚಿಸಬೇಕು ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಉತ್ತರ ಪ್ರದೇಶ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮೃತಪಟ್ಟವರ ಕುಟುಂಬ ಸದಸ್ಯರಿಗೆ ₹2 ಲಕ್ಷ ಹಾಗೂ ಗಾಯಾಳುಗಳ ಚಿಕಿತ್ಸೆಗೆ ₹50 ಸಾವಿರ ನೀಡುವುದಾಗಿ ಉತ್ತರ ಪ್ರದೇಶ ಸರ್ಕಾರ ಘೋಷಿಸಿತ್ತು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಭಾನುವಾರ ಪತ್ರ ಬರೆದಿರುವ ರಾಹುಲ್, 'ಸರ್ಕಾರವು ಘೋಷಿಸಿರುವ ಪರಿಹಾರ ಮೊತ್ತ ತುಂಬಾ ಕಡಿಮೆಯಾಯಿತು. ಪರಿಹಾರ ಮೊತ್ತವನ್ನು ಹೆಚ್ಚಿಸಿ, ತಕ್ಷಣವೇ ಅದನ್ನು ವಿತರಿಸಬೇಕು' ಎಂದು ಮನವಿ ಮಾಡಿದ್ದಾರೆ.

ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ದೊರೆಯುವುದನ್ನು ಖಾತರಿಪಡಿಸಬೇಕು ಎಂದೂ ಆಗ್ರಹಿಸಿದ್ದಾರೆ. ರಾಹುಲ್ ಅವರು ದುರಂತದಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರನ್ನು ಶುಕ್ರವಾರ ಭೇಟಿಯಾಗಿದ್ದರು.

'ವಿಷ ತುಂಬಿದ್ದ ಕ್ಯಾನ್ ತಂದಿದ್ದರು'

'ಸತ್ಸಂಗ ಕಾರ್ಯಕ್ರಮಕ್ಕೆ ಕೆಲವರು ವಿಷಕಾರಿ ವಸ್ತು ತುಂಬಿದ್ದ ಕ್ಯಾನ್‌ಗಳನ್ನು ತಂದಿದ್ದರು ಎಂದು ಪ್ರತ್ಯಕ್ಷದರ್ಶಿಗಳು ನನ್ನಲ್ಲಿ ತಿಳಿಸಿದ್ದಾರೆ' ಎಂದು ಬೋಲೆ ಬಾಬಾ ಅವರ ವಕೀಲ ಎ.ಪಿ.ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೋಲೆ ಬಾಬಾ ಅವರ ಜನಪ್ರಿಯತೆ ಹೆಚ್ಚುತ್ತಿರುವುದನ್ನು ಸಹಿಸದ ಕೆಲವರು ಪಿತೂರಿ ನಡೆಸಿ ಕಾಲ್ತುಳಿತ ಉಂಟಾಗುವಂತೆ ಮಾಡಿದ್ದಾರೆ ಎಂದು ಆರೋಪಿಸಿದರು.

'ವಿಷಕಾರಿ ವಸ್ತು ತುಂಬಿದ್ದ ಕ್ಯಾನ್‌ಗಳೊಂದಿಗೆ 15–16 ಮಂದಿ ಕಾರ್ಯಕ್ರಮಕ್ಕೆ ಬಂದಿದ್ದಾರೆ. ಜನದಟ್ಟಣೆಯಲ್ಲಿ ಅವರು ಆ ಕ್ಯಾನ್‌ಗಳನ್ನು ತೆರೆದಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿಗಳನ್ನು ನಾನು ಗಮನಿಸಿದ್ದು, ಜನರು ಉಸಿರುಕಟ್ಟಿ ಸಾವನ್ನಪ್ಪಿದ್ದಾರೆಯೇ ಹೊರತು ಗಾಯಗಳಿಂದಲ್ಲ ಎಂಬ ಅಂಶ ವರದಿಯಲ್ಲಿದೆ' ಎಂದಿದ್ದಾರೆ.

'ವಿಷಕಾರಿ ವಸ್ತು ತಂದಿದ್ದವರು ಪರಾರಿಯಾಗಲು ಬಳಸಿದ್ದ ವಾಹನಗಳನ್ನು ಕಾರ್ಯಕ್ರಮ ನಡೆದ ತಾಣದ ಬಳಿಯೇ ನಿಲ್ಲಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ನಮ್ಮಲ್ಲಿದ್ದು, ಎಲ್ಲವನ್ನೂ ಸಲ್ಲಿಸುತ್ತೇವೆ' ಎಂದು ತಿಳಿಸಿದ್ದಾರೆ.

ಮಾಲೀಕರ ವಿರುದ್ಧ ಎಫ್‌ಐಆರ್ • ಬಾಡಿಗೆ ಸಂಗ್ರಹಿಸುತ್ತಿದ್ದ ವ್ಯಕ್ತಿ ಬಂಧನ

ಸೂರತ್ ಕಟ್ಟಡ ಕುಸಿತ: ಸಾವಿನ ಸಂಖ್ಯೆ 7ಕ್ಕೆ ಏರಿಕೆ

ಸೂರತ್ (ಪಿಟಿಐ): ಗುಜರಾತ್‌ನ ಸೂರತ್‌ನಲ್ಲಿ ಕುಸಿದ ಆರು ಅಂತಸ್ತಿನ ಕಟ್ಟಡದ ಅವಶೇಷಗಳ ಅಡಿಯಲ್ಲಿ ಶನಿವಾರ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ ಆರು ಮೃತದೇಹಗಳನ್ನು ಹೊರತೆಗೆದಿದ್ದು, ಸಾವಿನ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ ಎಂದು ಪೊಲೀಸರು ತಿಳಿಸಿದರು.



'ಕಟ್ಟಡದಲ್ಲಿ ವಾಸಿಸುತ್ತಿದ್ದವರಿಂದ ಬಾಡಿಗೆ ಸಂಗ್ರಹಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ. ಅಲ್ಲದೇ, ಆತ ಸೇರಿದಂತೆ ಕಟ್ಟಡದ ಇಬ್ಬರು ಮಾಲೀಕರ ವಿರುದ್ಧ 'ಉದ್ದೇಶಪೂರ್ವಕವಲ್ಲದ ನರಹತ್ಯೆ' ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಇಲ್ಲಿನ ಪಾಲ್ ಪ್ರದೇಶದ ಅತ್ಯಂತ ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡವು ಶನಿವಾರ ಮಧ್ಯಾಹ್ನ 2.45ಕ್ಕೆ ಕುಸಿದಿತ್ತು. ತಕ್ಷಣವೇ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಆಂಭಿಸಿದ್ದರು.

ಮೂರು ತಾಸುಗಳ ಕಾರ್ಯಾಚರಣೆ ಬಳಿಕ ಕಾಶೀಶ್ ಶರ್ಮಾ (20) ಎಂಬ ಮಹಿಳೆಯನ್ನು ರಕ್ಷಿಸಿ, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಶನಿವಾರ ರಾತ್ರಿ ಒಬ್ಬರ ಮೃತದೇಹವನ್ನು ಹೊರತೆಗೆಯಲಾಗಿತ್ತು. ರಕ್ಷಣಾ ತಂಡವು ರಾತ್ರಿಯಿಡೀ ನಡೆಸಿದ ಕಾರ್ಯಾಚರಣೆಯಲ್ಲಿ ಮತ್ತೆ ಆರು ಮಂದಿಯ ಮೃತದೇಹವನ್ನು ಹೊರತೆಗೆದಿದ್ದು, ಒಟ್ಟು ಏಳು ಮಂದಿಯ ಮೃತದೇಹವನ್ನು ಹೊರತೆಗೆಯಲಾಗಿದೆ ಎಂದು ಇನ್‌ಸ್ಪೆಕ್ಟರ್ ಜಿಗ್ನೇಶ್ ಚೌಧರಿ ತಿಳಿಸಿದರು.

ಮೃತರೆಲ್ಲರೂ ಟೆಕ್ಸ್‌ಟೈಲ್ಸ್‌ನ ಕಾರ್ಮಿಕರಾಗಿದ್ದು, ಮಧ್ಯಪ್ರದೇಶ, ಉತ್ತರ ಪ್ರದೇಶಕ್ಕೆ ಸೇರಿದವರಾಗಿದ್ದಾರೆ.

ಎಫ್‌ಐಆರ್ ದಾಖಲು: ಪ್ರಕರಣಕ್ಕೆ ಸಂಬಂಧಿಸಿದಂತೆ 'ಭಾರತೀಯ ನ್ಯಾಯ ಸಂಹಿತೆ' ಅಡಿಯಲ್ಲಿ ಕಟ್ಟಡದ ಮಾಲೀಕ ರಾಕ್ ಕಾಕಡಿಯಾ, ಇವರ ತಾಯಿ ರಾಮಿಲಾಬೆನ್ ಕಾಕಡಿಯಾ, ಬಾಡಿಗೆ ಸಂಗ್ರಹಿಸುತ್ತಿದ್ದ ಅಶ್ವಿನ್ ವೆಕರಿಯಾ ವಿರುದ್ಧ 'ಉದ್ದೇಶಪೂರ್ವಕವಲ್ಲದ ನರಹತ್ಯೆ' ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಇನ್‌ಸ್ಪೆಕ್ಟರ್ ಚೌಧರಿ ತಿಳಿಸಿದರು.

'ಅಶ್ವಿನ್ ವೆಕಾರಿಯಾನನ್ನು ಈಗಾಗಲೇ ಬಂಧಿಸಲಾಗಿದ್ದು, ಇನ್ನಿಬ್ಬರ ಬಂಧನಕ್ಕೆ ಶೋಧ ಕಾರ್ಯ ಮುಂದುವರಿದಿದೆ. ರಾಜ್ ಕಾಕಡಿಯಾ ಅಮೆರಿಕದಲ್ಲಿದ್ದಾರೆ' ಎಂದರು.

'ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದ ಕಾರಣ ಬಾಡಿಗೆಗೆ ಇದ್ದ ಬಹುತೇಕ ಕುಟುಂಬಗಳು ಖಾಲಿ ಮಾಡಿದ್ದವು. ಆದರೂ, ಕೆಲವರು ಬಾಡಿಗೆ ನೀಡಿ ಇದೇ ಕಟ್ಟಡದಲ್ಲಿ ವಾಸಿಸುತ್ತಿದ್ದರು. ಕಟ್ಟಡದಲ್ಲಿದ್ದ ಎಲ್ಲ ನಿವಾಸಿಗಳನ್ನು ತೆರವುಗೊಳಿಸುವಂತೆ ಇದೇ ಏಪ್ರಿಲ್ 26ರಂದು ಸೂರತ್ ಮಹಾನಗರ ಪಾಲಿಕೆ ಅಧಿಕಾರಿಗಳು ನೋಟಿಸ್ ಜಾರಿಗೊಳಿಸಿದ್ದರು' ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

2016–2017ರಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿತ್ತು ಎಂದು ಸೂರತ್ ನಗರ ಪೊಲೀಸ್ ಆಯುಕ್ತ ಅನುಪಮ್ ಸಿಂಗ್ ಗೆಹಲೋತ್ ಶನಿವಾರ ತಿಳಿಸಿದ್ದರು.

'ಕಟ್ಟಡಕ್ಕೆ ಹಾನಿಯಾಗಿದ್ದರಿಂದ ತಕ್ಷಣವೇ ದುರಸ್ತಿ ಮಾಡಿಸುವಂತೆ ವೆಕಾರಿಯಾನಿಗೆ ಬಾಡಿಗೆದಾರರು ಮನವಿ ಮಾಡಿದ್ದರು. ಆದರೆ, ಮುಂದಿನ ವರ್ಷ ಮಾಡಿಸುತ್ತೇನೆ ಎಂದು ಕಟ್ಟಡದ ಮಾಲೀಕರು ತಿಳಿಸಿದ್ದರು. ನಗರದ ವಿವಿಧ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಐದು ಫ್ಲ್ಯಾಟ್‌ಗಳಲ್ಲಿ ವಾಸವಿದ್ದರು' ಎಂದರು.

ಶನಿವಾರ ಮಧ್ಯಾಹ್ನ ಆರಂಭವಾದ ರಕ್ಷಣಾ ಕಾರ್ಯಾಚರಣೆಯು ಭಾನುವಾರ ಬೆಳಿಗ್ಗೆ 9 ಗಂಟೆಗೆ ಮುಕ್ತಾಯಗೊಂಡಿತು ಎಂದು ಎನ್‌ಡಿಆರ್‌ಎಫ್ ಅಧಿಕಾರಿಗಳು ತಿಳಿಸಿದರು.

ಜಾರ್ಖಂಡ್: ಕಟ್ಟಡ ಕುಸಿತ, 3 ಸಾವು

ಜಾರ್ಖಂಡ್‌ನ ದೇವಘರ್‌ನಲ್ಲಿ ಭಾನುವಾರ ಕುಸಿದುಬಿದ್ದ ಕಟ್ಟಡದ ಅವಶೇಷಗಳನ್ನು ರಕ್ಷಣಾ ಸಿಬ್ಬಂದಿ ತೆರವುಗೊಳಿಸಿದರು – ಪಿಟಿಐ ಚಿತ್ರ

ದೇವಘರ್ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ನ ದೇವಘರ್‌ನಲ್ಲಿ ಭಾನುವಾರ ಎರಡು ಮಹಡಿಯ ಕಟ್ಟಡವೊಂದು ಕುಸಿದುಬಿದ್ದ ಪರಿಣಾಮ ಮೂವರು ಮೃತಪಟ್ಟಿದ್ದು, 8 ಮಂದಿ ಗಾಯಗೊಂಡಿದ್ದಾರೆ.

'ಮುಂಜಾನೆ ಕಟ್ಟಡ ಕುಸಿದು ಬಿದ್ದಿದ್ದು, 11 ಜನರು ಅವಶೇಷಗಳಡಿ ಸಿಲುಕಿದ್ದರು. ಬೆಳಿಗ್ಗೆ 6 ಗಂಟೆಗೆ ಆರಂಭವಾದ ಕಾರ್ಯಾಚರಣೆ ಸಂಜೆ 4 ಗಂಟೆಗೆ ಮುಕ್ತಾಯವಾಯಿತು' ಎಂದು ದೇವಘರ್‌ನ ಜಿಲ್ಲಾಧಿಕಾರಿ ವಿಶಾಲ್ ಸಾಗರ್ ತಿಳಿಸಿದ್ದಾರೆ.

'4 ಮಕ್ಕಳನ್ನು ಸ್ಥಳೀಯರು ರಕ್ಷಿಸಿದ್ದು, ತಕ್ಷಣ ಸ್ಥಳಕ್ಕೆ ಧಾವಿಸಿದ ವಿಪತ್ತು ನಿರ್ವಹಣಾ ಪಡೆಯು 7 ಜನರನ್ನು ಅವಶೇಷಗಳ ಅಡಿಯಿಂದ ಹೊರತೆಗೆದಿದೆ' ಎಂದು ಮಾಹಿತಿ ನೀಡಿದರು.

'ಏಳು ಜನರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ದೇವಘರ್ ವೈದ್ಯ ರಂಜನ್ ಸಿನ್ಹಾ ಅವರು ತಿಳಿಸಿದ್ದಾರೆ.

6 ಉಗ್ರರ ಹತ್ಯೆ: ಇಬ್ಬರು ಯೋಧರು ಹುತಾತ್ಮ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಭಾನುವಾರ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ನಲ್ಲಿ ಆರು ಮಂದಿ ಉಗ್ರರು ಹತ್ಯೆಯಾಗಿದ್ದು, ಸೇನೆಯ ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ.

ಉಗ್ರರು ಅಡಗಿರುವ ಖಚಿತ ಮಾಹಿತಿ ಆಧರಿಸಿ, ಕುಲ್ಗಾಂನ ಮುದರ್ಘಾಮ್ ಹಾಗೂ ಚಿನ್ನಿಗಂ ಗ್ರಾಮಗಳಲ್ಲಿ ಶನಿವಾರ ಸೇನಾ ಪಡೆಗಳು ಶೋಧ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ, ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದರು. ಶನಿವಾರ ಸಂಜೆಯ ವೇಳೆಗೆ ನಾಲ್ವರು ಉಗ್ರರು ಹತ್ಯೆಯಾದರೆ, ಇಬ್ಬರು ಸೈನಿಕರು ಹುತಾತ್ಮರಾದರು. ಭಾನುವಾರ ಬೆಳಿಗ್ಗೆ ಎನ್‌ಕೌಂಟರ್ ನಡೆದ ಸ್ಥಳದಿಂದ ಇನ್ನೂ ಇಬ್ಬರು ಉಗ್ರರ ಶವ ಪತ್ತೆಯಾಗಿದೆ.

ಪ್ಯಾರಾ ಕಮಾಂಡೊದ ಲ್ಯಾನ್ಸ್ ನಾಯಕ್ ಪ್ರದೀಪ್ ನೈನ್ ಹಾಗೂ ರಾಷ್ಟ್ರೀಯ ರೈಫಲ್ಸ್ 1ರ ಹವಾಲ್ದಾರ್ ರಾಜ್‌ಕುಮಾರ್ ಹುತಾತ್ಮ ಯೋಧರು. ಮೃತಪಟ್ಟ ಭಯೋತ್ಪಾದಕರು ಹಿಜ್ಬುಲ್ ಮುಜಾಹಿದೀನ್ ಮತ್ತು ಲಷ್ಕರ್ ಎ ತಯಬಾ ಸಂಘಟನೆಗೆ ಸೇರಿದವರು ಎಂದು ಸ್ಥಳೀಯರು ತಿಳಿಸಿದ್ದಾರೆ.

'ಎನ್‌ಕೌಂಟರ್‌ನಲ್ಲಿ ಆರು ಮಂದಿ ಭಯೋತ್ಪಾದಕರನ್ನು ಹತ್ಯೆಮಾಡಲಾಗಿದೆ. ಭದ್ರತಾ ಪಡೆಗಳಿಗೆ ಸಿಕ್ಕ ದೊಡ್ಡ ಯಶಸ್ಸಿ ಇದು. ಸಂಘರ್ಷ ನಡೆದ ಸ್ಥಳದಲ್ಲಿ ರೈಫಲ್ಸ್, ಗ್ರೆನೇಡ್, ಸಂವಹನ ಉಪಕರಣಗಳು ಸೇರಿದಂತೆ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಿಎಂಡಬ್ಲ್ಯು ಡಿಕ್ಕಿ: ಮಹಿಳೆ ಸಾವು

ಒಂದನೇ ಪುಟದಿಂದ...

ವಿರೋಧ ಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ್ ಆಘಾಡಿ ಮುಖಂಡರು ಸರ್ಕಾರವನ್ನು ಟೀಕಿಸಿದ್ದು, ಆರೋಪಿಗಳ ಶೀಘ್ರ ಬಂಧನಕ್ಕೆ ಆಗ್ರಹಿಸಿದ್ದಾರೆ. ಈಗ ನಡೆಯುತ್ತಿರುವ ಮಹಾರಾಷ್ಟ್ರ ವಿಧಾನಸಭೆಯ ಮುಂಗಾರು ಅಧಿವೇಶನದಲ್ಲಿ ಈ ಪ್ರಕರಣ ಪ್ರತಿಧ್ವನಿಸುವ ಸಾಧ್ಯತೆಯಿದೆ.

ರಾಜೇಶ್ ಶಾ ಮತ್ತು ಅವರ ಚಾಲಕ ರಾಜೇಂದ್ರ ಸಿಂಗ್ ಬಿಡವೆ ಅವರನ್ನು ವಿಚಾರಣೆ ನಡೆಸಿ, ಬಂಧಿಸಿದ್ದಾರೆ. 'ಘಟನೆ ಸಂಬಂಧ ಇಬ್ಬರನ್ನು ಬಂಧಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ' ಎಂದು ಡಿಸಿಪಿ ಕೃಷ್ಣಕಾಂತ್ ಉಪಾಧ್ಯಾಯ ತಿಳಿಸಿದ್ದಾರೆ.

'ಜುಹುವಿನ ಬಾರ್‌ವೊಂದರಲ್ಲಿ ಗೆಳೆಯರ ಜತೆ ಮದ್ಯ ಕುಡಿದಿದ್ದ ಮಿಹಿರ್ ಅವರು ಕಾರಿನಲ್ಲಿ ಮನೆಯತ್ತ ಹೊರಟಿದ್ದರು. ತಾನೇ ಚಾಲನೆ ಮಾಡುತ್ತೇನೆ ಎಂದು ಮಿಹಿರ್ ಅವರು ಚಾಲಕನಿಗೆ ಹೇಳಿ ಕಾರು ಚಲಾಯಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಅಪಘಾತವು ಪೋಶೆ ಕಾರು ಅಪಘಾತ ಘಟನೆಯನ್ನು ನೆನಪಿಸಿದೆ. ಮೇ 19ರಂದು ಪುಣೆಯ ಕಲ್ಯಾಣಿ ನಗರದಲ್ಲಿ ಪಾನ ಮತ್ತ ಬಾಲಕನು ಚಲಾಯಿಸುತ್ತಿದ್ದ ಪೋಶೆ ಕಾರು ಡಿಕ್ಕಿಹೊಡೆದು ಮಧ್ಯಪ್ರದೇಶದ ಇಬ್ಬರು ಟೆಕಿಗಳು ಮೃತಪಟ್ಟಿದ್ದರು.

ಕಾಂಗ್ರೆಸ್‌ನ ಮುಂಬೈ ಘಟಕದ ಅಧ್ಯಕ್ಷೆ, ಸಂಸದರೂ ಆಗಿರುವ ವರ್ಷಾ ಗಾಯಕ್ವಾಡ್, 'ಅಮಾಯಕರೊಬ್ಬರು ಜೀವ ಕಳೆದುಕೊಂಡಿದ್ದಾರೆ. ಇದು ದುಃಖದ ಸಂಗತಿ. ಈ ಘಟನೆಯನ್ನು ರಾಜಕೀಯಗೊಳಿಸಲು ಬಯಸುವುದಿಲ್ಲ. ಆದರೆ ಸರ್ಕಾರವು ಈ ಪ್ರಕರಣದಲ್ಲಿ ತ್ವರಿತ ನ್ಯಾಯವನ್ನು ಖಾತರಿಪಡಿಸಬೇಕು. ಆರೋಪಿಯನ್ನು ಕೂಡಲೇ ಬಂಧಿಸಬೇಕು. ಕಳೆದೆರಡು ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ಇಂತಹ ಮೂರು ಘಟನೆಗಳು ನಡೆದಿವೆ. ಅಜಾಗರೂಕ ಮತ್ತು ಮಿತಿಮೀರಿದ ವೇಗದ ಚಾಲನೆ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕ್ಕೆ ಕಾರಣವಾಗಿದೆ' ಎಂದಿದ್ದಾರೆ.

ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ ಎನ್ನಲಾದ ಬಿಎಂಡಬ್ಲ್ಯು ಕಾರು —ಪಿಟಿಐ ಚಿತ್ರ

ಈಜು ಚಾಂಪಿಯನ್‌ಷಿಪ್: ಶ್ರುತಿ, ಸ್ಮೃತಿಗೆ ಪ್ರಶಸ್ತಿ

ಪವನ್, ರುತ್ವಾ ವೈಯಕ್ತಿಕ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಐಆರ್‌ಎಸ್‌ನ ಅಮಿತ್ ಪವನ್ ಎಚ್. ಮತ್ತು ಡಾಲ್ಫಿನ್‌ನ ರುತ್ವಾ ಎಸ್. ಅವರು ಬಸವನಗುಡಿ ಅಕ್ವಾಟಿಕ್ ಸೆಂಟರ್‌ನಲ್ಲಿ ಭಾನುವಾರ ಮುಕ್ತಾಯವಾದ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ 3ಎ ಮತ್ತು 3ಬಿ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಡಾಲ್ಫಿನ್‌ನ ಶ್ರುತಿ ದಿವಾಕರ್ ಸುವರ್ಣ ಮತ್ತು ಬಿಎಸಿಯ ಸ್ಮೃತಿ ಮಹೇಶ್ ಅವರು ಬಾಲಕಿಯರ ಗುಂಪಿನ 3ಎ ಮತ್ತು 3ಬಿ ಗುಂಪಿನಲ್ಲಿ ಕ್ರಮವಾಗಿ ವೈಯಕ್ತಿಕ ಪ್ರಶಸ್ತಿ ಗೆದ್ದರು.

ರುತುಜಾ ದಾಖಲೆ: ರುತುಜಾ ಎಸ್. ಅವರು ಬಾಲಕಿಯರ 1ಎ ಗುಂಪಿನ 50 ಮೀ ಫ್ರೀಸ್ಟೈಲ್ ವಿಭಾಗದಲ್ಲಿ 27.23 ಸೆಕೆಂಡ್‌ನಲ್ಲಿ ಗುರಿ ತಲುಪಿ ದಾಖಲೆ ಬರೆದರು.

ಫಲಿತಾಂಶಗಳು: 15ರಿಂದ 17 ವರ್ಷದೊಳಗಿನ ಬಾಲಕರು: 4x200 ಮೀ ಫ್ರೀಸ್ಟೈಲ್: ಡಾಲ್ಫಿನ್ ಅಕ್ವಾಟಿಕ್ಸ್ (8:17.31). 1ಎ ಗುಂಪು: 200 ಮೀ ಮೆಡ್ಲೆ: ನವನೀತ್ ಆರ್.ಗೌಡ (ಡಾಲ್ಫಿನ್; 2ನಿ 17.05ಸೆ), 200 ಮೀ ಬ್ರೆಸ್ಟ್‌ಸ್ಟ್ರೋಕ್: ಕ್ರಿಶ್ ಸುಕುಮಾರ್ (ಡಾಲ್ಫಿನ್; 2 ನಿ 30.97 ಸೆ), 100 ಮೀ ಬಟರ್‌ಫ್ಲೈ: ಚಿಂತನ್ ಎಸ್.ಶೆಟ್ಟಿ (ಮಂಗಲಾ; 57.02 ಸೆ), 200 ಮೀ. ಬ್ಯಾಕ್‌ಸ್ಟ್ರೋಕ್: ಅಮಾನ್ ಅಭಿಜಿತ್ ಸುಣಗಾರ್ (ಡಾಲ್ಫಿನ್; 2ನಿ 13.06 ಸೆ). 1ಬಿ ಗುಂಪು: 200 ಮೀ ಮೆಡ್ಲೆ: ಪೃಥ್ವಿರಾಜ್ ಮೆನನ್ (ಬಿಸಿಎ; 2ನಿ 18.83 ಸೆ), 100 ಮೀ ಬಟರ್‌ಫ್ಲೈ: ಹರಿಕಾರ್ತಿಕ್ ವೇಲು (ಗೋಲ್ಡನ್; 59.45), 200 ಮೀ ಬ್ರೆಸ್ಟ್‌ಸ್ಟ್ರೋಕ್: ಡ್ಯಾನಿಯಲ್ ಪೌಲ್ (ಬಿಎಸಿ; 2ನಿ 30.57 ಸೆ), 200 ಮೀ ಬ್ಯಾಕ್‌ಸ್ಟ್ರೋಕ್: ವೇದಾಂತ್ ವಿ.ಎಂ (ಬಿಎಸಿ; 2ನಿ 09.31ಸೆ). 3ಎ ಗುಂಪು: 200 ಮೀ ಮೆಡ್ಲೆ: ಲೋಹಿತಾಶ್ವ ನಾಗೇಶ್.ಎಸ್ (ಗ್ಲೋಬಲ್; 2ನಿ 47.47ಸೆ), 100 ಮೀ ಬಟರ್‌ಫ್ಲೈ: ಅಮಿತ್ ಪವನ್ ಎಚ್ (ಜಿಐಎಸ್‌ಆರ್; 1ನಿ 09.04 ಸೆ), 50 ಮೀ ಫ್ರೀಸ್ಟೈಲ್: ರಕ್ಷಿತ್ ಎ.ಕೋರೆ (ಎನ್‌ಎಸಿ: 31.28 ಸೆ). 3ಬಿ ಗುಂಪು: 200 ಮೀ ಮೆಡ್ಲೆ: ಸ್ನಿತಿಕ್ ಎನ್. (ಡಾಲ್ಫಿನ್; ನಿ 03.89 ಸೆ), 100 ಮೀ ಬಟರ್‌ಫ್ಲೈ: ರುತ್ವಾ ಎಸ್. (ಡಾಲ್ಫಿನ್; 1ನಿ 16.74ಸೆ), 50 ಮೀಟರ್ ಫ್ರೀಸ್ಟೈಲ್: ರುತ್ವಾ ಎಸ್. (ಡಾಲ್ಫಿನ್; 32.83 ಸೆ)

ಬಾಲಕರ ವೈಯಕ್ತಿಕ ಚಾಂಪಿಯನ್: 3ಎ ಅಮಿತ್ ಪವನ್ ಎಚ್ (ಜಿಐಆರ್‌ಎಸ್, 33 ಅಂಕ); ರುತ್ವ ಎಸ್. (ಡಾಲ್ಫಿನ್, 35 ಅಂಕ)

15ರಿಂದ 17 ವರ್ಷದೊಳಗಿನ ಬಾಲಕಿಯರು: 4x200 ಮೀ ಫ್ರೀಸ್ಟೈಲ್: ಬಿಎಸಿ 'ಟೀಮ್ ಎ' (9ನಿ 11.97 ಸೆ). 1ಎ ಗುಂಪು: 200 ಮೀ ಬ್ಯಾಕ್‌ಸ್ಟ್ರೋಕ್: ಸುನಿಧಿ ಹಾಲ್ಕೆರೆ (ಎಸ್‌ಬಿಸಿ; 2ನಿ 29.43ಸೆ), 50 ಮೀ ಫ್ರೀಸ್ಟೈಲ್: ರುಜುಜಾ ಎಸ್. (ಡಾಲ್ಫಿನ್; 27.23ಸೆ), 200 ಮೀ ಮಿಡ್ಲೆ: ಮಾನವಿ ವರ್ಮಾ (ಡಾಲ್ಫಿನ್; 2ನಿ 27.93ಸೆ), 200 ಮೀ ಬ್ರೆಸ್ಟ್‌ಸ್ಟ್ರೋಕ್: ಲಿನೆಯ್‌ಶಾ ಎ.ಕೆ. (ಗ್ಲೋಬಲ್; 2ನಿ 51.47 ಸೆ), 100 ಮೀ ಬಟರ್‌ಫ್ಲೈ: ರುತ್ವಿಕಾ ಬಿ.ಎಂ. (ಮತ್ಸ್ಯ; 1ನಿ 06.38ಸೆ). 1ಬಿ ಗುಂಪು: 200 ಮೀ ಬ್ಯಾಕ್‌ಸ್ಟೋಕ್: ಮೀನಾಕ್ಷಿ ಮೆನನ್ (ಬಿಎಸಿ; 2ನಿ 29.28ಸೆ), 200 ಮೀ ಮೆಡ್ಲೆ: ತಾನ್ಯಾ ಎಸ್. (ಜಿಐಆರ್‌ಎಸ್; 2ನಿ 28.26ಸೆ), 50 ಮೀ ಫ್ರೀಸ್ಟೈಲ್: ಮೊನ್ಯಾ ಕೌಸುಮಿ ಕೆ. (ಪುತ್ತೂರು; 29.67ಸೆ), 200 ಮೀ ಬ್ರೆಸ್ಟ್‌ಸ್ಟ್ರೋಕ್: ತಾನ್ಯಾ ಎಸ್. (ಜಿಐಆರ್‌ಎಸ್; 2ನಿ 43.62ಸೆ), 100 ಮೀ ಬಟರ್‌ಫ್ಲೈ: ಸುಹಾಸಿನಿ ಘೋಷ್ (ಡಾಲ್ಫಿನ್; 1ನಿ 05.94ಸೆ). 3ಎ ಗುಂಪು: 50 ಮೀ ಫ್ರೀಸ್ಟೈಲ್: ಶ್ರುತಿ ದಿವಾಕರ್ ಸುವರ್ಣ (ಡಾಲ್ಫಿನ್; 31.45ಸೆ), 200 ಮೆಡ್ಲೆ: ಶ್ರೇಯಾ ಸುರೇಶ್ ಪೂಜಾರ್ (ಬಿಎಸ್‌ಎ; 2ನಿ 54.10ಸೆ). 3ಬಿ ಗುಂಪು: 50 ಮೀ ಫ್ರೀಸ್ಟೈಲ್: ಸ್ಮೃತಿ ಮಹೇಶ್ (ಬಿಎಸಿ; 34.13ಸೆ), 200 ಮೀ ಮೆಡ್ಲೆ: ಝೂರನಾ ಸಿಸೋಡಿಯಾ (ಏಕಲವ್ಯ; 3ನಿ 06.12ಸೆ),

ಬಾಲಕಿಯರ ವೈಯಕ್ತಿಕ ಚಾಂಪಿಯನ್: 3ಎ ಗುಂಪು: ಶ್ರುತಿ ದಿವಾಕರ್ ಸುವರ್ಣ (ಡಾಲ್ಫಿನ್, 33 ಅಂಕ); 3ಬಿ ಗುಂಪು: ಸ್ಮೃತಿ ಮಹೇಶ್ (ಬಿಎಸಿ, 32 ಅಂಕ)

ಪ್ರಶಸ್ತಿ ಪಡೆದ ಜಿಐಆರ್‌ಎಸ್‌ನ ಅಮಿತ್ ಪವನ್ ಎಚ್.

ಸ್ಕ್ವಾಷ್: ಭಾರತಕ್ಕೆ ಡಬಲ್ ಕಿರೀಟ

ಜೊಹೋರ್, ಮಲೇಷ್ಯಾ (ಪಿಟಿಐ): ಭಾರತದ ಅಭಯ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಪುರುಷರ ಡಬಲ್ಸ್ ಹಾಗೂ ಮಿಶ್ರ ಡಬಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಅಭಯ್ ಸಿಂಗ್ ಮತ್ತು ವೇಲವನ್ ಸೆಂಥಿಲ್‌ಕುಮಾರ್ ಜೋಡಿ 11-4, 11-5 ರಿಂದ 2ನೇ ಶ್ರೇಯಾಂಕದ ಮಲೇಷ್ಯಾದ ಓಂಗ್ ಸಾಯಿ ಹಂಗ್ ಮತ್ತು ಸೈಫಿಕ್ ಕಮಾಲ್ ಜೋಡಿ ವಿರುದ್ಧ ಜಯ ಸಾಧಿಸಿತು. ಅಭಯ್ ಸಿಂಗ್ ಏಷ್ಯನ್ ಗೇಮ್ಸ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಅಭಯ್ ಸಿಂಗ್ ಮತ್ತು ಅನುಭವಿ ಆಟಗಾರ್ತಿ ಜೋಶ್ನಾ ಚಿಣ್ಣಪ್ಪ ಜೋಡಿ 11-8, 10-11, 11-5ರಿಂದ ಹಾಂಗ್‌ಕಾಂಗ್‌ನ ತೊಂಗ್ ಶಿಜ್ ವಿಂಗ್ ಮತ್ತು ತಾಂಗ್ ಮಿಂಗ್ ಹಾಂಗ್ ಜೋಡಿಯನ್ನು ಪರಾಭವಗೊಳಿಸಿತು.

ಪ್ರಿಯಾಂಶು ರಾಜಾವತ್‌ಗೆ ಸೋಲು

ಕ್ಯಾಲ್ಗರಿ (ಪಿಟಿಐ): ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ. ಪ್ರಿಯಾಂಶು ರಾಜಾವತ್ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ನ ಅಲೆಕ್ಸ್ ಲೆನಿಯರ್ ವಿರುದ್ಧ ಸೋಲನುಭವಿಸಿದ್ದಾರೆ.

ಇಲ್ಲಿನ ಮಾರ್ಕಿನ್ ಮೆಕ್‌ಫಿಲ್ ಸೆಂಟರ್‌ನಲ್ಲಿ ನಡೆದ ಪಂದ್ಯದಲ್ಲಿ ರಾಜಾವತ್, 17-21, 10-21ರಿಂದ ಲೆನಿಯರ್ ವಿರುದ್ಧ ಪರಾಭವಗೊಂಡರು.

ಅಭಿನವ್‌ಗೆ ಪ್ರಶಸ್ತಿ: ತನಿಷ್ಕಾಗೆ 'ಹ್ಯಾಟ್ರಿಕ್'

ಮಂಗಳೂರು: ಸತತ ಮೂರು ದಿನ ಮಿಂಚಿದ ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ್ ಇಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 'ಹ್ಯಾಟ್ರಿಕ್' ಸಾಧನೆಯೊಂದಿಗೆ ಸಂಭ್ರಮಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ನಗರದ ಕಂಕನಾಡಿಯ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಟೂರ್ನಿಯ 17, 15 ಮತ್ತು 13 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ 13 ವರ್ಷದೊಳಗಿನವರ ಫೈನಲ್‌ನಲ್ಲಿ ತನಿಷ್ಕಾ 11-1, 11-3, 11-1ರಲ್ಲಿ ಐರಿನ್ ಅನಾ ಎದುರು ಜಯ ಸಾಧಿಸಿದರು. ಇದೇ ವಯೋಮಾನದ ಬಾಲಕರ ವಿಭಾಗದಲ್ಲಿ ಅಭಿನವ್ ಪ್ರಸನ್ನ 6-11, 11-4, 5-11, 14-12, 11-2ರಲ್ಲಿ ಶ್ರೀರಾಮ್ ಕಿರಣ್ ವಿರುದ್ಧ ಗೆದ್ದರು. ಶನಿವಾರ ರಾತ್ರಿ ನಡೆದ 15 ವರ್ಷದೊಳಗಿನ ಬಾಲಕರ ಫೈನಲ್‌ನಲ್ಲಿ ಅರ್ಣವ್ 11-6, 11-5, 5-11, 11-8ರಲ್ಲಿ ಅಥರ್ವ ನವರಂಗೆ ಅವರನ್ನು ಮಣಿಸಿದರು. ಭಾನುವಾರ ನಡೆದ 11 ವರ್ಷದೊಳಗಿನ ಹೋಪ್ಸ್ ಬಾಲಕರ ವಿಭಾಗದಲ್ಲಿ ಅರ್ಣವ್ ಮಿಥುನ್ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ ಅವರು ಸುಚೇತ್ ಧರೆಣ್ಣವರ್ ಎದುರು 4-11, 11–5, 13-11, 8-11, 11-5ರಲ್ಲಿ ಜಯಿಸಿದರು. ಬಾಲಕಿಯರ ವಿಭಾಗದ ಪ್ರಶಸ್ತಿ ಆದ್ಯಾ ಎಂ ಪಾಲಾಯಿತು. ಪ್ರಶಸ್ತಿ ಸುತ್ತಿನಲ್ಲಿ ಅವರು ಸೃಷ್ಟಿ ಧರಿವಾಲ್ ವಿರುದ್ಧ 11-8, 11-7, 11-9ರಲ್ಲಿ ಗೆಲುವು ಸಾಧಿಸಿದರು.

ಡಚ್ ತಂಡಕ್ಕೆ ವರದಾನವಾದ 'ಉಡುಗೊರೆ' ಗೋಲು

ಸೆಮಿಗೆ ನೆದರ್ಲೆಂಡ್ಸ್: ಟರ್ಕಿಗೆ ನಿರಾಸೆ

ಬರ್ಲಿನ್ (ಎಪಿ): ಆರಂಭಿಕ ಹಿನ್ನಡೆ ಅನುಭವಿಸಿದ್ದ ನೆದರ್ಲೆಂಡ್ಸ್ ತಂಡವು 'ಉಡುಗೊರೆ' ಗೋಲಿನ ನೆರವಿನಿಂದ ಯುರೋ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 2–1ರಿಂದ ಟರ್ಕಿ ತಂಡವನ್ನು ಮಣಿಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿತು.

ಶನಿವಾರ ತಡರಾತ್ರಿ ನಡೆದ ರೋಚಕ ಹಣಾಹಣಿಯಲ್ಲಿ 76ನೇ ನಿಮಿಷದಲ್ಲಿ ಟರ್ಕಿಯ ಮೆರ್ಟ್ ಮುಲ್ಡೂರ್ ಅವರು ನೆದರ್ಲೆಂಡ್ಸ್ ತಂಡಕ್ಕೆ 'ಉಡುಗೊರೆ' ಗೋಲು ನೀಡಿದರು. ಇದೇ ಗೋಲು ಡಚ್ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರೆ, ಟರ್ಕಿಯ ಸೆಮಿಫೈನಲ್ ಕನಸನ್ನು ಭಗ್ನಗೊಳಿಸಿತು.

ನೆದರ್ಲೆಂಡ್ಸ್ ತಂಡವು ಡಾರ್ಟ್‌ಮಂಡ್‌ನಲ್ಲಿ ಬುಧವಾರ ನಡೆಯಲಿರುವ ಎರಡನೇ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಮಂಗಳವಾರ ಮೊದಲ ಸೆಮಿಫೈನಲ್‌ನಲ್ಲಿ ಸ್ಪೇನ್ ತಂಡವು ಫ್ರಾನ್ಸ್ ತಂಡವನ್ನು ಎದುರಿಸಲಿದೆ.

ಮೊದಲಾರ್ಧದಲ್ಲೇ ಸಮೇಟ್ ಅಕ್ಯೆಡಿನ್ (35ನೇ ನಿಮಿಷ) ಅವರು ಟರ್ಕಿ ತಂಡಕ್ಕೆ ಮುನ್ನಡೆ ಒದಗಿಸಿದ್ದರು. ಆದರೆ, 70ನೇ ನಿಮಿಷದಲ್ಲಿ ನೆದರ್ಲೆಂಡ್ಸ್‌ನ ಸ್ಟೀಫನ್ ಡಿ ವ್ರಿಜ್ ಚೆಂಡನ್ನು ಗುರಿ ಸೇರಿಸಿ ಸ್ಕೋರ್ ಸಮಬಲಗೊಳಿಸಿದರು. ಅದಾದ ಆರು ನಿಮಿಷದಲ್ಲೇ ಉಡುಗೊರೆ ಗೋಲಿನಿಂದ ದೊರೆತ ಮುನ್ನಡೆಯನ್ನು ಪಂದ್ಯದ ಅಂತ್ಯದವರೆಗೂ ಕಾಯ್ದುಕೊಂಡ ಡಚ್ ಆಟಗಾರರು, ನಾಲ್ಕರ ಘಟ್ಟವನ್ನು ಪ್ರವೇಶಿಸಿದರು.

'ಇಂದಿನ ಪಂದ್ಯ ನಿಜವಾಗಿಯೂ ರೋಚಕವಾಗಿತ್ತು. ಟರ್ಕಿ ತಂಡವೂ ಬಲಿಷ್ಠವಾಗಿತ್ತು. ನಾವು ಸಾಂಘಿಕ ಪ್ರದರ್ಶನ ನೀಡಿದೆವು. ಗೆಲುವಿಗೆ ನಮ್ಮ ತಂಡ ಅರ್ಹವಾಗಿತ್ತು' ಎಂದು ಪಂದ್ಯದ ಬಳಿಕ ಸ್ಟೀಫನ್ ಡಿ ವ್ರಿಜ್ ಪ್ರತಿಕ್ರಿಯಿಸಿದರು.

'ಸ್ಟ್ರೈಕರ್ ವೂಟ್ ವೆಘೋರ್ಸ್ಟ್ ದ್ವಿತೀಯಾರ್ಧಕ್ಕೆ ಪ್ರವೇಶ ಮಾಡಿದ ಬಳಿಕ ಪಂದ್ಯ ತಿರುವು ಪಡೆಯಿತು. ಮುಂಚೂಣಿಯಲ್ಲಿ ಹೋರಾಟ ನಡೆಸಿದ ಅವರು, ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದರು' ಎಂದು ಸ್ಟೀಫನ್ ಹೇಳಿದರು.

ಡಿಫೆಂಡರ್ ಮೆರಿಹ್ ಡೆಮಿರಾಲ್ ಅವರ ಅನುಪಸ್ಥಿತಿಯಲ್ಲಿ ಟರ್ಕಿ ತಂಡವು ಕಣಕ್ಕಿಳಿಯಿತು. ಮಂಗಳವಾರ ನಡೆದ ಆಸ್ಟ್ರಿಯಾ ವಿರುದ್ಧದ ಪಂದ್ಯದಲ್ಲಿ ಸ್ಕೋರ್ ಗಳಿಸಿದ ನಂತರ ರಾಷ್ಟ್ರೀಯತೆಯ ಕೈ ಸನ್ನೆ ಮಾಡಿದ್ದಕ್ಕಾಗಿ ಡೆಮಿರಾಲ್ ಎರಡು ಪಂದ್ಯಗಳಿಗೆ ಅಮಾನತುಗೊಂಡಿದ್ದರು.

ಗೋಲು ಗಳಿಸಿದ ಸಂಭ್ರಮದಲ್ಲಿ ನೆದರ್ಲೆಂಡ್ಸ್ ಆಟಗಾರರು – ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಸೆಮಿಫೈನಲ್ ಹಣಾಹಣಿ

ತಂಡಗಳು	ದಿನಾಂಕ, ಸಮಯ
ಸ್ಪೇನ್–ಫ್ರಾನ್ಸ್	ಜುಲೈ 10, ರಾತ್ರಿ 12.30
ನೆದರ್ಲೆಂಡ್ಸ್–ಇಂಗ್ಲೆಂಡ್	ಜುಲೈ 11, ರಾತ್ರಿ 12.30

ಋತುರಾಜ್, ರಿಂಕು ಬಿರುಸಿನ ಬ್ಯಾಟಿಂಗ್ • ಆತಿಥೇಯ ಜಿಂಬಾಬ್ವೆಗೆ ನಿರಾಸೆ

ಅಭಿಷೇಕ್ ಶತಕ: ಭಾರತಕ್ಕೆ ಜಯ

ಹರಾರೆ (ಪಿಟಿಐ): ಅಭಿಷೇಕ್ ಶರ್ಮಾ ಅವರ ಸಿಡಿಲಬ್ಬರದ ಶತಕದ ಮುಂದೆ ಜಿಂಬಾಬ್ವೆ ತಂಡವು ತತ್ತರಿಸಿತು.

ಭಾನುವಾರ ಇಲ್ಲಿ ನಡೆದ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಅಭಿಷೇಕ್ 47 ಎಸೆತಗಳಲ್ಲಿ ಶತಕ ಗಳಿಸಿದರು. ಅದರಿಂದಾಗಿ ಭಾರತ ತಂಡವು 100 ರನ್‌ಗಳಿಂದ ಜಯಿಸಲು ಸಾಧ್ಯವಾಯಿತು. ಐದು ಪಂದ್ಯಗಳ ಸರಣಿಯಲ್ಲಿ 1-1ರ ಸಮಬಲ ಸಾಧಿಸಿತು.

ಶನಿವಾರ ನಡೆದಿದ್ದ ಪಂದ್ಯದಲ್ಲಿ ಜಿಂಬಾಬ್ವೆ ಬೌಲಿಂಗ್ ಎದುರು ಪರದಾಡಿದ್ದ ಭಾರತದ ಬ್ಯಾಟರ್‌ಗಳು ಈ ಪಂದ್ಯದಲ್ಲಿ ಅಬ್ಬರಿಸಿದರು. ಇದರಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 234 ರನ್ ಗಳಿಸಿತು. ಅದಕ್ಕುತ್ತರವಾಗಿ ಜಿಂಬಾಬ್ವೆ 18.4 ಓವರ್‌ಗಳಲ್ಲಿ 134 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ನಾಯಕ ಶುಭಮನ್ ಗಿಲ್ (2 ರನ್) ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸಿದರು. ಆದರೆ ಉಳಿದ ಮೂವರು ಬ್ಯಾಟರ್‌ಗಳು ಅಮೋಘವಾಗಿ ಆಡಿದರು.



—ಎಎಫ್‌ಪಿ ಚಿತ್ರ

ಅದರಲ್ಲಿ ಅಭಿಷೇಕ್ 212.77ರ ಸ್ಟ್ರೈಕ್‌ರೇಟ್‌ನಲ್ಲಿ ಶತಕ ದಾಖಲಿಸಿದರು. 23 ವರ್ಷದ ಎಡಗೈ ಬ್ಯಾಟರ್ 7 ಬೌಂಡರಿ ಮತ್ತು 8 ಸಿಕ್ಸರ್‌ಗಳನ್ನು ಎತ್ತಿದರು. ಅವರಿಗೆ ಋತುರಾಜ್ ಗಾಯಕವಾಡ (ಔಟಾಗದೆ 77; 47ಎ) ಜೊತೆ ನೀಡಿದರು. ಇಬ್ಬರೂ ಸೇರಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 137 ರನ್ ಸೇರಿಸಿದರು. 14ನೇ ಓವರ್‌ನವರೆಗೂ ಇವರ ಬೀಸಾಟ ಮುಂದುವರಿಯಿತು.

ವೆಲ್ಲಿಂಗ್ಟನ್ ಮಸಾಕಜಾ ಬೌಲಿಂಗ್‌ನಲ್ಲಿ ಅಭಿಷೇಕ್ ಅವರು ಡಿಯಾನ್ ಮೈಯರ್ಸ್‌ಗೆ ಕ್ಯಾಚಿತ್ತರು. ಅದರೊಂದಿಗೆ ಜೊತೆಯಾಟ ಮುರಿದುಬಿತ್ತು. ಶನಿವಾರ ನಡೆದಿದ್ದ ಪಂದ್ಯದಲ್ಲಿ ಅಭಿಷೇಕ್ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಆ ಪಂದ್ಯದಲ್ಲಿ ಸೊನ್ನೆ ಸುತ್ತಿದ್ದರು. ಅಭಿಷೇಕ್ ಅವರು ಕಳೆದ ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಮಿಂಚಿದ್ದರು.

ಅವರು ನಿರ್ಗಮಿಸಿದ ನಂತರ ಋತುರಾಜ್ ಜೊತೆಗೂಡಿದ ರಿಂಕು ಸಿಂಗ್ (ಔಟಾಗದೆ 48; 22ಎ) ಬೌಲರ್‌ಗಳನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಿದರು. ಐದು ಸಿಕ್ಸರ್ ಮತ್ತು ಎರಡು ಬೌಂಡರಿ ಸಿಡಿಸಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡಕ್ಕೆ ಭಾರತದ ವೇಗಿ ಮುಕೇಶ್ ಕುಮಾರ್ (37ಕ್ಕೆ3), ಆವೇಶ್ ಖಾನ್ (15ಕ್ಕೆ3) ಮತ್ತು ರವಿ ಬಿಷ್ಣೋಯಿ (11ಕ್ಕೆ2) ಕಡಿವಾಣ ಹಾಕಿದರು. ಜಿಂಬಾಬ್ವೆಯ ಆರಂಭಿಕ ಬ್ಯಾಟರ್ ವೆಸ್ಲಿ ಮದೇವೆರೆ (43; 39ಎ) ಹೋರಾಟ ಮಾಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 234 (ಅಭಿಷೇಕ್ ಶರ್ಮಾ 100, ಋತುರಾಜ್ ಗಾಯಕವಾಡ್ ಔಟಾಗದೆ 77, ರಿಂಕು ಸಿಂಗ್ ಔಟಾಗದೆ 48, ಮುಜರ್‌ಬಾನಿ 30ಕ್ಕೆ1, ಮಸಾಕಜಾ 29ಕ್ಕೆ1) ಜಿಂಬಾಬ್ವೆ: 18.4 ಓವರ್‌ಗಳಲ್ಲಿ 134 (ವೆಸ್ಲಿ ಮದೆವೆರೆ 43, ಬ್ರಯನ್ ಬೆನೆಟ್ 26, ಲೂಕ್ ಜಾಂಗ್ವೆ 33, ಮುಕೇಶ್ ಕುಮಾರ್ 37ಕ್ಕೆ3, ಆವೇಶ್ ಖಾನ್ 15ಕ್ಕೆ3, ರವಿ ಬಿಷ್ಣೋಯಿ 11ಕ್ಕೆ2) **ಪಂದ್ಯದ ಆಟಗಾರ:** ಅಭಿಷೇಕ್ ಶರ್ಮಾ **ಫಲಿತಾಂಶ:** ಭಾರತಕ್ಕೆ 100 ರನ್ ಜಯ

ಭಾರತ- ದಕ್ಷಿಣ ಆಫ್ರಿಕಾ ಪಂದ್ಯ ರದ್ದು

ಮಳೆ ಅಡಚಣೆ: ಅರ್ಧಶತಕ ಗಳಿಸಿದ್ದ ಆಟಗಾರ್ತಿ ತಾಜ್ಮೀನ್

ಚೆನ್ನೈ (ಪಿಟಿಐ): ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡವು ಮೊದಲು ಬ್ಯಾಟಿಂಗ್ ಮಾಡಿ 6 ವಿಕೆಟ್‌ಗೆ 177 ರನ್ ಗಳಿಸಿದ ನಂತರ ನಿರಂತರ ಮಳೆ ಸುರಿದ ಪರಿಣಾಮ ಭಾರತ ವಿರುದ್ಧದ ಎರಡನೇ ಟಿ20 ಪಂದ್ಯ ರದ್ದುಗೊಂಡಿತು.

ಈ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ ಪ್ರವಾಸಿ ತಂಡವು 1-0 ಮುನ್ನಡೆ ಕಾಯ್ದುಕೊಂಡಿದೆ. ಮೊದಲ ಪಂದ್ಯದಲ್ಲಿ ಭಾರತ 12 ರನ್‌ಗಳಿಂದ ಪರಾಭವಗೊಂಡಿತ್ತು. ಹೀಗಾಗಿ, ತವರಿನಲ್ಲಿ ಸರಣಿ ಸೋಲನ್ನು ತಪ್ಪಿಸಿಕೊಳ್ಳಲು ಹರ್ಮನ್‌ಪ್ರೀತ್ ಕೌರ್ ಬಳಗವು ಮಂಗಳವಾರ (ಜುಲೈ 9) ಇಲ್ಲಿ ನಡೆಯುವ ಅಂತಿಮ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿದೆ.

ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್ ತಾಜ್ಮೀನ್ ಬ್ರಿಟ್ಸ್ ಬ್ಯಾಟಿಂಗ್ —ಪಿಟಿಐ ಚಿತ್ರ

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ದಕ್ಷಿಣ ಆಫ್ರಿಕಾದ ಇನಿಂಗ್ಸ್ ವೇಳೆಯೂ ಮೂರು ಬಾರಿ ಮಳೆ ಅಡಚಣೆ ಉಂಟುಮಾಡಿತು. ಇನಿಂಗ್ಸ್ ವಿರಾಮ ವೇಳೆ ಮತ್ತೆ ಮಳೆ ಆರಂಭವಾಯಿತು. ಸಾಕಷ್ಟು ಸಮಯ ಕಾದರೂ ಮಳೆ ನಿಲ್ಲಲಿಲ್ಲ. ಹೀಗಾಗಿ ಅಂಪೈರ್‌ಗಳು ಪಂದ್ಯ ರದ್ದು ಮಾಡುವ ನಿರ್ಧಾರ ಪ್ರಕಟಿಸಿದರು.

ಇದಕ್ಕೂ ಮೊದಲು ಪ್ರವಾಸಿ ತಂಡವು ತಾಜ್ಮೀನ್ ಬ್ರಿಟ್ಸ್ (52; 39ಎ, 4X6, 6X1) ಮತ್ತು ಅನೆಕಿ ಬಾಷ್ (40; 32ಎ, 4X6) ಅವರ ಬ್ಯಾಟಿಂಗ್ ಬಲದಿಂದ ಸವಾಲಿನ ಮೊತ್ತ ಪೇರಿಸಿತ್ತು.

ಭಾರತದ ಪೂಜಾ ವಸ್ತ್ರಕರ್ (37ಕ್ಕೆ2) ಮತ್ತು ದೀಪ್ತಿ ಶರ್ಮಾ (20ಕ್ಕೆ2) ಉತ್ತಮವಾಗಿ ಬೌಲಿಂಗ್ ಮಾಡಿದರು. ಆದರೂ ಬ್ಯಾಟರ್‌ಗಳ ರನ್ ಗಳಿಕೆಗೆ ಕಡಿವಾಣ ಹಾಕುವಲ್ಲಿ ಉಳಿದ ಬೌಲರ್‌ಗಳು ವಿಫಲರಾದರು.

ನಾಯಕಿ ಲೌರಾ ವೊಲ್ವಾರ್ಟ್ (22; 12 ಎಸೆತ) ಮತ್ತು ಬ್ರಿಟ್ಸ್ ಮೊದಲ ವಿಕೆಟ್ ಜೊತೆಯಾಟದಲ್ಲಿ 43 ರನ್ (4 ಓವರ್‌ಗಳಲ್ಲಿ) ಗಳಿಸಿ ಉತ್ತಮ ಆರಂಭ ನೀಡಿದರು. ಲೌರಾ ವಿಕೆಟ್ ಗಳಿಸಿದ ಪೂಜಾ ಅವರು ಜೊತೆಯಾಟವನ್ನು ಮುರಿದರು. ಇದಾಗಿ ನಾಲ್ಕು ಓವರ್‌ಗಳ ನಂತರ ದೀಪ್ತಿ ಶರ್ಮಾ ಬೌಲಿಂಗ್‌ನಲ್ಲಿ ಮರೈಜನ್ ಕ್ಯಾಪ್ ಕೂಡ ಔಟಾದರು. ಈ ಹಂತದಲ್ಲಿ ಬ್ರಿಟ್ಸ್ ಮತ್ತು ಬಾಷ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 38 ರನ್ ಸೇರಿಸಿದ ತಂಡದ ಮೊತ್ತವನ್ನು 100ರ ಗಡಿ ದಾಟಿಸಿದರು. ದೀಪ್ತಿ ಬೌಲಿಂಗ್‌ನಲ್ಲಿ ತಾಜ್ಮೀನ್ ಔಟಾದ ನಂತರ ಕ್ರೀಸ್‌ಗೆ ಬಂದ ಬ್ಯಾಟರ್‌ಗಳು ಬೀಸಾಟಕ್ಕೆ ಒತ್ತು ನೀಡಿದರು. ಇದರಿಂದಾಗಿ ತಂಡದ ಮೊತ್ತವೂ ಹೆಚ್ಚಾಯಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 177 (ಲೌರಾ ವೊಲ್ವಾರ್ಟ್ 22, ತಾಜ್ಮೀನ್ ಬ್ರಿಟ್ಸ್ 52, ಮರೈಜನ್ ಕ್ಯಾಪ್ 20, ಅನೆಕೆ ಬಾಷ್ 40, ಪೂಜಾ ವಸ್ತ್ರಕರ್ 37ಕ್ಕೆ2, ದೀಪ್ತಿ ಶರ್ಮಾ 20ಕ್ಕೆ2). **ಫಲಿತಾಂಶ:** ಪಂದ್ಯ ರದ್ದು

ವಿಂಬಲ್ಡನ್ ಟೆನಿಸ್ ಟೂರ್ನಿ: ಎಂಟರ ಘಟ್ಟಕ್ಕೆ ಜಾಸ್ಮಿನ್, ಸಿನ್ನರ್

ಕ್ವಾರ್ಟರ್ ಫೈನಲ್‌ಗೆ ಅಲ್ಕರಾಜ್

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು. ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಅವರು ಭಾನುವಾರ ಫ್ರಾನ್ಸ್‌ನ ಉಗೊ ಹಂಬರ್ಟ್ ಅವರನ್ನು ಮಣಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಸ್ಪೇನ್‌ನ ಅಲ್ಕರಾಜ್ 6-3, 6-4, 1-6, 7-5 ಸೆಟ್‌ಗಳಿಂದ 16ನೇ ಕ್ರಮಾಂಕದ ಹಂಬರ್ಟ್ ಅವರನ್ನು ಮಣಿಸಿದರು. ಈ ಮೂಲಕ ಪಾಲ್ಗೊಂಡ 14 ಪ್ರಮುಖ ಟೂರ್ನಿಗಳಲ್ಲಿ ಒಂಬತ್ತನೇ ಬಾರಿ ಎಂಟರ ಘಟ್ಟ ಪ್ರವೇಶಿಸಿದ ಸಾಧನೆ ಮಾಡಿದರು. ಮೂರನೇ ಸುತ್ತಿನ ಪಂದ್ಯದಲ್ಲಿ ಫ್ರಾನ್ಸಿಸ್ ಟಿಯಾಫೊ (ಅಮೆರಿಕ) ವಿರುದ್ಧ ಐದು ಸೆಟ್‌ಗಳ ಹೋರಾಟದಲ್ಲಿ ಪ್ರಯಾಸದ ಗೆಲುವು ಪಡೆದಿದ್ದ 21 ವರ್ಷದ ಅಲ್ಕರಾಜ್ ಅವರಿಗೆ ಈ ಪಂದ್ಯದಲ್ಲೂ ಪ್ರಬಲ ಸ್ಪರ್ಧೆ ಎದುರಾಯಿತು. ಮೊದಲೆರಡು ಸೆಟ್‌ನಲ್ಲಿ ಅಲ್ಕರಾಜ್ ಗೆಲುವು ಸಾಧಿಸಿದರೆ, ಮೂರನೇ ಸೆಟ್‌ನಲ್ಲಿ ಹಂಬರ್ಟ್ ಮೇಲುಗೈ ಸಾಧಿಸಿದರು. ಮತ್ತೆ ಲಯ ಕಂಡುಕೊಂಡ ಸ್ಪೇನ್ ಆಟಗಾರ, ನಾಲ್ಕನೇ ಸೆಟ್‌ಗಳನ್ನು ವಶ ಮಾಡಿಕೊಂಡರು.

ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ —ಎಎಫ್‌ಪಿ ಚಿತ್ರ

ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರೂ ಅಂತಿಮ ಎಂಟರ ಘಟ್ಟವನ್ನು ಪ್ರವೇಶಿಸಿದರು. ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು 6-2, 6-4, 7-6 (9) ನೇರ ಸೆಟ್‌ಗಳಿಂದ ಬೆನ್ ಶೆಲ್ಟನ್ ಅವರನ್ನು ಮಣಿಸಿದರು.

ಕಳೆದ ವರ್ಷ ಇಲ್ಲಿ ಸೆಮಿಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ವಿರುದ್ಧ ಸೋತಿದ್ದ ಸಿನ್ನರ್, ಸತತ ಮೂರನೇ ಬಾರಿ ಕ್ವಾರ್ಟರ್ ಫೈನಲ್ ತಲುಪಿದರು.

ಐದನೇ ಶ್ರೇಯಾಂಕದ ಡೇನಿಯಲ್ ಮೆಡ್ವೇಡೆವ್ ಅವರೂ ನಿರಾಯಾಸವಾಗಿ ಕ್ವಾರ್ಟರ್‌ಗೆ ಮುನ್ನಡೆದರು. ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಅವರು 10ನೇ ಶ್ರೇಯಾಂಕದ ಗ್ರಿಗರ್ ಡಿಮಿಟ್ರೋವ್ ಅವರನ್ನು ಎದುರಿಸಬೇಕಿತ್ತು. 5-3 ಗೇಮ್‌ಗಳ ಹಿನ್ನಡೆಯಲ್ಲಿದ್ದ ಗ್ರಿಗರ್ ಅವರು ಗಾಯದ ಕಾರಣದಿಂದ ಹೋರಾಟದಿಂದ ಹಿಂದೆ ಸರಿದರು.

ಅಮೆರಿಕ ಓಪನ್ ಮಾಜಿ ಚಾಂಪಿಯನ್ ಮೆಡ್ವೇಡೆವ್ ಅವರು ಸೆಮಿಫೈನಲ್‌ನಲ್ಲಿ ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ.

ನಾಲ್ಕನೇ ಸುತ್ತಿಗೆ ಜೊಕೊವಿಚ್: ಸರ್ಬಿಯಾದ ನೊವಾಕ್ ಜೊಕೊವಿಚ್ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತಿಗೆ ಮುನ್ನಡೆದರು. ಆ ಮೂಲಕ ವಿಂಬಲ್ಡನ್‌ನಲ್ಲಿ 16ನೇ ಬಾರಿ ನಾಲ್ಕನೇ ಸುತ್ತು ಪ್ರವೇಶಿಸಿದ ಸಾಧನೆ ಮಾಡಿದರು.

ಎರಡನೇ ಶ್ರೇಯಾಂಕ ಜೊಕೊವಿಚ್ ಅವರು 4-6, 6-3, 6-4, 7-6 (7/3) ರಿಂದ ಆಸ್ಟ್ರೇಲಿಯಾದ ಅಲೆಕ್ಸಿ ಪೊಪಿರಿನ್ ಅವರನ್ನು ಹಿಮ್ಮೆಟ್ಟಿಸಿದರು.

ಒಟ್ಟಾರೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಜೊಕೊವಿಚ್ 65ನೇ ಬಾರಿ ಅಂತಿಮ 16ನೇ ಸುತ್ತಿಗೆ ಲಗ್ಗೆ ಇಟ್ಟಿದ್ದಾರೆ. ಹಾಗೆಯೇ ವಿಂಬಲ್ಡನ್‌ನಲ್ಲಿ 95ನೇ ಗೆಲುವು ದಾಖಲಿಸಿದರು. ನಾಲ್ಕನೇ ಸುತ್ತಿನಲ್ಲಿ ಅವರು 15ನೇ ಶ್ರೇಯಾಂಕದ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರನ್ನು ಎದುರಿಸಲಿದ್ದಾರೆ.

ಅಗ್ರ ಶ್ರೇಯಾಂಕದ ಶ್ವಾಂಟೆಕ್ ನಿರ್ಗಮನ

ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರು ಶನಿವಾರ ರಾತ್ರಿ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಸೋಲುಂಡು ಹೊರಬಿದ್ದರು. ಯೂಲಿಯಾ ಪುಟಿನ್ಸೇವಾ ಅವರು 3-6, 6-1, 6-2 ರಿಂದ ಪೋಲೆಂಡ್‌ನ ಆಟಗಾರ್ತಿಯನ್ನು ಹೊರದೂಡಿದರು.

ಆ ಮೂಲಕ ವಿಂಬಲ್ಡನ್‌ನ ಹುಲ್ಲಿನಂಕಣದಲ್ಲಿ ಶ್ವಾಂಟೆಕ್ ಅವರು ಮತ್ತೆ ನಿರಾಸೆ ಅನುಭವಿಸಬೇಕಾಯಿತು. 23 ವರ್ಷ ವಯಸ್ಸಿನ ಶ್ವಾಂಟೆಕ್ ಇದುವರೆಗೆ ಗೆದ್ದಿರುವ ಐದು ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಕಳೆದ ತಿಂಗಳಿನದ್ದೂ ಸೇರಿದಂತೆ ನಾಲ್ಕು ಫ್ರೆಂಚ್ ಓಪನ್ ಪ್ರಶಸ್ತಿಗಳು ಕೆಂಪು ಮಣ್ಣಿನ ಅಂಕಣದಲ್ಲಿ ಬಂದಿವೆ. ಇನ್ನೊಂದು ಪ್ರಶಸ್ತಿ ಅಮೆರಿಕ ಓಪನ್‌ನಲ್ಲಿ ಬಂದಿದೆ.

ಜಾಸ್ಮಿನ್ ಕ್ವಾರ್ಟರ್‌ಗೆ: ಏಳನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ (ಇಟಲಿ) ಅವರು ವಿಂಬಲ್ಡನ್‌ನಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್ ತಲುಪಿದರು. ನಾಲ್ಕನೇ ಸುತ್ತಿನ ಪಂದ್ಯದ ವೇಳೆ ಎದುರಾಳಿ ಆಟಗಾರ್ತಿ ಮ್ಯಾಡಿಸನ್ ಕೀಸ್ ಗಾಯದಿಂದ ಹಿಂದೆ ಸರಿದ ಕಾರಣ ಜಾಸ್ಮಿನ್ ಮುಂದಿನ ಸುತ್ತು ಪ್ರವೇಶಿಸಿದರು. 6-3, 6-7 (6/8), 5-5 ಸ್ಕೋರ್ ಗಳಿಸಿದ್ದ ವೇಳೆ ಅಮೆರಿಕದ ಕೀಸ್ ತೊಡೆಯ ನೋವಿಗಾಗಿ ಹಿಂದೆ ಸರಿದರು.

ಬೋಪಣ್ಣ-ಎಬ್ಡೆನ್ ಜೋಡಿಗೆ ಆಘಾತ

ಲಂಡನ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ವಿಂಬಲ್ಡನ್ ಟೂರ್ನಿಯಿಂದ ಹೊರಬಿದ್ದಿದೆ.

ಶನಿವಾರ ನಡೆದ ಪುರುಷರ ಡಬಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಬೋಪಣ್ಣ-ಎಬ್ಡೆನ್ ಜೋಡಿ 3-6, 6-7 (4) ನೇರ ಸೆಟ್‌ಗಳಿಂದ ಶ್ರೇಯಾಂಕರಹಿತ ಜರ್ಮನಿಯ ಹೆಂಡ್ರಿಕ್ ಜೆಬೆನ್ಸ್ ಮತ್ತು ಕಾನ್‌ಸ್ಟಾಂಟಿನೊ ಪ್ರಾಟ್ಜೆನ್ ಜೋಡಿಯ ವಿರುದ್ಧ ಆಘಾತ ಅನುಭವಿಸಿತು.

ಆಸ್ಟ್ರೇಲಿಯನ್ ಓಪನ್ ವಿಜೇತ ಬೋಪಣ್ಣ ಮತ್ತು ಎಬ್ಡೆನ್ ಜೋಡಿಯು ವಿರಾಮದ ನಂತರ ಮೊದಲ ಸೆಟ್ ಅನ್ನು ಜೆಬೆನ್ಸ್ ಮತ್ತು ಪ್ರಾಟ್ಜೆನ್‌ಗೆ ಬಿಟ್ಟುಕೊಟ್ಟಿತು. ಎರಡನೇ ಸೆಟ್ 5-5 ಗೇಮ್‌ಗಳಿಂದ ಸಮಬಲ ವಿದ್ದ ವೇಳೆಯಲ್ಲಿ ಮಳೆ ಪಂದ್ಯಕ್ಕೆ ಅಡ್ಡಿಪಡಿಸಿತು. ನಂತರ ಟೈ ಬ್ರೇಕರ್‌ನಲ್ಲಿ ಜೆಬೆನ್ಸ್ ಮತ್ತು ಪ್ರಾಟ್ಜೆನ್ 4-1 ರಿಂದ ಬೋಪಣ್ಣ-ಎಬ್ಡೆನ್ ಅವರನ್ನು ಸೋಲಿಸಿದರು.

'ರೋಹಿತ್ ಪಡೆಗೆ ಚಾಂಪಿಯನ್ಸ್, ಡಬ್ಲ್ಯುಟಿಸಿ ಟ್ರೋಫಿ'

ನವದೆಹಲಿ (ಪಿಟಿಐ): ಟೆಸ್ಟ್ ಮತ್ತು ಏಕದಿನ ಮಾದರಿಯಲ್ಲಿ ರೋಹಿತ್ ಶರ್ಮಾ ಅವರೇ ಭಾರತ ತಂಡದ ನಾಯಕರಾಗಿ ಮುಂದುವರಿಯಲಿದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಭಾನುವಾರ ಹೇಳಿದ್ದಾರೆ.

ಮುಂಬರುವ ಚಾಂಪಿಯನ್ಸ್ ಟ್ರೋಫಿ ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅನ್ನು ರೋಹಿತ್ ಅವರ ನೇತೃತ್ವದಲ್ಲಿ ಭಾರತ ತಂಡವು ಗೆಲ್ಲಲಿದೆ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದರು.

ಈಚೆಗೆ ರೋಹಿತ್ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿತ್ತು. ಕಪಿಲ್ ದೇವ್ ಮತ್ತು ಮಹೇಂದ್ರಸಿಂಗ್ ಧೋನಿ ನಂತರ ಐಸಿಸಿ ವಿಶ್ವ ಚಾಂಪಿಯನ್ ಟ್ರೋಫಿಯೊಂದನ್ನು ಜಯಿಸಿದ ನಾಯಕ ಎಂಬ ಹೆಗ್ಗಳಿಕೆಗೆ ರೋಹಿತ್ ಪಾತ್ರರಾಗಿದ್ದಾರೆ.

'ಮುಂದಿನ ಹಂತದಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮತ್ತು ಚಾಂಪಿಯನ್ಸ್ ಟ್ರೋಫಿ ಟೂರ್ನಿ ಇವೆ. ರೋಹಿತ್ ಅವರ ನಾಯಕತ್ವದ ಮೇಲೆ ನನಗೆ ಸಂಪೂರ್ಣ ಭರವಸೆ ಇದೆ. ಈ ಟೂರ್ನಿಗಳಲ್ಲಿ ನಾವು ಚಾಂಪಿಯನ್ ಆಗಲಿದ್ದೇವೆ' ಎಂದು ಜಯ್ ಶಾ ಅವರು ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ವಿಡಿಯೊ ಸಂದೇಶದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು. ರೋಹಿತ್ ವಿಶ್ವಕಪ್ ಜಯಿಸಿದ ನಂತರ ಟಿ20 ಮಾದರಿಗೆ ವಿದಾಯ ಘೋಷಿಸಿದ್ದರು.

ಕೊಪಾ ಅಮೆರಿಕ: ಸೆಮಿಗೆ ಉರುಗ್ವೆ

ಲಾಸ್ ವೇಗಾಸ್ (ಎಎಫ್‌ಪಿ): ಉರುಗ್ವೆ ತಂಡವು ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದೆ.

ಶನಿವಾರ ನಡೆದ ರೋಚಕ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಉರುಗ್ವೆ ಪೆನಾಲ್ಟಿ ಶೂಟೌಟ್‌ನಲ್ಲಿ 4-2ರಿಂದ ಬ್ರೆಜಿಲ್ ತಂಡವನ್ನು ಪರಾಭವಗೊಳಿಸಿತು.

ಸೆಮಿಫೈನಲ್‌ನಲ್ಲಿ ಉರುಗ್ವೆ ತಂಡವು ಕೊಲಂಬಿಯಾ ತಂಡವನ್ನು ಎದುರಿಸಲಿದೆ.

ಡೈಮಂಡ್ ಲೀಗ್: ರಾಷ್ಟ್ರೀಯ ದಾಖಲೆ ಮುರಿದ ಸಾಬ್ಳೆ

ಅವಿನಾಶ್ ಸಾಬ್ಳೆ

ಪ್ಯಾರಿಸ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಹತ್ತಿರವಿರುವಂತೆ ಸ್ಟೀಪಲ್‌ಚೇಸ್ ಓಟಗಾರ ಅವಿನಾಶ್ ಸಾಬ್ಳೆ ಸಕಾಲದಲ್ಲಿ ಪ್ರದರ್ಶನದ ಮಟ್ಟದಲ್ಲಿ ಸುಧಾರಣೆ ಕಾಣುತ್ತಿದ್ದಾರೆ. ಭಾನುವಾರ ನಡೆದ ಪ್ರತಿಷ್ಠಿತ ಡೈಮಂಡ್ ಲೀಗ್‌ನಲ್ಲಿ ಅವರು 3000 ಮೀ. ಸ್ಟೀಪಲ್‌ಚೇಸ್ ಓಟವನ್ನು 8 ನಿಮಿಷ 9.91 ಸೆಕೆಂಡುಗಳಲ್ಲಿ ಕ್ರಮಿಸಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಇನ್ನಷ್ಟು ಉತ್ತಮಪಡಿಸಿಕೊಂಡರು. ಅವರು ಆರನೇ ಸ್ಥಾನ ಪಡೆದರು.

29 ವರ್ಷದ ಸಾಬ್ಳೆ ಈ ಹಿಂದೆ 2022ರಲ್ಲಿ ತಮ್ಮ ಹಿಂದಿನ ವೈಯಕ್ತಿಕ ಶ್ರೇಷ್ಠ ಓಟ (8:11.20) ಓಡಿದ್ದರು. ಇಲ್ಲಿ ಒಂದೂವರೆ ಸೆಕೆಂಡು ಅಂತರದಿಂದ ಅದನ್ನು ಸುಧಾರಿಸಿದ್ದಾರೆ.

ತೀವ್ರ ಪೈಪೋಟಿಯ ಸ್ಪರ್ಧೆಯಲ್ಲಿ ಇಥಿಯೋಪಿಯಾದ ಅಬ್ರಹಾಂ ಸಿಮೆ ಅವರೂ ತಮ್ಮ ವೈಯಕ್ತಿಕ ಶ್ರೇಷ್ಠ ಅವಧಿಯಲ್ಲಿ (8:02.36) ದೂರವನ್ನು ಕ್ರಮಿಸಿ ಕೂದಲೆಳೆ ಅಂತರದಲ್ಲಿ ಅಗ್ರಸ್ಥಾನ ಪಡೆದರು. ಕೆನ್ಯಾದ ಅಮೋಸ್ ಸೆರೆಮ್ (8:02.36) ಅವರು ಫೋಟೊಫಿನಿಷ್‌ನಲ್ಲಿ ಎರಡನೇ ಸ್ಥಾನ ಗಳಿಸಿದರು.

2023ರ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ, ಕೆನ್ಯಾದವರೇ ಆದ ಅಬ್ರಹಾಂ ಕಿಬಿವೊಟ್ (8:06.70) ಕಂಚಿನ ಪದಕ ಪಡೆದರು. 2022ರ ಕಾಮನ್‌ವೆಲ್ತ್ ಕೂಟದಲ್ಲಿ ಕಿಬಿವೊಟ್ ಚಿನ್ನ ಪಡೆದಾಗ, ಸಾಬ್ಳೆ ಬೆಳ್ಳಿ ಪದಕ ಗೆದ್ದು-ಕೊಂಡಿದ್ದರು. ಹಾಲಿ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತರಾಗಿರುವ ಸಾಬ್ಳೆ, ರಾಷ್ಟ್ರೀಯ ದಾಖಲೆ ಮುರಿಯುತ್ತಿರುವುದು ಇದು ಹತ್ತನೇ ಸಲ.

ಜೇನಾಗೆ 8ನೇ ಸ್ಥಾನ: ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಕಿಶೋರ್ ಜೇನಾ, ಪುರುಷರ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ 78.10 ಮೀ. ಥ್ರೊದೊಡನೆ ಎಂಟನೇ ಸ್ಥಾನ ಪಡೆದರು. ಅವರ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (87.54) ಮತ್ತು ಈ ವರ್ಷದ ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ತೋರಿದ ಸಾಧನೆಗಿಂತ (80.84 ಮೀ) ಇದು ಸಾಕಷ್ಟು ಕಡಿಮೆಯಾಗಿದೆ.

ಮಹುಚಿಖ್, ಕಿಪ್ಯೆಗೊನ್ ವಿಶ್ವದಾಖಲೆ: ಉಕ್ರೇನ್‌ನ ಯಾರೋಸ್ಲಾವಾ ಮಹುಚಿಖ್ ಮತ್ತು ಕೆನ್ಯಾದ ಫೇಯ್ತ್ ಕಿಪ್ಯೆಗೊನ್ ಅವರು ಕ್ರಮವಾಗಿ ಮಹಿಳೆಯರ ಹೈಜಂಪ್ ಮತ್ತು 1500 ಮೀಟರ್ ಓಟದಲ್ಲಿ ವಿಶ್ವದಾಖಲೆ ನಿರ್ಮಿಸಿದರು.

ವಿಶ್ವ ಚಾಂಪಿಯನ್ ಆಗಿರುವ 37 ವರ್ಷದ ಮಹುಚಿಖ್ 2.10 ಮೀಟರ್ ಸಾಧನೆ ಮಾಡಿದರು. 1987ರಲ್ಲಿ ರೋಮ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್ ಷಿಪ್‌ನಲ್ಲಿ ಬಲ್ಗೇರಿಯಾದ ಸ್ಟೆಫ್ಕಾ ಕೋಸ್ಟಾಡಿನೋವಾ (2.09 ಮೀಟರ್) ನಿರ್ಮಿಸಿದ್ದ ದಾಖಲೆಯನ್ನು ಸರಿಸಿದರು.

ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಕಿಪ್ಯೆಗೊನ್ ಅವರು ತಮ್ಮದೇ ದಾಖಲೆಯನ್ನು ಸುಧಾರಿಸಿದರು. ಅವರು ಇಲ್ಲಿ 3 ನಿಮಿಷ 49.04 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಅವರು ಕಳೆದ ವರ್ಷದ ನಿರ್ಮಿಸಿದ್ದ ದಾಖಲೆಗಿಂತ ಇಲ್ಲಿ 0.07 ಸೆಕೆಂಡ್ ಬೇಗ ಗುರಿ ಮುಟ್ಟಿದರು.

Exchange Powered By Wheels of Trust^^ ಅತ್ಯುತ್ತಮ^^ ರೀಸೇಲ್ ವ್ಯಾಲ್ಯೂಗಾಗಿ ಸ್ಕ್ಯಾನ್ ಮಾಡಿ
INDIA'S FIRST 5 YEAR WARRANTY *Conditions apply
WORLD'S NO.1 22 YEARS IN A ROW MOTORCYCLE & SCOOTER COMPANY
i3S Technology Idle-Stop-Start System
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^^Based on offers from empaneled dealers on Wheels of Trust platform. $Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22) ^Finance scheme is at the sole discretion of financiers & subject to its respective terms & conditions. Offer is for limited period or till stock lasts. Offers amount & combination of offers may vary for model/variant & states. #HIPL stands for High Intensity Position Lamp. ~Mileage as per third party testing under standard conditions. ^Basis data available in public forum for products in 125cc Motorcycle segment.
SCAN TO KNOW MORE ASK FOR XTEC
AUTHORISED DEALERS: BENGALURU - PEENYA: SAI HERO - PH: 9289922830. MAGADI ROAD: POORNA HERO - PH: 9289923212. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. HOSUR ROAD: RT KRISHNA HERO - PH: 9289923177. BYATARAYANAPURA: BIMAL HERO - PH: 9289922863. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS - PH: 9606922534. JP NAGAR: SAI HERO - PH: 99002 36280. KANAKPURA ROAD: SAI HERO - PH: 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO - PH: 8762860999. RT NAGAR: BIMAL HERO - PH: 9535327710. DODDABALLAPURA: BIMAL HERO - PH: 9742202125. TUMKUR: SAI HERO - PH: 9289922986. B.H.ROAD: SAI HERO - PH: 7022752841. TIPTUR: SAI HERO - PH: 9164840456. KUNIGAL: SAI HERO - PH: 7022752858. KOLAR: SAI BALAJI HERO - PH. 9821745024.